ಅಧ್ಯಕ್ಷರು :— ವಿಧೇಯಕವನ್ನು ಮಂಡಿಸಲಾಗಿದೆ. - ಅನುಬಂಧ I

ಬಿ) ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

<u>1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ, 2000.</u>

+ ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) :— ಮಾನ್ಯ ಅಧ್ಯಕ್ಷರೆ, ಬಹುಶಃ ಕರ್ನಾಟಕ ಪ್ರಜಾತಂತ್ರದ ಇತಿಹಾಸದಲ್ಲಿ ಇದೊಂದು ಅತ್ಯಂತ ಕರಾಳವಾದ ಮಸೂದೆಯೆಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಸರ್ಕಾರದವರು ಅಧಿಕಾರವನ್ನು ಎಲ್ಲ ಹಂತದಲ್ಲೂ ಕೈಗೆತ್ತಿಕೊಳ್ಳುತ್ತಿದ್ದಾರೆ. ಅಧಿಕಾರ ಕೇಂದ್ರೀಕೃತವಾಗಬೇಕೆನ್ನುವ ಹಿನ್ನೆಲೆಯಲ್ಲಿ ಇದು ನಡೆದಿದೆ. ಈ ಕಾಯಿದೆಯನ್ನು ತರಲಿಕ್ಕೆ ಮೂಲಭೂತವಾದ ಯಾವುದೇ ಸಂದರ್ಭ ಬಂದಿರಬಹುದೇ ಹೊರತು, ಪ್ರಾಯಶಃ ಇದರಿಂದಾಗಿ ಯೂನಿವರ್ಸಿಟಿಯ ವ್ಯವಸ್ಥೆ ಸರಿಯಾಗಬೇಕು, ಭ್ರಷ್ಟಾಚಾರ ನಿರ್ಮೂಲನವಾಗಬೇಕು ಎನ್ನುವುದು ಕಾಣಸುತ್ತಿಲ್ಲ. ನಾನು ಪತ್ರಿಕೆಗಳಲ್ಲಿ ಓದಿದ ಪ್ರಕಾರ ಬಹುಶಃ ಕಳೆದಬಾರಿ ಮೈಸೂರು ಮತ್ತು ಧಾರವಾಡ ಕೃಷಿ ವಿಶ್ವವಿದ್ಯಾನಿಲಯಗಳ ಕುಲಪತಿಗಳನ್ನು ನೇಮಕ ಮಾಡುವ ಸಂದರ್ಭದಲ್ಲಿ ಒಂದು ಸಣ್ಣ ಜಿಜ್ಞಾಸೆಯುಂಟಾಗಿ ಈಒಂದು ಕಾಯಿದೆಯನ್ನು ತರುವುದಕ್ಕೆ ಪ್ರೇರಣೆಯಾಗಿದೆ. ಇದನ್ನು ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ಕುಲಪತಿಗಳನ್ನು ನೇಮಕ ಮಾಡುವ ಸಂದರ್ಭದಲ್ಲಿ ಸ್ವಾರ್ಥ ರಾಜಕೀಯವನ್ನು ಉಪಯೋಗ ಮಾಡಿಕೊಳ್ಳಬೇಕೆನ್ನುವ ರೀತಿಯಲ್ಲಿ ಇದಕ್ಕೆ ಹಿಂದಿನಿಂದ ಪ್ರೇರಕ ಶಕ್ತಿಯಾಗಿದೆ. ಇಂತಹ ಒಂದು ದೊಡ್ಡ ಕರಾಳ ಮಸೂದೆಯನ್ನು ತರುವುದು ಖಂಡಿತಾ ಒಳ್ಳೆಯದಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನನಗೆ ಗೊತ್ತಿರುವ ಹಾಗೆ ಉನ್ನತ ಶಿಕ್ಷಣದ ಬಗ್ಗೆ ನಮ್ಮ ರಾಜ್ಯದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಆಲೋಚನೆ ಮಾಡಿ ಈ ಮಸೂದೆಯ ಬಗ್ಗೆ ನಾವು ಚರ್ಚೆ ಮಾಡಬೇಕಾಗುತ್ತದೆ. ಸಾಧಾರಣವಾಗಿ ನಮಗೆ ಗೊತ್ತಿರುವ ಹಾಗೆ ಉನ್ನತ ಶಿಕ್ಷಣ ಬಗ್ಗೆ ಖಾಸಗೀಕರಣವಾಗಬೇಕೆಂದು ಈ ದಿಶೆಯಲ್ಲಿ ಹೆಚ್ಚಿನ ಮಾತುಕತೆ ನಡೆಯುತ್ತಿದೆ. ಕರ್ನಾಟಕ ರಾಜ್ಯದ ಬಜೆಟ್‌ನಲ್ಲಿ ಉನ್ನತ ಶಿಕ್ಷಣಕ್ಕೆ ಶೇಕಡ 15ರಷ್ಟು ಅನುದಾನವನ್ನು ಕಡಿತ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆ. ಉನ್ನತ ಶಿಕ್ಷಣಕ್ಕೆ ಸಿಗುವಂತಹ ಸರ್ಕಾರದ ಸೌಲಭ್ಯಗಳು ಮತ್ತು ಸರ್ಕಾರದ ಪ್ರೋತ್ಸಾಹ ಕಡಿಮೆಯಾದ ಹಿನ್ನೆಲೆಯಲ್ಲಿ ಈ ರೀತಿಯ ಮಸೂದೆಯನ್ನು ತಂದಿರುವುದರಿಂದ ಮತ್ತಷ್ಟು ತೊಂದರೆಯಾಗುತ್ತದೆ. ಇದರಿಂದ ಒಳ್ಳೆಯದಾಗುವ ಸಂದರ್ಭಗಳು ಇಲ್ಲ. ನಮಗೆ ಯುಜಿಸಿಯವರು ಏನು ಹೇಳುತ್ತಾರೆಂದು ಗೊತ್ತಿದೆ. ಸರ್ಕಾರದ ಹಸ್ತಕ್ಷೇಪವಿಲ್ಲದ ಸ್ವಾಯತ್ತ ಸಂಸ್ಥೆಗಳಿಗೆ ಹೆಚ್ಚಿನ ಅನುದಾನವುಂಟು ಎಂದು ಯುಜಿಸಿಯವರು ಹೇಳುತ್ತಾರೆ. ಈ ಕಾನೂನು ಬದಲಾವಣೆಯಾದರೆ ಯುಜಿಸಿಯಿಂದ ಸಿಗುವಂತಹ ಗ್ರಾಂಟನ್ನು ತಪ್ಪಿಸಿಕೊಳ್ಳುವಂತಹ ಸಂದರ್ಭಗಳು ಆಗಬಹುದು. ಈ ರೀತಿಯ ರಾಜಕೀಯ ಹಸ್ತಕ್ಷೇಪದಿಂದ ಯೂನಿವರ್ಸಿಟಿ ಗ್ರಾಂಟ್ ಕಮೀಷನ್ ವಿಶ್ವವಿದ್ಯಾನಿಲಯಗಳಿಗೆ ಗ್ರಾಂಟನ್ನು ಕಡಿಮೆ ಮಾಡುವ

ಸಂದರ್ಭಗಳಾಗಬಹುದು. ಆ ದೃಷ್ಟಿಯಿಂದ ಈ ಒಂದು ಮಸೂದೆ ಅಷ್ಟು ಉತ್ತಮವಾದ ಮಸೂದೆಯಲ್ಲವೆಂದು ನನ್ನ ಭಾವನೆ. ಇತ್ತೀಚಿನ ದಿವಸಗಳಲ್ಲಿ ಬೆಳೆಯುತ್ತಿರುವ ಒಂದು ಅಂಶ ಏನೆಂದರೆ, ಯಾವುದೇ ರಾಜ್ಯದಲ್ಲಿ ಆಡಳಿತದಲ್ಲಿರುವ ಸರ್ಕಾರ ಯಾವುದೇ ಸಂಸ್ಥೆಗಳಿಗೆ ಏನಾದರೂ ಆರ್ಥಿಕ ಸಹಾಯ ಮಾಡುತ್ತಿದೆ ಅಂದರೆ ಅದರ ಮೇಲೆ ಹಿಡಿತ ಬೇಕೆನ್ನುವ ಭಾವನೆಯಿಂದ ಇದು ನಡೆಯುತ್ತಿದೆ. ಇತ್ತೀಚಿನ ದಿವಸಗಳಲ್ಲಿ ಇದು ಭಾರಿ ಚುರುಕಾಗಿ ಬೆಳೆಯುತ್ತಿದೆ. ಯಾವುದೇ ಆರ್ಥಿಕ ಸಹಾಯ ಕೊಡುವಂತಹ ವ್ಯವಸ್ಥೆ ಇದ್ದಾಗ ಪೂರ್ತಿ ಅದನ್ನು ನಮ್ಮ ಹಿಡಿತದಲ್ಲಿಟ್ಟುಕೊಳ್ಳಬೇಕೆನ್ನುವುದು ಇನ್ನು ಹಲವಾರು ಕಾರಣಗಳು ಇರಬಹುದು. ಏಕೆಂದರೆ ಒಂದು ರೀತಿಯಲ್ಲಿ ಪರೋಕ್ಷವಾಗಿ ತಮ್ಮ ಅಧಿಕಾರ ಜಾಲವನ್ನು ಪೂರ್ತಿ ವಿಸ್ತರಣೆ ಮಾಡುವುದರಿಂದ ಅದು ನಮ್ಮ ಹತೋಟಿಯಲ್ಲಿ ಇರಲಿ ಎನ್ನುವ ಭಾವನೆಯಿರಬಹುದು. ಅಷ್ಟರಮಟ್ಟಿಗೆ ನಾವು ಚಿಂತನೆ ಮಾಡಬೇಕಾಗಿದೆ. ಈ ಮಸೂದೆ ಬಂದಿರುವ ಹಿನ್ನೆಲೆಯಲ್ಲಿ ನಾವು ಆಲೋಚನೆ ಮಾಡಬೇಕು. ಇವತ್ತು ಪ್ರಮುಖವಾಗಿ ಎದ್ದು ಕಾಣುತ್ತಿರುವ ಅಂಶ, ರಾಜ್ಯಪಾಲರ ಹಕ್ಕನ್ನು ಮೊಟಕುಗೊಳಿಸತಕ್ಕದ್ದಾಗಿದೆ. ಇದು ಎಷ್ಟರ ಮಟ್ಟಿಗೆ ಸೂಕ್ತ? ಮಾತೆತ್ತಿದರೆ ಸಮನಾಂತರ ಉತ್ತರಗಳು ಬರುತ್ತವೆ; ಆಂಧ್ರಪ್ರದೇಶದಲ್ಲಿ ಇದು ಮಂಡನೆಯಾಗಿದೆ, ಆಂಧ್ರಪ್ರದೇಶದಲ್ಲಿ ಆಗಿರುವ ಹಿನ್ನೆಲೆಯಲ್ಲಿ ಇಲ್ಲಿ ಕೂಡ ಮಾಡುವುದು ಸೂಕ್ತವೆನ್ನುವ ಭಾವನೆಗಳು ಬರುತ್ತಿವೆ. ಆದರೆ ನಾವು ಆತ್ಮಾವಲೋಕನ ಮಾಡಿಕೊಳ್ಳುವಂತಹ ಸಂಗತಿಗಳು ಅಂದರೆ ಸಂವಿಧಾನಾತ್ಮಕವಾಗಿ ಒಂದು ವಿಶೇಷ ಸ್ಥಾನಮಾನವಿರುವಂತಹ ರಾಜ್ಯಪಾಲರ ಹುದ್ದೆ, ಇಷ್ಟು ದಿವಸ ಅತ್ಯಂತ ಗೌರವಯುತವಾಗಿ ಕಂಡುಕೊಂಡಂತಹ ಹುದ್ದೆ, ಯಾವುದೇ ಸಂದರ್ಭಗಳಲ್ಲಿ ಯೂನಿವರ್ಸಿಟಿಗಳಲ್ಲಿ ಅವರ ರಾಜಕಾರಣ ಆಗಲಿಲ್ಲ. ಈಗ ಮಾತ್ರ ಏಕೆ ಆಗಬೇಕು? ಹಿಂದೆ ಕೂಡ ಶಿಫಾರಸ್ಸುಗಳನ್ನು ಅವರು ಪರಿಶೀಲನೆ ಮಾಡಿ ಅವರೇ ಒಂದು ಕಮಿಟಿಗಳನ್ನು ನೇಮಕ ಮಾಡುತ್ತಿದ್ದರು. ಆ ಕಮಿಟಿ ಶಿಫಾರಸ್ಸುಗಳನ್ನು ಮಾಡುತ್ತಿತ್ತು. ಆ ಶಿಫಾರಸ್ಸಿನ ಆಧಾರದ ಮೇಲೆ ಎಲ್ಲಾ ನಡೆಯುತ್ತಿತ್ತು. ಇವತ್ತು ಸರ್ಕಾರದ ಕಡೆಯಿಂದ ಕಮಿಟಿಯಾಗಬೇಕೆಂದು ಹೇಳಿದರೆ ನಾವೇನು ಹೇಳಬೇಕು? ಸರ್ಕಾರದವರು ಇಂತಹವರನ್ನು ನೇರವಾಗಿ ನೇಮಕ ಮಾಡಿಯೆಂದು ಹೇಳುವಂತಹ ರೀತಿಯಲ್ಲಿ ಈಒಂದು ವ್ಯವಸ್ಥೆಗಳನ್ನು ಮಾಡಿದ್ದಾರೆ. ಮಾತೆತ್ತಿದರೆ ಶ್ರೀನವನೀತರಾವ್ ಕಮಿಟಿ ರಿಪೋರ್ಟ್‌ನ ಆಧಾರದ ಮೇಲೆ ಇದನ್ನು ಮಾಡಿದ್ದೇವೆಂದು ಹೇಳುತ್ತಾರೆ. ಮಾನ್ಯ ಸೋಮಶೇಖರ್‌ರವರು ಈ ಮಸೂದೆಯನ್ನು ಸ್ವಾಗತ ಮಾಡುವಂತಹ ಕಾಲದಲ್ಲಿ ಹಲವಾರು ವಿಶ್ಲೇಷಣೆಗಳನ್ನು ಮಾಡಿದರು. ಮಾನ್ಯ ಸೋಮಶೇಖರ್‌ರವರು 16 ಜನರ ವಿದ್ಯಾಕ್ಷೇತ್ರದಲ್ಲಿ ಅನುಭವವಿರುವವರ ಕಮಿಟಿಯನ್ನು ಅವರು ಯೋಗ್ಯರು ಅನ್ನಿಸಿದರೆ ಮಾತ್ರ ಅಂತಹವರ ಒಂದು ಉನ್ನತಮಟ್ಟದ ಕಮಿಟಿಯನ್ನು ನೇಮಕ ಮಾಡಿದ್ದರು, ಅದು ಸರಿಯೆಂದು ಅನ್ನಿಸುತ್ತದೆ. ವಿದ್ಯಾಕ್ಷೇತ್ರದಲ್ಲಿ ಅನುಭವವಿರುವಂತಹ ಬಹಳ ಪ್ರತಿಭಾವಂತ ವ್ಯಕ್ತಿಗಳ ಒಂದು ಕಮಿಟಿಯನ್ನು ಮಾಡಿ ಅವರ ಶಿಫಾರಸ್ಸುಗಳನ್ನು

ಪಡೆದುಕೊಳ್ಳುವ ಪ್ರಯತ್ನ ಮಾಡಿದರು. ಅವರೇನು ಪ್ರಯತ್ನಗಳನ್ನು ಮಾಡಿದ್ದರು, ತಾವು ಆ ರೀತಿಯ ಪ್ರಯತ್ನಗಳನ್ನು ಮಾಡಿದ್ದೀರಾ? ನನಗನ್ನಿಸುತ್ತದೆ, ತಾವು ನೇರವಾಗಿ ಅವುಗಳನ್ನೆಲ್ಲವನ್ನು ಬದಿಗಿಟ್ಟು ಮಾಡುವಂತಹ ಕೆಲಸವನ್ನು ಮಾಡಿದ್ದೀರಿ. ಅಕಾಡೆಮಿಕ್ ಕೌನ್ಸಿಲ್ ಜೊತೆ ಸೆನೆಟ್‌ನ ವಿಲೀನ, ಇದರಲ್ಲಿ ಯಾರಿಗೆ ಅವಕಾಶವಾಗುತ್ತದೆ? ನಿಮ್ಮ ಆಕ್ಟ್‌ನಲ್ಲಿ ಏನು ಹೇಳುತ್ತೀರಿ? ನಿಮ್ಮ ನಿರ್ದೇಶಕರು, ಶಿಕ್ಷಕರ ಪ್ರತಿನಿಧಿಗಳು ಮಾತ್ರ ಇರಬೇಕೆಂದು ಹೇಳುತ್ತೀರಿ. ನಿಮ್ಮ ನಿರ್ದೇಶಕರು ಯಾರು? ನೀವು ಹೇಗೆ ಹೇಳುತ್ತೀರಿ? ಬೆಳಗಿನ ಹಾಲನ್ನು ತೋರಿಸಿ ಇದು ಕಪ್ಪು, ಬಿಳಿ ಅಲ್ಲವೆಂದು ಒಪ್ಪಿಕೊಳ್ಳುವಂತಹ ಜನಗಳನ್ನು ನಾಮನಿರ್ದೇಶನ ಮಾಡುತ್ತೀರಿ. ನಿಮ್ಮ ಆಜ್ಞೆಗಳನ್ನು ಪಾಲಿಸುವ ಜನಗಳನ್ನು ಅಲ್ಲಿ ನೇಮಕ ಮಾಡುತ್ತೀರಿ. ಶಿಕ್ಷಕರ ಪ್ರತಿನಿಧಿಗಳು ಮಾತ್ರ ಒಂದು ವೇಳೆ ಉಪ-ಕುಲಪತಿಗಳನ್ನು ಆಯ್ಕೆ ಮಾಡಿದರೆ, ಕಮಿಟಿ ಶಿಫಾರಸ್ಸಿನ ಆಧಾರದ ಮೇಲೆ ಆಯ್ಕೆಯಾದ ಉಪ-ಕುಲಪತಿ ಸರ್ವಾಧಿಕಾರಿಯಾದರೆ ನಾಳೆ ಶಿಕ್ಷಕರ ಗತಿಯೇನು? ಶಿಕ್ಷಕರು ಯಾವುದೇ ವಿಚಾರವನ್ನು ರೈಸ್ ಮಾಡಿದಾಗ ಬೇಕಾದ ವ್ಯವಸ್ಥೆಗಳನ್ನು ಮಾಡುವುದಕ್ಕೆ ಸಾಧ್ಯವುಂಟು. ಇದನ್ನು ಕೂಡ ಆಲೋಚನೆ ಮಾಡಬೇಕಾಗಿದೆ, ಇದು ವಾಸ್ತವಿಕ ಸಂಗತಿ. ವಿವಿಧ ಕ್ಷೇತ್ರಗಳಲ್ಲಿರುವವರು ನಿಮ್ಮ ಆಕ್ಟ್ ಪ್ರಕಾರ ಬರುವಹಾಗೆ ಇಲ್ಲ. ಬೇರೆ ಬೇರೆ ಭಾಗಗಳಿಂದ ಬರುತ್ತಿದ್ದರೂ ವಿದ್ಯಾಕ್ಷೇತ್ರದಲ್ಲಿ ಅವರ ಕೊಡುಗೆ ಏನು ಎನ್ನುವ ಬಗ್ಗೆ ಚರ್ಚೆ ಮಾಡುವ ಸಂಗತಿಯಿತ್ತು. ಇದು ಸರಿಯಲ್ಲ, ಪ್ರಜಾಪ್ರಭುತ್ವಕ್ಕೆ ಅತ್ಯಂತ ದೊಡ್ಡ ಕೊಡಲಿ ಏಟು ಕೊಡುವಂತಹ ವ್ಯವಸ್ಥೆ. ಈ ರೀತಿ ಚುನಾವಣೆಯನ್ನು ರದ್ದುಗೊಳಿಸುವಂತಹ ಅದು ಸಿಂಡಿಕೇಟ್ ಇರಬಹುದು, ಅಕಾಡೆಮಿಕ್ ಕೌನ್ಸಿಲ್ ಇರಬಹುದು ನಾಮಿನೇಷನ್ ಮಾಡುವುದು ಸೂಕ್ತವಾದ ವಿಚಾರವಲ್ಲ. ಇದು ಭ್ರಷ್ಟಾಚಾರಕ್ಕೆ ನಾಂದಿಯಾಗುತ್ತದೆ; ಭ್ರಷ್ಟಾಚಾರವನ್ನು ತೆಗೆದುಹಾಕುತ್ತೇವೆಂದು ಸರ್ಕಾರದವರು ಹೇಳಿದರು; ನಾನು ಕೇಳುತ್ತೇನೆ, ಭ್ರಷ್ಟಾಚಾರ ಇಲ್ಲದಂತಹ ಕ್ಷೇತ್ರಗಳು ಎಷ್ಟಿವೆ? ಎಲ್ಲಾ ಕಡೆ ಭ್ರಷ್ಟಾಚಾರ ಇದೆಯೆಂದು ನಾವು ಹೇಳುವುದಲ್ಲ, ಅದು ಸಾಮಾನ್ಯ ಜನರು ಮಾತನಾಡುವಂತಹ ಸಂಗತಿ. ದೊಡ್ಡ ಕಳ್ಳತನ ಮಾಡಿದ್ದಾರೆ, ಸಣ್ಣ ಕಳ್ಳತನ ಮಾಡಿದ್ದಾರೆಂದು ಹೇಳುವಂತಹ ಜಿಜ್ಞಾಸೆಯಾಗಿದೆ. ಯಾರಾದರೂ ಹೇಳಿದರೆ ಚುಪಾರ್ ಎಂದು ಹೇಳುವಂತಹ ರೀತಿಯಲ್ಲಿ ಆಯ್ಕೆ ಮಾಡುವ ಸಂದರ್ಭಗಳು ಬಂದಿವೆ. ಈ ರೀತಿಯಲ್ಲಿ ತಾವು ಭ್ರಷ್ಟಾಚಾರ ನಿರ್ಮೂಲನದ ಹೆಸರಿನಲ್ಲಿ ರಾಜಕೀಯ ಮಾಡಿದರೆ, ನಾಮನಿರ್ದೇಶನವಾದವರು ಅಥವಾ ಇನ್ನೊಬ್ಬರು ಇದನ್ನೆಲ್ಲ ಮಾಡುವುದಕ್ಕೆ ಸಾಧ್ಯವಿಲ್ಲವೇ? ಈ ಹಿನ್ನೆಲೆಯಲ್ಲಿ ತಾವು ಯೋಚನೆ ಮಾಡಬೇಕು. ಇನ್ನೊಂದು ಮಾತನ್ನು ಅವರು ಹೇಳಿದ್ದಾರೆ. ಮಾತೆತ್ತಿದರೆ ಪ್ರತಿಯೊಂದನ್ನು ಕೂಡ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಮಾಡುತ್ತೇವೆಂದೂ, ಇದೊಂದು ಹೊಸ ಪದ್ಧತಿಯೆಂದೂ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದವರಿಗೆ ಆದ್ಯತೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ನಿಜವಾಗಿ ಅವರಿಗೆ ಕೊಡಲೇಬೇಕು, ಇವತ್ತು ಸಾಮಾಜಿಕ ನ್ಯಾಯ ಅವರಿಗೆ ಸಿಗಬೇಕು,

ಅದರಲ್ಲಿ ಎರಡು ಮಾತಿಲ್ಲ. ನಾಮಕರಣ ಮಾಡುವ ಉದ್ದೇಶ ಏನಿದೆ ಇದು ಎಷ್ಟರ ಮಟ್ಟಿಗೆ ನಿಮ್ಮ ಈಡಿ ಪ್ರಭಾವ ಬೀರುತ್ತದೆ ಅದನ್ನು ನಾವು ನೋಡಬೇಕು. ಇದು ಏನಾಗುತ್ತದೆಂದರೆ, ಇಡೀ ವಿಶ್ವವಿದ್ಯಾನಿಲಯದ ಅವ್ಯವಸ್ಥೆಗೆ ನಾಂದಿಯಾಗಬಾರದು ಎನ್ನುವ ಭಾವನೆ ನನ್ನದು. ಈ ಹಿನ್ನೆಲೆಯಲ್ಲಿ ಖಂಡಿತವಾಗಿ ಇವೊಂದು ಮಸೂದೆ ಪ್ರಜಾತಂತ್ರದ ವ್ಯವಸ್ಥೆಯಲ್ಲಿ, ಉತ್ತಮ ರೀತಿಯಲ್ಲಿ ವಿಶ್ವವಿದ್ಯಾನಿಲಯಗಳಲ್ಲಿ ಆಡಳಿತ ಮಾಡುವುದಕ್ಕೆ ಸಾಧ್ಯವಿಲ್ಲದ ಸಂಗತಿಯಾಗುತ್ತದೆ. ನಾನು ಒಪ್ಪಿಕೊಳ್ಳುತ್ತೇನೆ, ಎಷ್ಟೋ ಸಂದರ್ಭಗಳಲ್ಲಿ ನನಗೆ ಗೊತ್ತಿದೆ, ಚುನಾವಣೆ ಸರ್ಕಾರಕ್ಕೆ ಅನಿವಾರ್ಯ ಇದ್ದೇ ಇರುತ್ತದೆ, ಎಲ್ಲರಿಗೂ ಅಕಾಮಡೇಟ್ ಮಾಡಬೇಕು. ರಾಜಕೀಯ ವ್ಯವಸ್ಥೆಯಲ್ಲಿ ಎಲ್ಲರಿಗೂ ಯಾವುದಾದರೂ ಒಂದು ಸ್ಥಾನದಲ್ಲಿರಬೇಕು, ಇದನ್ನು ನಾವು ಎಲ್ಲಾ ಕ್ಷೇತ್ರಗಳಲ್ಲಿ ನೋಡುತ್ತಿದ್ದೇವೆ. ಆದರೆ ವಿದ್ಯಾಕ್ಷೇತ್ರದಲ್ಲಿ ಇದು ಖಂಡಿತಾ ಉತ್ತಮ ಸಂಪ್ರದಾಯವಾಗುವುದಿಲ್ಲ. ಆದಕಾರಣ ಇದು ಸ್ವೀಕಾರ ಮಾಡುವಂತಹ ಮಸೂದೆಯಲ್ಲ. ಕನಿಷ್ಠಪಕ್ಷ ತಾವು ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿ, ಇದರ ಸಾಧಕಬಾಧಕಗಳನ್ನು ಪರಿಶೀಲನೆ ಮಾಡುವ ಒಂದು ವ್ಯವಸ್ಥೆಯನ್ನು ಮಾಡಿ. ಮಸೂದೆಗಳನ್ನು ಇಲ್ಲಿ ಮಂಡಿಸಿದಾಗ ಅದರ ಬಗ್ಗೆ ಸಾರ್ವತ್ರಿಕವಾಗಿ ವಿರೋಧಗಳು ವ್ಯಕ್ತವಾದಾಗ ಅಂತಹವುಗಳನ್ನು ಜಂಟಿ ಪರಿಶೀಲನಾ ಸಮಿತಿ ಸಭೆಗೆ ಕಳುಹಿಸಲಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು, ಬಹಳ ಸಂತೋಷ; ಕೋ-ಆಪರೇಷನ್ ಬಿಲ್ ತರಬಾರದೆಂದು ಸಾರ್ವಜನಿಕ ಅಭಿಪ್ರಾಯವಿತ್ತು. ಆ ಬಿಲ್ಲನ್ನು ತರಬೇಕೆಂದು ಕೆಲವರ ಇಚ್ಛೆಯಿತ್ತು. ಇದನ್ನು ತರಬಾರದೆಂದು ಸಾರ್ವತ್ರಿಕ ವಲಯಗಳ ಒತ್ತಡ ಬಂದಾಗ ವಿರೋಧಪಕ್ಷಗಳವರು ಕೂಡ ಇದು ಸಾರ್ವಜನಿಕರ ಚರ್ಚೆಯ ವಸ್ತುವಾಗಿದೆ. ಇದರ ಬಗ್ಗೆ ಸಾರ್ವಜನಿಕರ ಭಾವನೆಗಳನ್ನು ಕ್ರೋಢೀಕರಣ ಮಾಡುವುದು ಸೂಕ್ತವೆಂದು ಹೇಳಿದರು. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಇವತ್ತು ಕೂಡ ಮಾನ್ಯ ಮಂತ್ರಿಗಳು ತಾವು ತುಂಬಾ ಪ್ರತಿಭಾನ್ವಿತರು, ತಮಗೆ ಇದರ ವಿಚಾರಗಳೆಲ್ಲ ಗೊತ್ತಿದೆ. ದಯವಿಟ್ಟು ಇದರ ಬಗ್ಗೆ ಇನ್ನೊಮ್ಮೆ ಆಲೋಚನೆ ಮಾಡಿ. ಆಲೋಚನೆ ಮಾಡುವುದಕ್ಕೆ ಕಾಲ ಇನ್ನೂ ಮಿಂಚಿಲ್ಲ. ಪತ್ರಿಕೆಗಳಲ್ಲಿ ಬರುವಂಥ ವಿಚಾರಗಳು, ವಾಸ್ತವಿಕವಾಗಿ ಜನರು ಆಡುವ ಮಾತುಗಳು ಇದನ್ನೆಲ್ಲ ನೋಡಿದರೆ ನಿಜವಾಗಿ ಇದನ್ನು ಒಂದು ಸಾರ್ವಜನಿಕ ಚರ್ಚೆಯ ವಸ್ತುವನ್ನಾಗಿ ಮಾಡಿ ಅದರಿಂದ ಬಂದಂಥ ವಿಚಾರಗಳನ್ನು ಕ್ರೋಢೀಕರಣ ಮಾಡುವುದರ ಮೂಲಕ ನಂತರ ಇದನ್ನು ಚರ್ಚೆಗೆ ಎತ್ತಿಕೊಳ್ಳುವ ಪ್ರಯತ್ನ ಮಾಡಬಹುದು. ಎಲ್ಲೆಲ್ಲಿ ಏನೇನು ತೊಂದರೆಗಳು ಇವೆ, ಏನೇನು ಅವ್ಯವಸ್ಥೆ ಆಗಿದೆಯೆಂಬುದನ್ನು ನೋಡಿ, ಕನಿಷ್ಠ ಇದನ್ನು ಏನಿಲ್ಲದಿದ್ದರೂ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಆದರೂ ರೆಫರ್ ಮಾಡಬೇಕೆಂಬ ವಿಚಾರವನ್ನು ಹೇಳುತ್ತಾ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎ. ರಾಮದಾಸ್ (ಕೃಷ್ಣರಾಜ) :— ಸನ್ಮಾನ್ಯ ಅಧ್ಯಕ್ಷರೇ, ಇವತ್ತು ವಿಶೇಷವಾಗಿ ವಿದ್ಯಾಕ್ಷೇತ್ರದಲ್ಲಿ ತಮ್ಮದೇ ಆದಂಥ ಒಂದು ಕೊಡುಗೆಯನ್ನು ಕೊಟ್ಟಿರುವಂಥ ರಾಜ್ಯದ ಉನ್ನತ ಶಿಕ್ಷಣ ಸಚಿವರು ಒಂದು ಸಮಗ್ರವಾದಂಥ ಬದಲಾವಣೆಯನ್ನು ತರುವಂಥ ಒಂದು ಬಿಲ್‌ನ್ನು ಸದನದಲ್ಲಿ ಇಡುತ್ತಿದ್ದಾರೆ ಎನ್ನುವಂಥ ಆಸೆ ನಮ್ಮ ಮನಸ್ಸಿನಲ್ಲಿ ಬಹಳ ದಿವಸಗಳಿಂದ ಇತ್ತು. 1976ರಲ್ಲಿ ಬಂದಂಥ ಸಮಗ್ರವಾದಂಥ ಈ ಮಸೂದೆ ಏನಿತ್ತು ಅದರಲ್ಲಿ ಇರುವಂಥ ಲೋಪಗಳು ಏನಿವೆ ಅವನ್ನು ಸರಿಮಾಡುತ್ತಾರೆ ಎನ್ನುವಂಥ ಆಸೆಯ ಅಂಕುರ ನಮ್ಮ ಮನಸ್ಸಿನಲ್ಲಿ ಇತ್ತು. ಆದರೆ ಇವತ್ತು ಸಂಪೂರ್ಣವಾಗಿ ಎಲ್ಲವನ್ನೂ ಕೂಡ ವಿರೋಧ ಮಾಡುವುದು ನಮ್ಮ ಕರ್ತವ್ಯವೇನೂ ಅಲ್ಲ. ವಿರೋಧ ಮಾಡಬೇಕು ಎನ್ನುವಂಥ ಭಾವನೆಯೂ ಇಲ್ಲ. ಆದರೆ ನಿಜವಾಗಿ ವಿದ್ಯಾಕ್ಷೇತ್ರವನ್ನು ರಾಜಕೀಯದಿಂದ ಹೊರತಾಗಿ ಇಡುವಂಥ ಒಂದು ವ್ಯವಸ್ಥೆ ಇಲ್ಲಿ ಯಾವ ರೀತಿ ಆಗಬೇಕು ಎನ್ನತಕ್ಕಂಥ ಕೆಲವು ವಿಚಾರಗಳನ್ನು ಮಾತ್ರ ತಮ್ಮ ಮುಂದೆ ಇಡುವುದಕ್ಕೆ ಬಯಸುತ್ತೇನೆ. ಕಾರಣ ಇವತ್ತು ಯಾವ ಉದ್ದೇಶಕ್ಕೋಸ್ಕರ ಈ ಮಸೂದೆಯನ್ನು ತಂದಿದ್ದೇವೆ ಎಂದು ತಾವು ಮಂಡಿಸಿದಂಥ ಸಂದರ್ಭದಲ್ಲಿ ಹೇಳಿದ್ದೀರಿ. ಇದು ಶ್ರೀ ನವನೀತರಾವ್ ಅವರ ಒಂದು ವರದಿಯ ಆಧಾರದ ಮೇಲೆ ಇದನ್ನು ಮಾಡುತ್ತಿದ್ದೇವೆ ಎಂದು ತಾವು ಹೇಳಿದ್ದೀರಿ, ಬಹಳ ಸಂತೋಷ. ಈ ಶಿಕ್ಷಣ ಕ್ಷೇತ್ರದಲ್ಲಿ ಸಮಗ್ರವಾದ ಬದಲಾವಣೆ ಆಗಬೇಕೆಂಬುದನ್ನು ನಾವೆಲ್ಲರೂ ಕೂಡ ಒಪ್ಪುತ್ತೇವೆ. ಆ ವರದಿಯಲ್ಲಿ ಇದ್ದಂಥ ಎಲ್ಲ ಅಂಶಗಳನ್ನೂ ಕೂಡ ತಾವು ಈ ಮಸೂದೆಯಲ್ಲಿ ತಂದಿದ್ದರೆ ಎಲ್ಲವನ್ನೂ ಕೂಡ ನಾವು ಸ್ವಾಗತ ಮಾಡುತ್ತಿದ್ದೆವು. ಆದರೆ ಇವತ್ತು ನಿಮಗೆ ಬೇಕಾದ ಅಂಶಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು, ಅಲ್ಲಿ ಪ್ರಗತಿಪರವಾದಂಥ ಅಂಶಗಳನ್ನು ಕೈಬಿಡುವ ವ್ಯವಸ್ಥೆ ಏಕೆ ಆಗಿದೆ? ಇದು ಇಂದು ಪ್ರಶ್ನಾರ್ಥಕವಾಗಿ ನಮ್ಮ ಮುಂದೆ ಇದೆ. ಇವತ್ತು ಅವರು ಹೇಳಿರುವಂಥ ವಿಚಾರಗಳಲ್ಲಿ ಒಂದು ಬಹಳ ಪ್ರಮುಖವಾದದ್ದು; ಎಲ್ಲಿಯೂ ಕೂಡ ಸೆನೆಟ್ ಬೇಡ ಎನ್ನುವ ಮಾತನ್ನು ಹೇಳಿರಲಿಲ್ಲ; ಅಕಾಡೆಮಿಕ್ ಕೌನ್ಸಿಲ್ ಮತ್ತು ಸೆನೆಟ್ ಎರಡನ್ನೂ ಕೂಡ ಸೇರಿಸುವ ವಿಚಾರ ಅಲ್ಲಿ ಕೊಟ್ಟಿದ್ದರು. ಅವು ಪ್ರಗತಿದಾಯಕ ವಿಚಾರಗಳು. ಅದರ ಬಗ್ಗೆ ನಾನು ಮುಂದೆ ಹೇಳುತ್ತೇನೆ. ಎರಡನೆಯದು, ಹೀಗೆ ಹೇಳಿದಂಥ ಸಮಯದಲ್ಲೂ ಕೂಡ ಸರ್ಕಾರದ ವತಿಯಿಂದ ಪ್ರತಿ ಮೂರು ವರ್ಷಗಳಿಗೆ ಒಂದು ಬಾರಿ ಗ್ರ್ಯಾಂಟ್ ಕೊಡುವ ವಿಚಾರದಲ್ಲಿ ಕನಿಷ್ಠಪಕ್ಷ ಹತ್ತು ಪರ್ಸೆಂಟ್ ಹೆಚ್ಚಿಗೆ ಕೊಡಬೇಕು ಎನ್ನುವಂಥ ಮಾತು ಕೂಡ ಅದರಲ್ಲಿ ಇತ್ತು. ಆದರೆ ಅದಕ್ಕೆ ತದ್ವಿರುದ್ಧವಾಗಿ ಬಜೆಟ್‌ನಲ್ಲೇ ಶೇಕಡಾ 15 ಭಾಗ ಹಣವನ್ನು ಕಡಿತ ಮಾಡುವಂಥ ವ್ಯವಸ್ಥೆ ಸರ್ಕಾರದಿಂದ ಆಗಿದೆ. ಇನ್ನೊಂದು ಅವರೇ ಹೇಳಿದಂಥ ಮಾತಿನ ಪ್ರಕಾರ 80 ಪರ್ಸೆಂಟ್ ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳು ಕೊನೆಯಪಕ್ಷ 2001ನೇ ಇಸವಿಯೊಳಗಾದರೂ ಕೂಡ ಅಟಾನಮಸ್ ಆಗಬೇಕು ಎನ್ನುವಂಥಾದ್ದು. ಕೊನೆಯಪಕ್ಷ 80 ಪರ್ಸೆಂಟ್ ಅಲ್ಲಿಯ ವ್ಯವಸ್ಥೆಗಳು,

ಆಡಳಿತ, ಇವೆಲ್ಲವೂ ಕೂಡ ಅಟಾನಮಸ್ ಆಗಬೇಕೆಂಬ ಮಾತನ್ನು ಅವರು ಹೇಳಿದ್ದಾರೆ. ಆದರೆ ಅಟಾನಮಸ್ ಆಗಿರುವಂಥ ಸಂಸ್ಥೆಗಳನ್ನು ಮತ್ತೆ ಸರ್ಕಾರದ ಆಡಳಿತದಲ್ಲಿ ಒಳಪಡಿಸುವಂಥ, ಅದಕ್ಕೆ ತದ್ವಿರುದ್ಧವಾದ ರೀತಿಯಲ್ಲಿ ಈ ಬಿಲ್‌ನಲ್ಲಿ ಬಂದಿದೆಯೆನ್ನುವ ಪ್ರಮುಖವಾದ ವಿಚಾರವನ್ನು ಹೇಳುತ್ತಾ, ಗ್ಯಾಟ್ ಒಪ್ಪಂದಕ್ಕೆ ಹಿಂದಿನ ಕೇಂದ್ರ ಸರ್ಕಾರದ ಮಾನ್ಯ ಮನಮೋಹನಸಿಂಗ್ ಅವರು ಸಹಿ ಮಾಡಿದರು. ಈಗಾಗಲೇ ನಾವು ರೈತರ ಬಗ್ಗೆ ಅನ್ಯಾಯವಾಗಿರುವುದಕ್ಕೆ ದೊಡ್ಡ ಕೂಗನ್ನು ಕೇಳುತ್ತಿದ್ದೇವೆ. 2004ನೇ ವರ್ಷದಿಂದ ಇದೇ ಸದನದಲ್ಲಿ ಒಂದು ದೊಡ್ಡ ಕೂಗನ್ನು ನಾವು ಕೇಳುತ್ತಾ ಯಾವುದು ಗ್ಯಾಟ್ ಒಪ್ಪಂದ ಪ್ರಕಾರದಲ್ಲಿ ಹೈಯರ್ ಎಜ್ಯುಕೇಶನ್ ಇದೆ, ಅದಕ್ಕೂ ಕೂಡ ಹೊರದೇಶದವರು ಕೂಡ ಪಾರ್ಟಿಸಿಪೇಟ್ ಮಾಡುವುದಕ್ಕೆ ಇಲ್ಲಿ ಮುಕ್ತವಾದ ಅವಕಾಶ ಇರುವುದರಿಂದ ಅದರ ಬಗ್ಗೆ ನಾವು ಯೋಚನೆ ಮಾಡೋಣ. ಇವತ್ತು ಕನ್ವೆನ್‌ಶನಲ್ ಎಜ್ಯುಕೇಶನ್ ನಾವು ಏನು ಕೊಡುತ್ತಿದ್ದೇವೆ, ಅದಕ್ಕೆ ಸಂಬಂಧಪಟ್ಟಹಾಗೆ ವಿದ್ಯಾರ್ಥಿಗಳ ಸಂಖ್ಯೆ ಕೂಡ ದಿನೇದಿನೇ ಕಡಿಮೆಯಾಗುತ್ತಿದೆ. ಅದರ ಜೊತೆಗೆ ಡಿಸ್ಟೆನ್ಸ್ ಎಜ್ಯುಕೇಶನ್ ಏನು ನಾವು ಕೊಡುತ್ತಿದ್ದೇವೆ ಅದಕ್ಕೆ ವಿಶೇಷವಾಗಿ ಐ.ಟಿ. ಟೆಕ್ನಾಲಜಿಗಳು, ಹೊಸ ಹೊಸ ಟೆಕ್ನಾಲಜಿಗಳು ಬರುತ್ತಿದ್ದಹಾಗೆ ದೂರದಿಂದ ವಿದ್ಯೆಯನ್ನು ಕಲಿಯುವಂಥ ವ್ಯವಸ್ಥೆ ನಮ್ಮಲ್ಲಿ ಇರುವ ಸಂದರ್ಭದಲ್ಲಿ ನಾವು ಈ ಒಂದು ಸಮಗ್ರವಾದ ವಿಚಾರದ ಬಗ್ಗೆ ಚಿಂತನೆ ಮಾಡುವ ಅವಶ್ಯಕತೆ ಇದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಶ್ರೀ ನವನೀತರಾವ್ ಅವರೂ ಕೂಡ ಎಲ್ಲಾ ವಿಚಾರಗಳನ್ನು ಹೇಳುವಂಥ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಒಂದು ಯೂನಿಟರಿ ವಿಶ್ವವಿದ್ಯಾನಿಲಯವನ್ನಾಗಿ ಪರಿವರ್ತನೆ ಮಾಡಿ, ಹಾಗೂ ಬಹಳ ಖ್ಯಾತಿಯನ್ನು ಹೊಂದಿರುವಂಥ ಇವತ್ತಿಗೂ ಕೂಡ ಇಡೀ ವಿಶ್ವದಲ್ಲೇ ತನ್ನದೇ ಆದಂಥ ಗೌರವವನ್ನು ಘನತೆಯನ್ನು ಹೊಂದಿರುವಂಥ ಮೈಸೂರು ವಿಶ್ವವಿದ್ಯಾನಿಲಯವನ್ನು ಒಂದು ಫೆಡರಲ್ ಯೂನಿವರ್ಸಿಟಿಯಾಗಿ ಮಾಡಿ ಇದನ್ನು ವಿವಿಧ ಕೇಂದ್ರಗಳ ನಿರ್ವಹಣೆ ಮಾಡುವುದರ ಜತೆಗೆ ಪ್ರಾಪಂಚಿಕವಾಗಿ ಅಂಥ ಒಂದು ವಿಶ್ವವಿದ್ಯಾನಿಲಯವನ್ನಾಗಿ ಮಾಡುವುದರ ಜೊತೆಗೆ, ಪ್ರಪಂಚದ, ಕೇಂದ್ರದ ಹಣವನ್ನು ಸಂಪೂರ್ಣವಾಗಿ ತೆಗೆದುಕೊಳ್ಳುವುದರ ಜೊತೆಗೆ ಇದನ್ನು ಒಂದು ವರ್ಲ್ಡ್ ಯೂನಿವರ್ಸಿಟಿಯಾಗಿ ಮಾಡಬೇಕೆಂಬ ಸಲಹೆಯನ್ನು ಕೂಡ ಅವರು ಕೊಟ್ಟಿದ್ದಾರೆ. ಈ ಸಲಹೆ ಬಹಳ ಪ್ರಮುಖವಾದದ್ದು. ಇಂತಹ ಸಲಹೆಗಳ ಬಗ್ಗೆ ನಾವು ಚಿಂತನೆ ಮಾಡಬೇಕಾದ ಕೆಲಸವನ್ನು ಇದರಲ್ಲಿ ಮಾಡಿಲ್ಲ. ಅದರ ಬದಲು ನೀವು ಏನು ಹೇಳಿದ್ದೀರಿ ಎಂದರೆ, ನಿಮ್ಮ ಮುಂದಿನ ಹೆಜ್ಜೆಯನ್ನು ಇಡುವುದಕ್ಕೆ ಹೊರಟಿದ್ದೀರಿ; ಒಂದು ಪ್ರಮುಖವಾದ ಮಾತನ್ನು ಹೇಳಿ ಈ ವಿಚಾರವನ್ನು ನಾನು ಮುಗಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ತುಂಬಾ ನೋವಿನಿಂದ ಈ ಮಾತನ್ನು ನಾನು ಹೇಳಬೇಕಾಗಿದೆ. ವಿಶೇಷವಾಗಿ ವಯಸ್ಸಿನ ಬೇಧವಿಲ್ಲದೆ ಇವತ್ತು ಕಾಲೇಜುಗಳಿಗೆ ಹೋಗುವ ಹಂತದಲ್ಲಿರುವ ಬಾಲಕ ಮತ್ತು ಬಾಲಕಿಯರೇನಿದ್ದಾರೆ,

ಅವರು ಶಿಸ್ತು, ಸಂಯಮವನ್ನು ಕಳೆದುಕೊಂಡಿರುವುದರ ಜೊತೆಗೆ ಇವತ್ತು ಫ್ಯಾಷನ್ ಇರುವಂತಹುದು, ಪಾಶ್ಚಾತ್ಯ ಸಂಸ್ಕೃತಿಗೆ ಮಾರುಹೋಗುತ್ತಿರುವ ಕಾರಣಕ್ಕೆ ಇವತ್ತು ವಿಶ್ವವಿದ್ಯಾನಿಲಯದ ವಾತಾವರಣ ಹಾಳಾಗಿದೆ. ಈ ದೃಷ್ಟಿಯಿಂದ ಬಿಗಿಯನ್ನು ತರುವುದರ ಸಲುವಾಗಿ ಮತ್ತು ಅವರಲ್ಲಿ ಶಿಸ್ತನ್ನು ತರುವಂಥ ದೃಷ್ಟಿಯಿಂದ ಪೊಲೀಸ್ ಪವರ್ಸನ್ನು ಯೂನಿವರ್ಸಿಟಿ ಕ್ಯಾಂಪಸ್ ಒಳಗಡೆ ಸೆಕ್ಯುರಿಟಿ ಫೋರ್ಸ್‌ನ್ನು ಕೊಡಬೇಕು. ಈ ಮೂಲಕ ಶಿಸ್ತನ್ನು ತರಬೇಕೆಂಬ ವಿಚಾರವನ್ನು ಅವರ ವರದಿಯಲ್ಲಿ ಬಹಳ ಒತ್ತಿ ಹೇಳಿದ್ದಾರೆ. ಇದರ ಬಗ್ಗೆ ಎಲ್ಲಿಯೂ ಕೂಡ ಪ್ರಸ್ತಾಪ ಕಾಣುತ್ತಿಲ್ಲ. ಆದರೆ ಒಂದು ಸಂತೋಷದ ವಿಷಯವೆಂದರೆ, ಶಿಕ್ಷಕರಿಗೆ, ವಿಶೇಷವಾಗಿ ಶಿಕ್ಷಣ ಕ್ಷೇತ್ರದಲ್ಲಿರುವವರು ಯಾರು ಟೀಚಿಂಗ್ ಫ್ಯಾಕಲ್ಟಿಯಲ್ಲಿದ್ದಾರೆ, ಅವರಲ್ಲಿ ಶಿಸ್ತನ್ನು ತರುವ ವ್ಯವಸ್ಥೆ ಮಾಡಿದ್ದೀರಿ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ವಿಶೇಷವಾಗಿ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ತರುವಂಥ ದೃಷ್ಟಿಯ ವಿಚಾರ ಎಲ್ಲಿಯೂ ನಮಗೆ ಕಾಣುತ್ತಿಲ್ಲ. ಅಲ್ಲದೆ ಇನ್ನೊಂದು ವಿಚಾರವನ್ನು ಅಲ್ಲಿ ಹೇಳಿದ್ದಾರೆ. ವಿದ್ಯಾರ್ಥಿ ಕಾಲೇಜಿಗೆ, ವಿಶ್ವವಿದ್ಯಾನಿಲಯಕ್ಕೆ ದಾಖಲಾಗುವ ಸಂದರ್ಭದಲ್ಲಿ ಅವನ ನಡವಳಿಕೆ ಶಿಸ್ತಿಗೆ ಒಳಪಟ್ಟಿರಬೇಕು ಮತ್ತು ಅದಕ್ಕೆ ವಿರುದ್ಧವಾಗಿ ಅವನೇನಾದರೂ ಹೋಗಿದ್ದೇ ಆದರೆ ಎಲ್ಲ ಜವಾಬ್ದಾರಿಗಳಿಗೂ ಕೂಡ ಆತನೇ ಒಳಗಾಗುತ್ತಾನೆ ಎಂದು ಒಂದು ಸಿಗ್ನೇಚರ್‌ನ್ನು ಅಫಿಕ್ಸ್ ಮಾಡಿ ನಂತರ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವಂಥ ವ್ಯವಸ್ಥೆ ಇರಬೇಕು ಎನ್ನುವಂಥ ಹತ್ತಾರು ವಿಚಾರಗಳನ್ನು ಹೇಳಿದ್ದಾರೆ. ಇದರ ಬಗ್ಗೆ ನಮ್ಮ ಚಿಂತನೆ ಹೋದರೆ ಒಳ್ಳೆಯದೆಂಬ ವಿಚಾರವನ್ನು ಹೇಳುತ್ತಾ, ಇವತ್ತು ಸೆಕ್ಷನ್ 10ನ್ನು ಏಕೆ ತಂದಿದ್ದೀರಿ ಎಂದು ನಾನು ಕೇಳುತ್ತೇನೆ. ಇಲ್ಲಿಯವರೆಗೆ ಅದನ್ನು ಅನವಶ್ಯಕವಾಗಿ, ಉದ್ದೇಶಪೂರ್ವಕವಾಗಿ ತಂದಿದ್ದೀರಿ ಎಂದು ನಾನು ಹೇಳುತ್ತಿದ್ದೇನೆ. ಇವತ್ತು ಸೆಕ್ಷನ್ 11(1)ನಲ್ಲಿ ತಾವು ಒಂದು ವಿಚಾರವನ್ನು ಹೇಳಿದ್ದೀರಿ. ಮುಂಚೆ 1976ರ ಆಕ್ಟ್‌ನಲ್ಲಿ ಯಾರನ್ನು ನೇಮಕ ಮಾಡಬೇಕು ಎನ್ನುವಂಥ ವಿಚಾರದಲ್ಲಿ ಗವರ್ನರ್ ಯಾರು ಚಾನ್ಸಲರ್ ಆಗಿದ್ದಾರೆ ಅವರು ಅಲ್ಲಿಗೆ ಬೇಕಾಗಿರತಕ್ಕಂಥವರನ್ನು ನಾಮಿನೇಟ್ ಮಾಡುವ ವ್ಯವಸ್ಥೆ ಇತ್ತು. ಆದರೆ ತಾವು ಒಂದು ಪದವನ್ನು ಸೇರಿಸಿದ್ದೀರಿ- ರಾಜ್ಯಸರ್ಕಾರದ ಶಿಫಾರಸ್ಸಿನ ಮೇರೆಗೆ ಕುಲಪತಿಯು ಕಾಲಕಾಲಕ್ಕೆ ಹೆಸರಿಸಬಹುದಾದಂಥ ವಿಶ್ವವಿದ್ಯಾನಿಲಯದ ಅಂತಹ ಅಧಿಕಾರಿಗಳು, ... ಅಂದರೆ ಸರ್ಕಾರದಿಂದ ಯಾರನ್ನು ಸೂಚಿಸುತ್ತಾರೆ, ಅವರನ್ನು ನಾಮಿನೇಟ್ ಮಾಡಬೇಕು ಎನ್ನುವಂಥ ಪದವನ್ನು ಸೇರಿಸುತ್ತಾ, ಅಲ್ಲಿ ಆಟಾನಮಸ್ ಎಂದು ಏನು ಹೇಳುತ್ತೇವೆ, ಆ ಒಂದು ಚಾನ್ಸಲರ್‌ಗೆ ಇರುವ ಗೌರವ ಏನಿದೆ, ಅವರ ಅಧಿಕಾರ ಮೊಟಕು ಮಾಡುವ ವ್ಯವಸ್ಥೆಯನ್ನು ಇಲ್ಲಿಂದ ಪ್ರಾರಂಭ ಮಾಡಿದ್ದೀರಿ. ಸೆಕ್ಷನ್ 14(2)ರಲ್ಲಿ ತಾವು ಹೇಳುವಂಥ ಸಮಯದಲ್ಲಿ ಯಾರನ್ನು ಸರ್ಚ್ ಕಮಿಟಿಗೆ ನಾಮಿನೇಷನ್ ಮಾಡಬೇಕೆಂದು ಈಗಾಗಲೇ ಹೇಳಿದ್ದೀರಿ. ಉಪಕುಲಪತಿಗಳನ್ನು ನೇಮಕ ಮಾಡುವಂಥ ವಿಚಾರದಲ್ಲಿ ದೊಡ್ಡ ವಿವಾದ ನಮ್ಮ ಮುಂದಿದೆ. ನಿನ್ನೆ ತಾವು ಹೇಳಿದಂಥ ಸಮಯದಲ್ಲಿ

ನಾವು ಎಲ್ಲವನ್ನೂ ಕೂಡ ಮೊಟಕು ಮಾಡಿಲ್ಲ, ಯಾರು ಉಪಕುಲಪತಿಗಳನ್ನು ನೇಮಕ ಮಾಡುವಂಥದ್ದು ಅದು ಇವತ್ತಿಗೂ ಕೂಡ ರಾಜ್ಯಪಾಲರಿಗೇ ಬಿಟ್ಟಿದ್ದೀವಿ ಎನ್ನುವಂಥ ಬಹಳ ಜಾಣತನದ ಉತ್ತರವನ್ನು ಕೊಟ್ಟಿರಿ. ಇಲ್ಲಿ ಪ್ರಮುಖವಾದ ವಿಚಾರವೆಂದರೆ, ಈ ಸರ್ಚ್ ಕಮಿಟಿಯಲ್ಲಿ ರಾಜ್ಯ ಸರ್ಕಾರದ ಒಬ್ಬ ಪ್ರತಿನಿಧಿ ಇರಬೇಕು ಎನ್ನುವಂಥ ಮಾತನ್ನು ತಾವು ಹೆಚ್ಚುವರಿಯಾಗಿ ತೋರಿಸಿದ್ದೀರಿ. ನಾನು ಈ ಸಂದರ್ಭದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರನ್ನು ನೆನಪು ಮಾಡಿಕೊಳ್ಳುತ್ತೇನೆ. ಅವರು ಸೆಕ್ಷನ್ 5ರ ಬಗ್ಗೆ ದಿನಾಂಕ 10-9-1986ರಲ್ಲಿ ಒಂದು ವಿಚಾರವನ್ನು ಹೇಳಿದರು. ಅದರಲ್ಲಿ ಪ್ರಮುಖವಾದದ್ದು ಏನೆಂದರೆ, ಯಾವುದೇ ಕಾರಣಕ್ಕೂ, ಸರ್ಚ್ ಕಮಿಟಿಯಲ್ಲಿ ರಾಜ್ಯ ಸರ್ಕಾರದ ಒಬ್ಬ ಪ್ರತಿನಿಧಿ ಇರಬಾರದು ಎನ್ನುವಂಥ ವಿಚಾರ ಅದನ್ನು ತೆಗೆದುಹಾಕಿದ್ದು ಮೊದಲು ಜನತಾದಳ ಸರ್ಕಾರ ಇದ್ದಂಥ ಸಂದರ್ಭದಲ್ಲಿ. ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಅದನ್ನು ತೆಗೆದುಹಾಕಿದರು. ಅದನ್ನು ಇವತ್ತು ಸೇರಿಸುವುದಕ್ಕೆ ನೀವು ಪ್ರಯತ್ನಮಾಡಿದ್ದೀರಿ. ಅದಕ್ಕೆ ನಾನು ವಿರೋಧ ಮಾಡುವುದಿಲ್ಲ. ಆದರೆ ಅವರು ಇರಬಾರದು ಎನ್ನುವುದು ಮಾತ್ರ ನನ್ನ ಮನಸ್ಸಿನ ಆಸೆ. ಆದರೆ ನಾವು ಹಣವನ್ನು ಕೊಡುತ್ತೇವೆ, ಅದರ ಬಗ್ಗೆ ಸರ್ಚ್ ಕಮಿಟಿಯಲ್ಲಿ ನೋಡುವುದಕ್ಕೆ ಒಬ್ಬರು ಇಲ್ಲವಾದರೆ ಹೇಗೆ ಎಂದು ಸರ್ಕಾರದ ಇರಾದೆ, ಹಾಗೆ ಹೇಳುವುದಾದರೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಪ್ರಮುಖವಾಗಿ ತಾವು ಇಲ್ಲೇ ಒಂದು ವಿಚಾರವನ್ನು ಹೇಳುತ್ತಾ, ಏನು ಸರ್ಚ್ ಕಮಿಟಿಯನ್ನು ನೇಮಕ ಮಾಡುವಂಥ ಸಂದರ್ಭದಲ್ಲಿ ಸಿಂಡಿಕೇಟ್‌ಗೆ ಎರಡು ಪ್ರಾತಿನಿಧ್ಯ ಕೊಟ್ಟಿದ್ದೀರಿ. ಅದರಲ್ಲಿ ಒಂದನ್ನು ತೆಗೆದು ಅಕಾಡೆಮಿಕ್ ಕೌನ್ಸಿಲ್‌ಗೆ ಕೊಟ್ಟಿದ್ದರೆ ಅದನ್ನು ನಾನು ಸ್ವಾಗತ ಮಾಡುತ್ತಿದ್ದೆ. ಅಕಾಡೆಮಿಕ್ ಕೌನ್ಸಿಲ್‌ನಲ್ಲಿ ಇರುವಂಥ ವ್ಯಕ್ತಿ ಕೂಡ ಅದರಲ್ಲಿ ಇರಬೇಕು ಎನ್ನುವಂಥ ವಿಚಾರ ಏನು ಹೇಳಿದ್ದೀರಿ, ಅದನ್ನು ಖಂಡಿತವಾಗಿ ನಾನು ಸ್ವಾಗತ ಮಾಡುತ್ತೇನೆ. ಶೋಧನಾ ಸಮಿತಿಯ ಚೇರ್ಮನ್ನರನ್ನು ನೇಮಕ ಮಾಡುವವರು ಯಾರು? ರಾಜ್ಯ ಸರ್ಕಾರ 5 ಜನರಿರುವ ಶೋಧನಾ ಸಮಿತಿಯನ್ನು ರಚಿಸಿ, ಆ 5 ಜನರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ತಾವೇ ನೇಮಕ ಮಾಡುತ್ತೀರಿ. ರಾಜ್ಯ ಸರ್ಕಾರವು ನೇಮಕ ಮಾಡಿದ 5 ಜನರ ಸಮಿತಿಯಲ್ಲಿ, ಒಬ್ಬರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕಾಗಿದ್ದು, ಅವರಲ್ಲಿ ಯಾರನ್ನು ನೇಮಕ ಮಾಡಬೇಕೆಂಬ ಅಧಿಕಾರ ರಾಜ್ಯಪಾಲರಿಗೆ ಇತ್ತು. ಆದರೆ, ಆ ಅಧಿಕಾರವನ್ನು ಮೊಟಕು ಮಾಡಿ, ರಾಜ್ಯ ಸರ್ಕಾರವೇ ಈ ಸಮಿತಿಗೆ ಅಧ್ಯಕ್ಷರನ್ನು ನೇಮಕ ಮಾಡುವುದಕ್ಕೆ ಹೊರಟಿರುವುದು ತಪ್ಪು, ಎನ್ನುವ ವಿಚಾರವನ್ನು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಸಬ್-ಸೆಕ್ಷನ್ (4)ರಲ್ಲಿ ಶೋಧನಾ ಸಮಿತಿಯ ಮೂರು ಜನಗಳ ಕಾರ್ಯವನ್ನು ಅವರು ತಿಳಿಸುತ್ತಾರೆ. ಇವರಲ್ಲಿ ಒಬ್ಬರನ್ನು ಮುಂಚಿನ ಆಕ್ಟಿನ ಪ್ರಕಾರ ಚಾನ್ಸಲರ್ ನೇಮಕ ಮಾಡುತ್ತಿದ್ದರು. ರಾಜ್ಯಪಾಲರು ಉಪ-ಕುಲಪತಿಯನ್ನು ನೇಮಕ ಮಾಡುತ್ತಿದ್ದರು. ಆದರೆ, ಈಗ ತಂದಿರುವುದು, ತಾವು ನಿನ್ನೆ ಹೇಳಿದಂಥ ಮಾತಿಗೆ ತದ್ವಿರುದ್ಧವಾಗಿದೆ.

"ಶೋಧನಾ ಸಮಿತಿಯ ಮೂರು ವ್ಯಕ್ತಿಗಳ ಒಂದು ಪಟ್ಟಿಯನ್ನು ವರ್ಣಮಾಲೆಯ ಅಕಾರಾದಿ ಪ್ರಕಾರವಾಗಿ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಆ ಪೈಕಿ ಒಬ್ಬರನ್ನು ರಾಜ್ಯ ಸರ್ಕಾರವು ಉಪ-ಕುಲಪತಿಗಳಾಗಿ ನೇಮಕ ಮಾಡಲು ಕುಲಪತಿಗೆ ಶಿಫಾರಸ್ ಮಾಡತಕ್ಕದ್ದು ಮತ್ತು ಅಂತಹ ವ್ಯಕ್ತಿಯನ್ನು ಉಪ-ಕುಲಪತಿಯನ್ನಾಗಿ ನೇಮಕ ಮಾಡತಕ್ಕದ್ದು"

ಎಂದು ಇದೆ. ಅಂದರೆ, ರಾಜ್ಯ ಸರ್ಕಾರದವರು ಅವರಲ್ಲಿ ಯಾರನ್ನು ಉಪ-ಕುಲಪತಿ ಆಗಬೇಕೆಂದು ಸೂಚಿಸುತ್ತಾರೋ ಅವರನ್ನು ರಾಜ್ಯಪಾಲರು ಉಪ ಕುಲಪತಿಗಳನ್ನಾಗಿ ನೇಮಕ ಮಾಡಬೇಕು. ಇದು ನಿಮ್ಮ ಮಸೂದೆಯಲ್ಲಿ ಇರುವಂಥಾದ್ದು. ಇಂತಹ ವ್ಯಕ್ತಿಗಳನ್ನು ನೇಮಕ ಮಾಡಬೇಕೆಂದು ನೀವು ಕಳಿಸಿದ ನಂತರ, ಕೇವಲ ಹೆಸರನ್ನು ಅನೌನ್ಸ್ ಮಾಡುವಂಥ ಕೆಲಸ ಮಾತ್ರ ರಾಜ್ಯಪಾಲರದು, ಅಂದರೆ ಪೋಸ್ಟ್‌ಮನ್ ಕೆಲಸ ಅವರದು, ಅವರದು ಕೇವಲ ರಬ್ಬರ್ ಸ್ಟಾಂಪ್ ಕೆಲಸ ಎಂದು ಏನು ಪತ್ರಿಕೆಗಳು ಬರೆದಿರುತ್ತವೆ, ಅದಕ್ಕೆ ಈ ವಿಷಯ ಪೂರಕವಾದಂಥ ವಿಚಾರವಾಗುತ್ತದೆ. ನಿನ್ನೆ ತಾವು ಹೇಳಿದಂತಹ ಸಂದರ್ಭದಲ್ಲಿ, ಎಲ್ಲಿಯೂ ಕೂಡ ಅವರ ಹಕ್ಕನ್ನು ಕಸಿದುಕೊಂಡಿಲ್ಲವೆನ್ನುವ ಮಾತನ್ನು ಹೇಳಿದಿರಿ. ಸರ್ಕಾರವೇ ವೈಸ್-ಚಾನ್ಸಲರನ್ನು ನೇಮಕ ಮಾಡುವಂಥ ಪೂರ್ಣ ಜವಾಬ್ದಾರಿಯನ್ನು ತೆಗೆದುಕೊಂಡಾಗ ಯೂನಿವರ್ಸಿಟಿಗಳಲ್ಲಿ ರಾಜಕಾರಣ ಪ್ರಾರಂಭವಾಗುತ್ತದೆ. ಇವತ್ತು ಎಲ್ಲಾ ಶಿಕ್ಷಕರೂ ಆ ಗುರುಗಳ ಸ್ಥಾನವನ್ನು ಉಳಿಸಿಕೊಂಡಿದ್ದಾರೆಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇವತ್ತು ರಾಜ್ಯಪಾಲರು ಇದ್ದರೂ ಸಹ, ವೈಸ್-ಚಾನ್ಸಲರನ್ನು ನೇಮಕ ಮಾಡುವಂಥ ಸಂದರ್ಭದಲ್ಲಿ ಶಾಸಕರು ಅಥವಾ ಮಂತ್ರಿಗಳ ಹತ್ತಿರ ಬಂದು, ಶಿಫಾರಸ್ ಪತ್ರ ಕೊಡಿ ಎಂದು ಹೇಳಿ ತೆಗೆದುಕೊಂಡು ಹೋಗುವಂಥ ಪರಿಸ್ಥಿತಿ ನಿರ್ಮಾಣವಾಗಿದ್ದು, ನಾಳೆ ವೈಸ್-ಚಾನ್ಸಲರ್ ನೇಮಕವಾಗುವಾಗ ಆರು ತಿಂಗಳು ಮುಂಚೆಯೇ ಆಕಾಂಕ್ಷಿಗಳೆಲ್ಲರೂ ತಮ್ಮ ಮನೆಯ ಮುಂದೆ, ಬೇರೆ ಬೇರೆ ಮಂತ್ರಿಗಳ ಮನೆಗಳ ಮುಂದೆ ಕೈಕಟ್ಟಿಕೊಂಡು ನಿಂತುಕೊಳ್ಳುವಂಥ ವ್ಯವಸ್ಥೆಯನ್ನು ದಯಮಾಡಿ ತಮ್ಮ ಅವಧಿಯಲ್ಲಿ ಮಾಡುವುದು ಬೇಡ. ಏಕೆಂದರೆ, ಶಿಕ್ಷಣ ಕ್ಷೇತ್ರದಲ್ಲಿ ತಮ್ಮದೇ ಆದ ಸೇವೆಯನ್ನು ಮಾಡಿರುವಂಥ ತಮ್ಮಂಥವರು. ಈ ಬಿಲ್ಲನ್ನು ತರುವಾಗ ಬದಲಾವಣೆಯಾಗಬೇಕು. ರಾಜ್ಯಪಾಲರಿಗೆ ಕೊಟ್ಟಿರುವ ಅಧಿಕಾರವನ್ನು ಮೊಟಕು ಮಾಡಬೇಡಿ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಧ್ಯಾಯ 7ರಲ್ಲಿ ಉಪ-ಕುಲಪತಿಗಳ ವಿಚಾರವನ್ನು ಹೇಳುತ್ತಾ, "ರಾಜ್ಯ ಸರ್ಕಾರವು ಸೂಚಿಸುವ ಸಲಹೆ ಮೇರೆಗೆ, ಕುಲಪತಿಯು ಹೊರಡಿಸಿದ ಆದೇಶದ ಹೊರತು, ಆತನ ಪದದಿಂದ ತೆಗೆದು ಹಾಕತಕ್ಕದ್ದಲ್ಲ" ಅಂದರೆ, ಉದಾಹರಣೆಗೆ ಇವತ್ತು ವೈಸ್-ಚಾನ್ಸಲರ ಮೇಲೆ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಮುಂದಾಗುತ್ತೀರಿ. ವೈಸ್-ಚಾನ್ಸಲರುಗಳು ಮಾಡಿರತಕ್ಕ ಅಕ್ರಮಗಳು ಏನೇನಿವೆ, ಅದಕ್ಕೆ ಸಂಬಂಧಪಟ್ಟಂಥ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಚಾನ್ಸಲರಿಗೆ ಅವರದೇ ಆದ ಅಧಿಕಾರ ಇತ್ತು. ಇವತ್ತು ನಮಗೆಲ್ಲಾ ಗೊತ್ತಿದೆ. ನನ್ನ ಆರು ವರ್ಷದ ಅನುಭವದಲ್ಲೇ ಹೇಳುವುದಾದರೆ, ರಚನೆಯಾಗಿದ್ದ ಎಷ್ಟೋ ವಿಚಾರಣಾ ಆಯೋಗದ

ವರದಿಗಳು ಏನಾಗಿವೆ? ಸರ್ಕಾರದ ಮುಂದೆ ಎಷ್ಟು ತನಿಖಾ ವರದಿಗಳು ಬಿದ್ದಿವೆ? ಆ ವರದಿಗಳ ಮೇಲೆ ಯಾವರೀತಿಯಾದ ಕ್ರಮವನ್ನು ಸರ್ಕಾರದವರು ಕೈಗೊಂಡಿದ್ದಾರೆಂಬುದು ಗೊತ್ತಿದೆ. ಆದರೆ, ವೈಸ್-ಚಾನ್ಸಲರಿಗೆ ವಿರುದ್ಧವಾದಂಥ ಅಲಿಗೇಷನ್ಸ್ ಬಂದಾಗ ವಿಚಾರಣಾ ಆಯೋಗವನ್ನು ತಾವೇ ನೇಮಕ ಮಾಡುತ್ತೀರಿ: ಸಂತೋಷ. ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಮುಖಾಂತರ ವಿಚಾರಣೆ ಮಾಡಿಸುತ್ತೀರಿ; ಇದೆಲ್ಲವೂ ಸರಿ. ಆದರೆ, ಆ ಸಮಿತಿಯ ವರದಿಯನ್ನು ತೆಗೆದುಕೊಂಡು, ತಾವು ನಿರ್ಧಾರ ಮಾಡುವವರೆಗೂ ಚಾನ್ಸಲರ್ ಯಾವುದೇ ಕ್ರಮವನ್ನು ಕೈಗೊಳ್ಳಬಾರದು ಎನ್ನುವಂಥ ವಿಚಾರವೇನಿದೆ, ಅದು ಸರಿಯಲ್ಲ. ಅಂತಹ ವಿಚಾರಗಳಿಗೂ ಕೂಡ ಸರ್ಕಾರ ಮಧ್ಯಪ್ರವೇಶ ಮಾಡುವ ವ್ಯವಸ್ಥೆ ಬೇಡ. ದಯವಿಟ್ಟು ಮುಂಚೆ ಹೇಗಿತ್ತೋ ಅದೇ ರೀತಿಯಲ್ಲಿ ರಾಜ್ಯಪಾಲರಿಗೆ ಅಟಾನಮಸ್ ಆಗಿ ಕ್ರಮವನ್ನು ಕೈಗೊಳ್ಳುವಂಥ ಜವಾಬ್ದಾರಿಯನ್ನು ಬಿಟ್ಟುಬಿಡಬೇಕೆಂಬ ಮಾತನ್ನು ತಮ್ಮ ಮುಂದೆ ಹೇಳುತ್ತಿದ್ದೇನೆ.

ಅಧ್ಯಕ್ಷರು :— ಮಾನ್ಯ ರಾಮದಾಸ್‌ರವರೇ, ನಿಮಗೆ ಮಾತನಾಡಲು ಇನ್ನೂ ಎಷ್ಟು ಕಾಲ ಬೇಕು?..

ಶ್ರೀ ಎ. ರಾಮದಾಸ್ :— ನಮ್ಮ ಪಕ್ಷದಿಂದ ಈ ಕುರಿತು ಸಮಗ್ರವಾದ ವಿಚಾರವನ್ನು ಹೇಳುವಂಥವನು ನಾನೇ ಆಗಿದ್ದೇನೆ. ಈ ಬಿಲ್ಲಿನಲ್ಲಿರತಕ್ಕ ಸೆಕ್ಷನ್‌ಗೆ ಸಂಬಂಧಿಸಿದಂತೆ ಮಾತ್ರ ಹೇಳುತ್ತಿದ್ದು, ಬೇರೆ ಏನನ್ನೂ ಹೇಳುವುದಕ್ಕೆ ನಾನು ಹೋಗುವುದಿಲ್ಲ. ಮತ್ತು ಎಲ್ಲವನ್ನೂ ವಿರೋಧ ಮಾಡುವಂಥ ಮನೋಭಾವವು ನನ್ನದಲ್ಲ. ಏನೇನು ಆಗಬೇಕೆಂಬ ವಿಚಾರಗಳನ್ನು ಮಾತ್ರ ಹೇಳುತ್ತಿದ್ದೇನೆ. ಹಾಗಾಗಿ, ದಯವಿಟ್ಟು ನನಗೆ ಸಮಯದ ಮಿತಿಯನ್ನು ಹಾಕಬೇಡಿ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಸೆಕ್ಷನ್ 25ರಲ್ಲಿ ಪ್ರಮುಖವಾಗಿರತಕ್ಕಂಥಾದ್ದು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು. ಈ ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳನ್ನು ತಾವು ರಚನೆ ಮಾಡುವಂಥ ಸಂದರ್ಭದಲ್ಲಿ, ನಾನು ಆಗಲೇ ಹೇಳಿದಹಾಗೆ ಮೊದಲನೆಯದಾಗಿ ಇದ್ದಂತಹದ್ದು ಸೆನೆಟ್. ಸೆನೆಟ್‌ನ ಪದವನ್ನು ಬಿಟ್ಟು, ಉಳಿಕೆ ಎಲ್ಲವನ್ನೂ ಕೂಡ ತಾವು ಹೇಳಿದ್ದೀರಿ. ಅದರಲ್ಲಿ ಪ್ರಮುಖವಾಗಿ ಸೆನೆಟ್, ಸಿಂಡಿಕೇಟ್, ಅಕಾಡೆಮಿಕ್ ಕೌನ್ಸಿಲ್ ಎಲ್ಲವೂ ಒಂದೇ ರೀತಿಯ ವಿಷಯಗಳನ್ನು ಚರ್ಚೆ ಮಾಡುತ್ತಿರುವಾಗ, ಸೆನೆಟ್ ಏಕೆ ಎಂದು ತಾವು ನಿನ್ನೆ ಹೇಳಿದಿರಿ. ಹಾಗಾದರೆ, ಇಲ್ಲಿ ಒಂದು ಪ್ರಶ್ನೆ ಕಾಡುತ್ತಿರುವುದೇನೆಂದರೆ, ಎಲ್ಲಾ ಕಡೆಗಳಲ್ಲೂ ಒಂದೇ ವಿಷಯ ಕುರಿತು ಚರ್ಚೆಯಾಗುವುದಾದರೆ ನಾನು ಆಗಲೇ ಹೇಳಿದಹಾಗೆ ಅಪ್ಪರ್ ಹೌಸ್‌ನಲ್ಲೂ ಕೂಡ ಈ ಕೆಳಮನೆಯಲ್ಲಿ ಆದಂತೆ, ಅದೇ ಚರ್ಚೆಯಾಗುತ್ತೆ. ಹಾಗಾಗಿ ಮತ್ತೊಂದು ಹೌಸ್ ಏಕೆ, ಎನ್ನುತ್ತೀರಾ? ಸಿಂಡಿಕೇಟ್ ಒಂದೇ ನಿರ್ಣಯವನ್ನು ತೆಗೆದುಕೊಳ್ಳುವುದಾಗುತ್ತದೆ ಎನ್ನುವುದಾದರೆ, ಅಕಾಡೆಮಿಕ್ ಕೌನ್ಸಿಲ್, ಸೆನೆಟ್ ಮುಂತಾದ ಎಲ್ಲಾ ಕಡೆಗಳಿಂದ

ಚುನಾಯಿತರಾಗಿ ಬಂದಂಥ ಪ್ರತಿನಿಧಿಗಳು ಇರುವಂಥ ಸಿಂಡಿಕೇಟ್‌ನಲ್ಲಿ ತಾವು ನಿರ್ಧಾರವನ್ನು ಕೈಗೊಳ್ಳುತ್ತೀರಿ. ಹಾಗಾದರೆ ವಿಧಾನಸಭೆಗೆ 224 ಜನ ಗೆದ್ದು ಬಂದಿದ್ದಾರೆ. ಈ ಪೈಕಿ ಆಡಳಿತ ಪಕ್ಷದಲ್ಲಿರುವವರಿಂದ 40 ಜನರನ್ನು ಆಯ್ಕೆ ಮಾಡಿ, ಸಿಂಡಿಕೇಟ್ ಮಾಡುವ ರೀತಿಯಲ್ಲಿ ಕ್ಯಾಬಿನೆಟ್ ಮಾಡುವುದಾದರೆ, ನೀವೇ ಎಲ್ಲಾ ನಿರ್ಧಾರಗಳನ್ನೂ ಕ್ಯಾಬಿನೆಟ್‌ನಲ್ಲೇ ತೆಗೆದುಕೊಂಡು ಬಿಡಿ. ವಿಧಾನಸಭೆ ಎನ್ನುವುದು ಏಕೆ? ಆಗ ಈ ವಿಧಾನಸಭೆಯ ಅವಶ್ಯಕತೆಯೇ ಇರುವುದಿಲ್ಲ. ಕ್ಯಾಬಿನೆಟ್‌ನಲ್ಲಿ ತೆಗೆದುಕೊಂಡಂತಹ ನಿರ್ಧಾರಗಳೇ ಅಂತಿಮ ಎಂದು ಹೇಳುವುದಾದರೆ, ಈ ವಿಧಾನಸಭೆಯ ಅಧಿವೇಶನದ ಅವಶ್ಯಕತೆ ಇಲ್ಲವೆಂದಾಗುತ್ತದೆ. ತಾವು ಹೇಳಿದಂಥ ರೀತಿಯಲ್ಲಿ, ಅಕಾಡೆಮಿಕ್ ಕೌನ್ಸಿಲ್‌ನಲ್ಲಿ ಕೇವಲ ಅಕಾಡೆಮಿಕ್ ವಿಷಯಗಳು ಮಾತ್ರ ಚರ್ಚೆಯಾಗುವಂಥಾದ್ದು. ಇದಕ್ಕೆ ಸಂಬಂಧಪಟ್ಟಿರುವುದನ್ನು ತಾವೇ ನೋಡಿದ್ದೀರಿ. ನಾನು ಹೆಚ್ಚಿಗೆ ಹೇಳಬೇಕಾದ ಅವಶ್ಯಕತೆ ಇಲ್ಲ. ಅಕಾಡೆಮಿಕ್‌ಗೆ ಸಂಬಂಧಪಟ್ಟಿಹಾಗೆ, ಎಜುಕೇಷನ್ ಸಿಸ್ಟಂಗೆ ಸಂಬಂಧಪಟ್ಟಿಹಾಗೆ ಮತ್ತು ಈ ಸಿಲಬಸ್‌ಗೆ ಸಂಬಂಧಪಟ್ಟಿಹಾಗೆ, ತನ್ನದೇ ಆದಂಥ ಸಬ್ಜೆಕ್ಟ್ ಕಮಿಟಿಗಳೆಲ್ಲವನ್ನೂ ಕನ್ಸಾಲಿಡೇಟ್ ಮಾಡುವಂಥ ವ್ಯವಸ್ಥೆಗಳಾಗಿವೆ. ಆದರೆ, ಸಿಂಡಿಕೇಟ್ ಅಥವಾ ಯಾವುದೇ ಫೈನಾನ್ಶಿಯಲ್ ಟ್ರಾನ್ಸಾಕ್ಷನ್ ಇರಬಹುದು ಅಥವಾ ಅದರ ಬಜೆಟ್ ತಯಾರು ಮಾಡಿದ ನಂತರದಲ್ಲೂ ಕೂಡ, ಅಂತಿಮವಾಗಿ ಸೆನೆಟ್‌ನ ಒಪ್ಪಿಗೆ ಪಡೆದ ನಂತರವೇ, ಸಿಂಡಿಕೇಟ್ ತನ್ನದೇ ಆದಂಥ ಅಪ್ರೂವಲ್ ಪಡೆಯುವುದಕ್ಕೆ ಸಾಧ್ಯವಿದೆ. ಆ ದೃಷ್ಟಿಯಲ್ಲಿ ಇವತ್ತು ಸೆನೆಟ್‌ಗೆ ಇರುವಂಥ ಅಧಿಕಾರದ ವ್ಯಾಪ್ತಿ ಬಹಳ ದೊಡ್ಡದು. ಸೆನೆಟ್‌ನಲ್ಲಿ ಕೇವಲ ಚುನಾಯಿತ ಪ್ರತಿನಿಧಿಗಳು ಇರುತ್ತಾರೆ ಎಂಬ ಒಂದೇ ಒಂದು ಕಾರಣಕ್ಕಾಗಿ ಅದನ್ನು ತೆಗೆಯುವಂಥ ವ್ಯವಸ್ಥೆ ಆಗಬಾರದು ಎನ್ನುವುದನ್ನು ತಮ್ಮ ಮುಂದೆ ಹೇಳುತ್ತೇನೆ. ಇನ್ನು, ಇಲ್ಲಿ ಒಂದು ವಿಚಾರವನ್ನು ಹೇಳುತ್ತಿದ್ದೀರಿ. ಇದು ಏಕೆ ಬಂತೋ ನನಗೆ ಅರ್ಥವಾಗುತ್ತಿಲ್ಲ. ಶ್ರೀ ನವನೀತರಾವ್ ಕಮಿಟಿ ರಿಪೋರ್ಟ್‌ನ ಪ್ರಕಾರ ಟೆಕ್ನಿಕಲ್ ಯೂನಿವರ್ಸಿಟಿ ಮಾಡಿದ್ದೀರಿ. ಅದು ಚೆನ್ನಾಗಿ ನಡೆಯುತ್ತಿದೆ. ಅದರ ಬಗ್ಗೆ ಯಾವುದೇ ರೀತಿಯಾದ ವಿಚಾರವನ್ನು ಹೇಳುವುದಕ್ಕೆ ನಾನು ಇಚ್ಛಿಸುವುದಿಲ್ಲ. ತಾವು ಸೆಕ್ಷನ್ 26(ಸಿ)ನಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶಕರನ್ನು ಅಥವಾ ಜಂಟಿ ನಿರ್ದೇಶಕರನ್ನು ಈ ಸಿಂಡಿಕೇಟ್‌ಗೆ ತರುವಂಥ ವ್ಯವಸ್ಥೆ ಮಾಡಿದ್ದೀರಿ. ಟೆಕ್ನಿಕಲ್ ಯೂನಿವರ್ಸಿಟಿಗೆ ಪ್ರತ್ಯೇಕವಾದ ವಿಶ್ವವಿದ್ಯಾನಿಲಯವೇ ಇದೆ. ಟೆಕ್ನಿಕಲ್ ಕಾಲೇಜುಗಳೆಲ್ಲವೂ ಅದರ ಅಧೀನದಲ್ಲಿ ಬರುತ್ತವೆ. ಹೀಗಿರುವಂಥ ಸಂದರ್ಭದಲ್ಲಿ ಟೆಕ್ನಿಕಲ್ ಯೂನಿವರ್ಸಿಟಿಗೆ, ಅಲ್ಲಿರುವಂಥ ಟೆಕ್ನಿಕಲ್ ಬೋರ್ಡ್ ಡೈರೆಕ್ಟರ್ ಅವಶ್ಯಕತೆ ಏನಿತ್ತು? ಇದು ಅಷ್ಟಕ್ಕೆ ಏನಾದರೂ ಬಂತೆ?...

ಡಾ: ಜಿ. ಪರಮೇಶ್ವರ್:— ಟೆಕ್ನಿಕಲ್ ಯೂನಿವರ್ಸಿಟಿ ಇದ್ದರೂ ಕೂಡ ಎಂ.ಬಿ.ಎ, ಎಂ.ಸಿ.ಎ ಕೋರ್ಸಸ್ ಎಲ್ಲಾ ಟ್ರೆಡಿಷನಲ್ ಯೂನಿವರ್ಸಿಟಿಯಲ್ಲೂ ಇದೆ. ಅದು ಎ.ಐ.ಸಿ.ಟಿ.ಇ ವ್ಯಾಪ್ತಿಯಲ್ಲಿ ಬಂದರೂ ಕೂಡ ಈ ಎಂ.ಸಿ.ಎ ಮತ್ತು ಎಂ.ಬಿ.ಎ.

ಇನ್ನೂ ಕೂಡ ಟ್ರೆಡೀಷನಲ್ ಯೂನಿವರ್ಸಿಟಿಯಲ್ಲಿರುವುದರಿಂದ, ಟೆಕ್ನಿಕಲ್ ಯೂನಿವರ್ಸಿಟಿ ಧೈರ್ಯರು ಬೇಕಾಗುತ್ತಾರೆ ಎಂಬ ಉದ್ದೇಶಕ್ಕೆ ತರಲಾಗಿದೆ.

ಶ್ರೀ ಎ. ರಾಮದಾಸ್ :— ಇನ್ನೊಂದು ವಿಷಯ, ಚುನಾವಣೆ ಬೇಡ- ಸಂತೋಷ. ಆದರೆ, ತಾವೇ ಅಧ್ಯಾಯ 26ರ (ಇ) ನಲ್ಲಿ ಏನು ಹೇಳಿದ್ದೀರಿ? ವಿದ್ಯಾ ವಿಷಯಕ ಪರಿಷತ್ತಿನಿಂದ ಚುನಾಯಿತರಾದಂಥ ಇಬ್ಬರು ಸದಸ್ಯರುಗಳು ಎಂದು ಹೇಳಿದ್ದೀರಿ. ಅದು ಹೊರಗಡೆಯಿಂದ ಚುನಾವಣೆಯಾಗಲೀ ಅಥವಾ ಇಂಟರ್‌ನಲ್ ಚುನಾವಣೆಯಾಗಲೀ, ಎರಡೂ ಒಂದೇ. ಚುನಾವಣೆಯನ್ನೇ ಒಂದು ವ್ಯವಸ್ಥೆ ಎನ್ನುವುದಾದರೆ, ಇವತ್ತು ಅಕಾಡೆಮಿಕ್ ಕೌನ್ಸಿಲ್‌ನಿಂದಲೂ ಕೂಡ ನೀವು ಸಿಂಡಿಕೇಟ್‌ಗೆ ಕಳುಹಿಸುವಂಥ ಸಂದರ್ಭದಲ್ಲಿ ಚುನಾವಣೆ ಪರೋಕ್ಷವಾಗಿ ಆಗುವಂಥ ವ್ಯವಸ್ಥೆ ಇದೆ. ಆ ದೃಷ್ಟಿಯಿಂದ ಇವತ್ತು ನನಗೆ ಅನ್ನಿಸುವುದೇನೆಂದರೆ, ಟೆಕ್ನಿಕಲ್ ಯೂನಿವರ್ಸಿಟಿ ಬಗ್ಗೆ ನೀವು ಹೇಳಿದಿರಿ. ಆದರೆ, ಜನರಲ್ ಯೂನಿವರ್ಸಿಟಿಯಲ್ಲಿ, ಎಲ್ಲಿಯೂ ಕೂಡ ಇವತ್ತು ಮೆಡಿಕಲ್ ಸೈನ್ಸ್‌ಗೆ ಸಂಬಂಧಪಟ್ಟಂತಹಾಗೆ, ಪ್ಯಾರಾಮೆಡಿಕಲ್‌ಗೆ ಸಂಬಂಧಪಟ್ಟಂತಹಾಗೆ ಯಾವುದೇ ಸಬ್ಜೆಕ್ಟ್‌ಗೂ ಕೂಡ ಯಾವುದೇ ಕಾಲೇಜು ಯೂನಿವರ್ಸಿಟಿ ವ್ಯಾಪ್ತಿಯಲ್ಲಿ ಬರುವುದಿಲ್ಲ. ಇಲ್ಲಿ ಪ್ರಮುಖವಾಗಿ ವೈದ್ಯಕೀಯ ಶಿಕ್ಷಣದ ನಿರ್ದೇಶಕರನ್ನು ಸಿಂಡಿಕೇಟ್ ಸದಸ್ಯರೆಂದು ಇಟ್ಟುಕೊಂಡಿದ್ದೀರಿ. ಪ್ರತ್ಯೇಕವಾದ ವಿಶ್ವವಿದ್ಯಾನಿಲಯ ಮಾಡಿದ್ದೀರಿ. ಅದು ಚೆನ್ನಾಗಿ ನಡೆಯುತ್ತಾ ಇದೆ. ಆದರೆ, ಇಲ್ಲಿ ಯಾವುದೇ ನರ್ಸಿಂಗ್ ಕಾಲೇಜ್ ಅಥವಾ ಯಾವುದೇ ಕಾಲೇಜುಗಳು ತಮ್ಮ ವ್ಯಾಪ್ತಿಯೊಳಗೆ ಈ ಆಕ್ಟ್‌ನ ಅಡಿಯಲ್ಲಿ ಬರುವುದಿಲ್ಲ. ಆದರೂ ಕೂಡ ಇವತ್ತು ಡಿ.ಎಂ.ಇ.ರವರನ್ನು ಸಿಂಡಿಕೇಟ್ ಸದಸ್ಯರನ್ನಾಗಿ ಅಳವಡಿಸಿರುವುದು ಏಕೆ ಎಂಬುದು

11.00 ಎ.ಎಂ.

ಇವತ್ತು ಒಂದು ಪ್ರಶ್ನೆಯಾಗಿಯೇ ಉಳಿದಿದೆ. ಹಾಗೆ ಬಾಕಿ ಉಳಿದಂತಹ ಸೆಕ್ಷನ್‌ಗಳಲ್ಲಿ ಹೇಳಿರತಕ್ಕಂಥಾದ್ದರ ಬಗ್ಗೆ ನಮ್ಮದು ಯಾವುದೇ ಅಭ್ಯಂತರವಿಲ್ಲ. ಒಂದು ತಾವು ಹೇಳಿದಂತಹ ಸಂದರ್ಭದಲ್ಲಿ, ವಿದ್ಯಾ ವಿಷಯಕ ಪರಿಷತ್ತು ಏನು ಇದೆ, ಇವತ್ತು ಅಕ್ಯಾಡೆಮಿಕ್ ಕೌನ್ಸಿಲ್ ಇದೆ, ಅಕ್ಯಾಡೆಮಿಕ್ ಕೌನ್ಸಿಲ್‌ಗೆ ಸಂಬಂಧಪಟ್ಟಂತಹಾಗೆ ತಾವು ಡಿಫರೆಂಟ್ ಫ್ಯಾಕಲ್ಟೀಸ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯತೆ ಇರಬೇಕೆನ್ನುವುದು 1976ನೇ ಆಕ್ಟ್‌ನಲ್ಲಿ ಒಂದು ಪದವೀಧರ ಕ್ಷೇತ್ರದಿಂದ, ಮತ್ತೊಂದು ಸ್ನಾತಕೋತ್ತರ ಪದವೀಧರರ ಕ್ಷೇತ್ರದಿಂದ, ಎಲ್ಲವನ್ನು ಸಹ ತಾವು ಸೆಕ್ಷನ್ 10ರಲ್ಲಿ ತಂದಿದ್ದೀರಿ. ಆಮೇಲೆ ಎಸ್.ಸಿ. ಯವರಿಗೆ ಒಂದು ಅವಕಾಶವನ್ನು ಮಾಡಿಕೊಟ್ಟಿದ್ದೀರಿ, ಸ್ತ್ರೀಯರುಗಳಿಗೆ ಒಂದು ಅವಕಾಶವನ್ನು ಮಾಡಿ ಕೊಟ್ಟಿದ್ದೀರಿ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಒಬ್ಬ ವಿದ್ಯಾರ್ಥಿಯನ್ನು ಪದವಿ ವ್ಯಾಸಂಗದಿಂದ, ಒಬ್ಬ ವಿದ್ಯಾರ್ಥಿಯನ್ನು ಸ್ನಾತಕೋತ್ತರ ಪದವಿಯಿಂದ ಹಾಗೂ

ವೃತ್ತಿ ಪದವಿಯಿಂದ ಒಬ್ಬ ವಿದ್ಯಾರ್ಥಿಯನ್ನು, ಎಲ್ಲವನ್ನೂ ಕೂಡ ಯಾವುದೇ ಚುನಾವಣೆ ಇಲ್ಲದೆ ತಾವೇ ನೇಮಕ ಮಾಡುತ್ತೀರಿ ಎನ್ನುವುದಾದರೆ, ಯಾವ ಆಧಾರದ ಮೇಲೆ ನೇಮಕ ಮಾಡುತ್ತೀರಿ? ನಾನು ನಿನ್ನೆ ಈ ವಿಷಯವನ್ನು ಹೇಳಲು ಹೊರಟಾಗ ತಾವು ತುಂಬಾ ಬೇಸರ ಮಾಡಿಕೊಂಡಿರಿ. ಇವತ್ತು ವಿದ್ಯಾರ್ಥಿಗಳು ಆಯಾಯಾ ಫ್ಯಾಕಲ್ಟಿಯಿಂದ ಚುನಾವಣೆಗಳಲ್ಲಿ ಗೆದ್ದು ಬರುತ್ತಿದ್ದಾರೆ. ಅವರು ಪ್ರಾತಿನಿಧ್ಯತೆಯನ್ನು ವಹಿಸುತ್ತಾ ಇರುತ್ತಾರೆ. ಆಯಾಯಾ ಡಿಫರೆಂಟ್ ಫ್ಯಾಕಲ್ಟೀಸ್‌ನಲ್ಲಿ ಬರುವಂತಹವರು, ಯಾರು ಚುನಾಯಿತರಾಗಿ ಅವರ ಕ್ಷೇತ್ರದಲ್ಲಿ ಕೆಲಸ ಮಾಡುವಂತಹವರು ಅವರ ಕ್ಷೇತ್ರದಲ್ಲಿ ಅವರ ಪ್ರೀತಿಯನ್ನು ಸಂಪಾದನೆ ಮಾಡಿರುತ್ತಾರೋ, ಅವರು ಚುನಾಯಿತರಾಗಿ ಬರುತ್ತಿದ್ದಾರೆ, ಅವರ ಪ್ರಾತಿನಿಧ್ಯತೆ ಈ ಒಂದು ಅಕ್ಯಾಡೆಮಿಕ್ ಕೌನ್ಸಿಲ್‌ನಲ್ಲಿದೆ. ಸಂಪೂರ್ಣವಾಗಿ ಎಲ್ಲವನ್ನೂ ತಾವೇ ನೇಮಕ ಮಾಡಲು ಹೊರಟರೆ ಯಾರನ್ನು ನೇಮಕ ಮಾಡುತ್ತೀರಿ? ನಾನು ಆಗಲೇ ಹೇಳಿದಂತೆ ಎಲ್ಲೂ ಎನ್.ಎಸ್.ಯು.ಐ.ನಲ್ಲಿರುವಂತಹ ಒಬ್ಬ ವಿದ್ಯಾರ್ಥಿಯನ್ನು ನೇಮಕ ಮಾಡಲಿಕ್ಕೋಸ್ಕರ ಮಾಡಿರುವಂತಹ ಒಂದು ಪ್ರಾವಿಜನ್ ಅಂತ ನಾನು ಹೇಳಲೇಬೇಕಾಗುತ್ತದೆ.

ಶ್ರೀ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮುಂದೆ ಓದಿ ನೋಡಬೇಕು. At least one shall be woman. It is purely on the basis of merit. ಇವತ್ತಿಗೂ ಕೂಡ ವಿದ್ಯಾರ್ಥಿಗಳಿಗೆ ನಾವು ಏನು ಅಕ್ಯಾಡೆಮಿಕ್ ಕೌನ್ಸಿಲಿಗೆ ನಾಮಿನೇಟ್ ಮಾಡುತ್ತೇವೆ ಅದನ್ನು ವೈಸ್ ಚಾನ್ಸಲರ್‌ರವರು ಮಾಡುತ್ತಾರೆ It is purely on the basis of merit, but not on the basis of election etc., ಇವತ್ತಿಗೂ ಅದು ಇರತಕ್ಕಂಥಾದ್ದಾಗಿದೆ.

ಶ್ರೀ ಎ. ರಾಮದಾಸ್ :— ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳುತ್ತಿದ್ದೇನೆಂದರೆ, ಯಾವ ಸೆನೆಟ್‌ಗೆ ಫ್ಯಾಕಲ್ಟೀಸ್‌ಗಳಿಂದ ಚುನಾವಣೆಗಳು ನಡೆಯುತ್ತಾ ಇತ್ತಲ್ಲ, ಚುನಾವಣೆಗಳು ನಡೆಯುತ್ತಿರುವುದು ಈ ಉದ್ದೇಶಗಳಿಗೋಸ್ಕರವಾಗಿ. ನೀವು ಏನು ತಂದಿದ್ದೀರಿ. ಡಿಫರೆಂಟ್ ಫ್ಯಾಕಲ್ಟೀಸ್‌ನಲ್ಲಿ ಪ್ರಾತಿನಿಧ್ಯ ಇರಬೇಕೆನ್ನುವ ವಿಚಾರವನ್ನು ಇಟ್ಟುಕೊಂಡೇ ಸೆನೆಟ್‌ನಲ್ಲಿ ಚುನಾವಣೆ ನಡೆಯುತ್ತಿತ್ತು ಎನ್ನುವಂತಹ ವಿಚಾರವನ್ನು ನಾನು ಹೇಳಲು ಹೊರಟಿರುವುದು; ಇಂತಹ ಸಂದರ್ಭದಲ್ಲಿ ತಾವು ಆ ಪ್ರಾತಿನಿಧ್ಯತೆಯನ್ನು ತಪ್ಪಿಸುವಂತಹ ಕೆಲಸವನ್ನು ಮಾಡಬಾರದು ಎನ್ನುವಂತಾದ್ದು ನನ್ನ ಪ್ರಮುಖವಾದ ವಿಚಾರ. ಇಲ್ಲಿ ಅಧ್ಯಾಯ 10, ಸೆಕ್ಷನ್ 57, ಇದನ್ನು ನಾನು ಖಂಡಿತವಾಗಿ ಸ್ವಾಗತ ಮಾಡುತ್ತೇನೆ. ಯಾರು ಇಡೀ ದೇಶದಲ್ಲಿ, ಇಡೀ ರಾಜ್ಯದಲ್ಲಿ ಇರುವಂತಹ ವಿಶ್ವವಿದ್ಯಾನಿಲಯದವರು ತಾರದೇ ಇರುವಂತಹ ಒಂದು ಮಸೂದೆಯನ್ನು ತಂದಿದ್ದೀರಿ, ಅದಕ್ಕೆ ನಾನು ತುಂಬಾ ಸಂತೋಷವನ್ನು ಪಡುತ್ತೇನೆ. ವಿಶ್ವವಿದ್ಯಾನಿಲಯದಲ್ಲಿರುವಂತಹ ನೌಕರರನ್ನು ಒಂದು ವಿಶ್ವವಿದ್ಯಾನಿಲಯದಿಂದ ಮತ್ತೊಂದು ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡುವಂತಹ ವಿಚಾರಗಳು, ಇದಕ್ಕೆ

ಸಂಬಂಧಪಟ್ಟಂತೆ ತಾವು ಏನು ತಂದಿದ್ದೀರಿ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆಮೇಲೆ ಸೆಕ್ಷನ್ 58ರಲ್ಲಿ ಸಂಯೋಜನೆ ಮತ್ತು ಮನ್ನಣೆ, ತಾವು ಅಫಿಲಿಯೇಷನ್ ವಿಚಾರದಲ್ಲಿ ಏನು ಹೇಳಿದ್ದೀರಿ, ಮುಂಚೆ ಯಾವುದೇ ವಿಶ್ವವಿದ್ಯಾನಿಲಯಗಳು ತಪ್ಪದೇ ಆದ ರೀತಿಯಲ್ಲಿ ನಿರ್ಧಾರಗಳನ್ನು ಕೈಗೊಳ್ಳಬಹುದಿತ್ತು, ಆದರೆ 58(1)ನೇ ಸೆಕ್ಷನ್‌ನಲ್ಲಿ ತಾವು ಹೇಳುವಂತಹ ಸಂದರ್ಭದಲ್ಲಿ ಹೇಳಿದ್ದೀರಿ, ವಿಶ್ವವಿದ್ಯಾನಿಲಯದ ಪ್ರದೇಶದಲ್ಲಿರುವಂತಹ ಕಾಲೇಜುಗಳನ್ನು ಆ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪೂರೈಸಿದ ಮೇಲೆ, ರಾಜ್ಯ ಸರ್ಕಾರ ಮಾಡಿದ ಶಿಫಾರಸ್ಸಿನ ಮೇಲೆ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳನ್ನಾಗಿ ಸಂಯೋಜಿಸತಕ್ಕದ್ದು. ಯಾವ ಯಾವ ಷರತ್ತುಗಳನ್ನು ಅವರು ಪೂರೈಸಬೇಕಾಗಿತ್ತೋ ಆ ಷರತ್ತುಗಳನ್ನು ಪೂರೈಸಿದ ನಂತರದಲ್ಲಿ ಆಮೇಲೆ ಅದು ಅಟೋಮ್ಯಾಟಿಕ್ ಆಗಿ ಅಲ್ಲಿಂದ ಅಫಿಲಿಯೇಟರ್‌ನಿಂದ ನೇರವಾಗಿ ವೈಸ್ ಚಾನ್ಸಲರ್‌ನಿಂದ ಸಿಗುತ್ತಿತ್ತು. ಅದಕ್ಕೆ ರಾಜ್ಯ ಸರ್ಕಾರದ ಇಂಟರ್‌ಫಿಯರೆನ್ಸ್ ಏಕೆ? ಇವತ್ತು ನಾವು ಅದನ್ನು ಪ್ರಾರಂಭ ಮಾಡುತ್ತೇವೆ ಅಂದ ತಕ್ಷಣವೇ, ತಮ್ಮ ಪಕ್ಷದಲ್ಲಿರುವಂತಹವರು ಯಾರೋ ಒಬ್ಬರು ಕೊಡುತ್ತಾರೆ, ಅದು ಷರತ್ತುಗಳನ್ನು ಪೂರೈಸುವುದಿಲ್ಲ, ಆಗ ಅಫಿಲಿಯೇಷನ್ ಮಾಡಿ ಅಂತ ನೀವೇ ಡೈರೆಕ್ಷನ್ ಕೊಟ್ಟ ಹಾಗೆ ಆಯಿತು, ಯಾರೋ ಒಬ್ಬರು ತಮಗೆ ಆಗದೇ ಇರುವಂತಹ ಬೇರೆ ಪಕ್ಷದವರು ಇದ್ದರು ಎಂದರೆ ಅವರು ಎಲ್ಲಾ ಷರತ್ತುಗಳನ್ನು ಪೂರೈಸಿದರೂ ಸಹ ತಕರಾರು ಮಾಡುವುದಕ್ಕೋಸ್ಕರವಾಗಿ ರಾಜ್ಯ ಸರ್ಕಾರದವರೇ ಇಟ್ಟುಕೊಳ್ಳುವುದಕ್ಕೋಸ್ಕರವಾಗಿ ಅವಕಾಶವನ್ನು ಮಾಡಿಕೊಟ್ಟಂತೆ ಆಗುತ್ತದೆ. ನಾನು ಒಂದು ಉದಾಹರಣೆಯನ್ನು ಹೇಳುವುದಾದರೆ, ತಾವು ಕೂಡ ಒಂದು ಸಂಸ್ಥೆಯನ್ನು ನಡೆಸುತ್ತಿದ್ದೀರಿ. ಅದರಲ್ಲೇ ಆದ ರೀತಿಯ ವ್ಯವಸ್ಥೆಗಳು ಇವೆ, ನಾನು ತಮ್ಮ ಬಗ್ಗೆ ಮಾತನಾಡುತ್ತಿಲ್ಲ. ತಮ್ಮ ಸಚಿವ ಸಂಪುಟದಲ್ಲಿ ಇರುವ ಒಬ್ಬ ವ್ಯಕ್ತಿ ನಡೆಸುತ್ತಿರುವ ಸಂಸ್ಥೆಯ ಬಗ್ಗೆ ನಾನು ಪ್ರಸ್ತಾಪ ಮಾಡಿದರೆ ತಮಗೆ ಬೇಸರವಾಗುವುದಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಸೆಕ್ಷನ್ 58(12) ಸಬ್ -ಸೆಕ್ಷನ್ (3) ಯಾವ ಕಟ್ಟಡಗಳಲ್ಲಿ ಆ ಕಾಲೇಜು ಇರಬೇಕಾಗಿದೆಯೋ ಆ ಕಟ್ಟಡಗಳು ಸೂಕ್ತವಾಗಿದೆ ಎಂದು ಯಾವ ಬಿಲ್ಡಿಂಗ್‌ನಲ್ಲಿ ಈ ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೋಸ್ಕರ ಹೊರಟಿದ್ದೇವೆ, ಎನ್ನುವಂತಹ ವಿಚಾರ ಇದೆ, ಆ ಕಟ್ಟಡ ಸೂಕ್ತವಾಗಿದೆ ಎನ್ನುವಂತಹ ಸರ್ಟಿಫಿಕೇಟ್‌ನ್ನು ರಾಜ್ಯ ಸರ್ಕಾರ ಕೊಡುತ್ತದೆ ಎನ್ನುವುದಾದರೆ ನಾನು ಇಲ್ಲಿ ಒಂದು ಉದಾಹರಣೆಯನ್ನು ಕೊಡುವುದಕ್ಕೆ ಇಚ್ಛಿಸುತ್ತೇನೆ. ಶ್ರೀ ಟಿ. ಜಾನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಅವರು ಅರ್ಜಿಯನ್ನು ಕೊಡುವಂತಹ ಸಂದರ್ಭದಲ್ಲಿ ಆ ಕಾಲೇಜನ್ನು ಸ್ಥಾಪನೆ ಮಾಡುವ ಜಾಗ ನಂ. 109:1, 110:2 , ಜಂತರಪಾಳ್ಯ, ಮೈಸೂರು ರಸ್ತೆ, ಬೆಂಗಳೂರು ಇಲ್ಲಿ ಆ ಕಾಲೇಜನ್ನು ಪ್ರಾರಂಭ ಮಾಡುತ್ತೇನೆಂದು ಹೇಳಿ ಅರ್ಜಿ ಕೊಟ್ಟರು. ಆ ನಂತರದಲ್ಲಿ ಎಲ್.ಐ.ಸಿ. ಕಮಿಟಿ ಹೋಯಿತು. ಆ ಎಲ್.ಐ.ಸಿ. ಕಮಿಟಿ ಹೋಗಿ ಅದನ್ನು ನೋಡಿದಂತಹ ಸಂದರ್ಭದಲ್ಲಿ ಅವರ ವರದಿ ಪ್ರಕಾರ two

and a half acres of land along with building leased out by Promod Foods Private Ltd. to National Distillaries and Allied Products Pvt., Ltd. on 22.7.91." ಅಂದರೆ ಯಾವ ಜಾಗದಲ್ಲಿ ಡಿಸ್ಟಲರಿ ನಡೆಯುತ್ತಿದೆ, ಆ ಜಾಗವನ್ನು ತೋರಿಸಿ, ಒಂದು ಟೆಕ್ನಿಕಲ್ ಕಾಲೇಜನ್ನು ತೆಗೆದುಕೊಳ್ಳುವುದಕ್ಕೋಸ್ಕರ ಇನ್ಸ್ಪೆಕ್ಷನ್ ಮಾಡಬಹುದು, ತಮ್ಮಲ್ಲಿರುವಂತಹ ಒಬ್ಬ ಮಂತ್ರಿಗಳು ಎನ್ನುವ ದಾಖಲಾತಿ ಇರುವಂತಹ ಸಂದರ್ಭದಲ್ಲಿ ಹೀಗಿರುವಾಗ ರಾಜ್ಯ ಸರ್ಕಾರವೇ ಸಂಪೂರ್ಣವಾದ ಜವಾಬ್ದಾರಿಯನ್ನು ತೆಗೆದುಕೊಂಡು ಅಲ್ಲಿ ಕಟ್ಟಡ ಸರಿಯಾಗಿದೆಯೋ, ಎಲ್ಲಾ ವ್ಯವಸ್ಥೆಗಳು ಸರಿಯಾಗಿದೆಯೇ, ಅಂತ ಹೇಳುವಂತಹ ವ್ಯವಸ್ಥೆಗಳು ಇತ್ತು,

ಅಧ್ಯಕ್ಷರು :— ತಾವು ಬೇಗ ಮುಗಿಸಿ. ನಮಗೆ ಒಟ್ಟು ಸಮಯ ಇರುವುದು ಎರಡೂವರೆ ಗಂಟೆಗಳು.

ಶ್ರೀ ಎ. ರಾಮದಾಸ್ :— ಮಾನ್ಯ ಅಧ್ಯಕ್ಷರೇ, ನಮ್ಮ ಪಕ್ಷದ ವತಿಯಿಂದ ನಾನೊಬ್ಬನೇ ಮಾತನಾಡುವುದು. ನನಗೆ ಹೆಚ್ಚು ಸಮಯ ಕೊಡಿ.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಬಾಡಿಗೆ ನಿಯಂತ್ರಣ ಕಾನೂನು ತೆಗೆದುಕೊಂಡು ಬಂದಿದ್ದಾರೆ. ನಾನು ನಿನ್ನೆ ತಮಗೆ ನೆನಪು ಮಾಡಿದ ಪ್ರಕಾರ ಅವರು ಬಾಡಿಗೆ ನಿಯಂತ್ರಣ ಕಾನೂನು ತರುತ್ತಾರೆಂದು ಗೊತ್ತಾದ ಮೇಲೆ ಒಂದು ಕಾಪಿ ತೆಗೆದುಕೊಂಡು ಹೋದೆ. ನಿನ್ನೆ ರಾತ್ರಿ ಅಜೆಂಡಾದಲ್ಲಿ ಈ ವಿಚಾರ ಬರಲಿಲ್ಲ. ಇಂಗ್ಲೀಷ್ ಪ್ರತಿ ಈಗ ತೆಗೆದುಕೊಂಡೆ, ಅಂದರೆ ಇಷ್ಟೊಂದು ಅವಸರದಲ್ಲಿ ನಡೆಯುತ್ತಿದೆ. ಈ ಬಗ್ಗೆ ಚರ್ಚೆಯಾಗಬೇಕಾಗುತ್ತದೆ.

ಅಧ್ಯಕ್ಷರು :— ಚರ್ಚೆ ಆಗಲಿ ನಾನು ಬೇಡ ಅಂತ ಹೇಳುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ :— ಒಂದು ವಾರದ ಮುಂಚೆ ತೆಗೆದುಕೊಂಡು ಬಂದಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಇವತ್ತು ಕಡೆಯ ದಿನ ತೆಗೆದುಕೊಂಡು ಬಂದರೆ ನಾವು ಚರ್ಚೆ ಮಾಡುವುದು ಹೇಗೆ? ಬಾಡಿಗೆ ನಿಯಂತ್ರಣ ಕಾನೂನು ಹೊಸ ಆಕ್ಟ್. ಯಾವುದೋ ತಿದ್ದುಪಡಿ ಆಗಿದ್ದರೆ ಪರವಾಗಿರಲಿಲ್ಲ. ಹೊಸ ಕಾನೂನು ತರುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಅಧ್ಯಕ್ಷರೇ, ಈ ಮಸೂದೆ ಮೇಲ್ಮನೆಯಲ್ಲಿ ಸರ್ವಾನುಮತದಿಂದ ಯಾವುದೇ ತಿದ್ದುಪಡಿ ಇಲ್ಲದೆ ಪಾಸಾಗಿದೆ. ನಾವು ಯಾವ ಮಸೂದೆ ತಂದರೂ ಒಂದು ವಾರದಿಂದ ಚರ್ಚೆಯಾಗಲಿಲ್ಲ. ಬಾಡಿಗೆ ನಿಯಂತ್ರಣ ಕಾನೂನು 2000 ಇಸವಿ ಡಿಸೆಂಬರ್ ಒಳಗೆ ಈ ಸದನದಲ್ಲಿ ಮಂಜೂರಾಗಿ ಬರಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್:— ಮಾನ್ಯ ಅಧ್ಯಕ್ಷರೇ ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾನು ಈ ಮಸೂದೆ ತನ್ನಿ ಅಂತ ಹೇಳಿದ್ದೆ. ಒಂದು ವಾರದಿಂದ ನಾನು ಹೇಳುತ್ತಿದ್ದೇನೆ. ಈ ಬಾರಿಗೆ ನಿಯಂತ್ರಣ ಕಾನೂನಿನ ಅವಧಿ ಮುಗಿಯುತ್ತಿದೆ, ತಾವು ಈ ಅಧಿವೇಶನದಲ್ಲಿ ತರುವುದಾದರೆ ಬೇಗ ತನ್ನಿ ಅಂತ ಹೇಳಿದೆ. ತಾವು ಮೇಲ್ಮನೆಯಲ್ಲಿ ಪಾಸ್ ಮಾಡಿಕೊಂಡು ಒಂದು ಕೊನೆಯ ದಿವಸ ಈ ಸದನಕ್ಕೆ ತಂದರೆ ಹೇಗೆ? ಈ ಕಾನೂನು ಬಹಳ ಚೆನ್ನಾಗಿದೆ, ನಾನು ಇಲ್ಲ ಅಂತ ಹೇಳಲಿಲ್ಲ. ನಾವು ಪ್ರತಿಪಕ್ಷದವತಿಯಿಂದ ಏನಾದರೂ ಸಲಹೆ ಸೂಚನೆಗಳು ಕೊಡುವುದು ಬೇಡವೇ?

ಶ್ರೀ ಎ. ರಾಮದಾಸ್:— ಮಾನ್ಯ ಅಧ್ಯಕ್ಷರೇ, ಪ್ರಮುಖವಾಗಿ ನಾನು ಹೇಳುತ್ತಿರುವುದು ನಿಮ್ಮ ಆಕ್ಟಿನ ಅಡಿಯಲ್ಲಿ ಸೆಕ್ಷನ್ 58(ಬಿ)(3)ಸಬ್ ಸೆಕ್ಷನ್‌ನಲ್ಲಿ ಅದಕ್ಕೆ ಬೇಕಾಗಿರುವಂತಹ ರಿಕ್ವೈರ್‌ಮೆಂಟ್ ಏನೇನು ಇದೆ, ಅದನ್ನು ಪೂರೈಸುವಂತಹ ಕೆಲಸವನ್ನು ಆ ಸಂಸ್ಥೆ ಮಾಡಿದ ಮೇಲೆ ಅದರ ಸಂಪೂರ್ಣವಾದ ಜವಾಬ್ದಾರಿಯನ್ನು ರಾಜ್ಯ ಸರ್ಕಾರ ತೆಗೆದುಕೊಂಡರೆ ಏನಾಗುತ್ತದೆ ಎನ್ನುವುದಕ್ಕೆ ನಾನು ಒಂದು ಉದಾಹರಣೆಯನ್ನು ಕೊಟ್ಟಿದ್ದೇನೆ. ಅದಕ್ಕೆ ಸಂಬಂಧಪಟ್ಟ ಎಲ್.ಐ.ಸಿ. ವರದಿಯ ಪ್ರತಿ ಇಲ್ಲಿದೆ. ಅಂದರೆ ಶಿಫಾರಸ್ಸು ಇರುವಂತಹ ಒಬ್ಬ ವ್ಯಕ್ತಿ ತಮ್ಮಲ್ಲಿಯೇ ಮಂತ್ರಿಯಾಗಿರುವಂತಹ ಒಬ್ಬ ವ್ಯಕ್ತಿ ಡಿಟ್ಟಿಲರಿಯಲ್ಲಿಯೇ ಒಂದು ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭ ಮಾಡುವಂತಹ ವ್ಯವಸ್ಥೆಯಾದರೆ ವಿಶ್ವವಿದ್ಯಾನಿಲಯದ ವ್ಯವಸ್ಥೆಗಳು ಏನಾಗುತ್ತವೆ? ಇದರ ಬಗ್ಗೆ ಚಿಂತನೆ ಮಾಡುವಂತಾದ್ದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯ ಅಂತ ಹೇಳಿ, ಇದನ್ನು ಆಯಾಯಾ ವಿಶ್ವವಿದ್ಯಾನಿಲಯಗಳು ಏನಿವೆ ಅವುಗಳಿಗೇ ಬಿಡಬೇಕೆನ್ನುವ ವಿಚಾರವನ್ನು ನಾನು ತಮ್ಮ ಮುಂದೆ ಇಡುತ್ತಿದ್ದೇನೆ. ಅದರಲ್ಲಿಯೇ (ಐ)5ನೇ ಪ್ರಕರಣದಲ್ಲಿ ಅರ್ಜಿಯನ್ನು ಇದರ ಜೊತೆಗೆ ಕಾಲೇಜನ್ನು ಸಂಯೋಜಿಸಿದ ನಂತರ ರಾಜ್ಯ ಸರ್ಕಾರ ಮತ್ತು ವಿಶ್ವವಿದ್ಯಾನಿಲಯದ ಪೂರ್ವ ನಮೂದನೆ ಇಲ್ಲದೆ ವ್ಯವಸ್ಥಾಪನೆಯ ವರ್ಗಾವಣೆಯನ್ನು ಮಾಡುವುದು ಅಂದರೆ ಉದಾಹರಣೆಗೆ ಯಾವುದೋ ಒಂದು ಸಂಸ್ಥೆ ನಡೆಯುತ್ತಿದೆ, ಅದಕ್ಕೆ ಸಂಬಂಧಪಟ್ಟ ಹಾಗೆ ಅಲ್ಲಿನ ಮ್ಯಾನೇಜ್‌ಮೆಂಟ್ ಏನಾದರೂ ಟ್ರಾನ್ಸ್‌ಫರ್ ಆಗಬೇಕು ಎನ್ನುವುದಾದರೆ ಸರ್ಕಾರದಿಂದ ಪೂರ್ವಾನುಮತಿ ಪಡೆದುಕೊಳ್ಳಬೇಕು ಎನ್ನುವಂತಹ ವಿಚಾರ ಏನು ಇದೆ ಅದನ್ನು ಮತ್ತೆ ರಾಜ್ಯ ಸರ್ಕಾರ ಇಂಟರ್‌ಫಿಯರೆನ್ಸ್ ಆಗುವಂತಹ ವಿಚಾರ ಸಬ್-ಸೆಕ್ಷನ್(5)ರಲ್ಲಿ ಇದೆ ಎನ್ನುವಂತಹ ವಿಚಾರವನ್ನು ನಾನು ತಮ್ಮ ಮುಂದೆ ಹೇಳುತ್ತೇನೆ.

ಇನ್ನೊಂದು ಬಹಳ ಮಾರಕವಾದಂಥ ವಿಚಾರ ಇದೆ. ಅದು ಪೇಜ್ ನಂಬರ್ -೬೫ರಲ್ಲಿದೆ. ವಿಶ್ವವಿದ್ಯಾನಿಲಯವು ರಾಜ್ಯ ಸರಕಾರದ ನಿರ್ದೇಶನಗಳನ್ನು ಸ್ವೀಕರಿಸಿದ ತರುವಾಯ ಅದರಂತೆ ಔಪಚಾರಿಕ ಆದೇಶಗಳನ್ನು ಹೊರಡಿಸತಕ್ಕದ್ದು. ಅಂದರೆ ಇಲ್ಲಿ ರಾಜ್ಯಪಾಲರ ಕರ್ತವ್ಯ ಏನಿದೆ? ವೈಸ್ ಚಾನ್ಸಲರ್‌ರವರ ಕರ್ತವ್ಯ ಏನಿದೆ? ರಾಜ್ಯ

ಸರಕಾರದವರು ಎಲ್ಲವನ್ನೂ ನಿರ್ಣಯ ಮಾಡಿ ಅನಂತರ ಕೇವಲ ಔಪಚಾರಿಕವಾಗಿ ಕೆಲಸವನ್ನು ಮಾಡಬೇಕು. ಮಾನ್ಯ ಚಂದ್ರೇಗೌಡರ ಅವಧಿಯಲ್ಲಿ ಇದು ಏಕೆ ಬಂತು? ಆ ಬಗ್ಗೆ ನನ್ನಲ್ಲಿ ಒಂದು ಪುರಾವೆ ಕೂಡ ಇದೆ. ರಾಜೀವ್‌ಗಾಂಧಿ ಹೆಲ್ತ್ ಯೂನಿವರ್ಸಿಟಿಯಲ್ಲಿ ಆಗಿರುವಂಥ ಒಂದು ಸಮಸ್ಯೆಯನ್ನು ಪರಿಹರಿಸುವ ವಿಚಾರ ಬಂದಾಗ ಈ ಮೂಲಕ ಬೇರೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಇದನ್ನು ಹೇಗೆ ತರಬಹುದು ಎಂದು ನೀವು ಯೋಚನೆ ಮಾಡಿದ್ದೀರಿ ಎಂದು ನಾನು ನೇರವಾಗಿ ಕೇಳಬಯಸುತ್ತೇನೆ. ಇವೊತ್ತು ತಾವುಗಳು ಮೂರು ಮೆಡಿಕಲ್ ಕಾಲೇಜುಗಳಿಗೆ ನೀವು ಫೀಸಿಬಿಲಿಟಿ ಸರ್ಟಿಫಿಕೇಟ್‌ನ್ನು ಕೊಟ್ಟಿದ್ದೀರಿ. ಅದರಲ್ಲಿ ಬೆಂಗಳೂರಿನ ಆಕ್ಸ್‌ಫರ್ಡ್ ಮೆಡಿಕಲ್ ಕಾಲೇಜು, ಲಕ್ಷ್ಮಿ ಮೆಮೋರಿಯಲ್ ಎಜುಕೇಷನಲ್ ಇನ್ಸ್‌ಟಿಟ್ಯೂಶನ್ಸ್‌ರವರ ಜೆ.ಜೆ. ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಹಾಗೂ ಎಂ.ವಿ.ಜೆ. ಮೆಡಿಕಲ್ ಕಾಲೇಜು ಈ ಮೂರು ಕಾಲೇಜುಗಳಿಗೆ ತಾವು ಒಂದು ಸಮಿತಿಯನ್ನು ಕಳುಹಿಸಿಕೊಟ್ಟಿದ್ದೀರಿ. ಆ ಸಮಿತಿಯವರೂ ಸಹ ಒಂದು ವರದಿಯನ್ನು ಕೊಟ್ಟರು. ಇವೊತ್ತು ಕೇಂದ್ರದ ಎಂಸಿಐ-ಯವರ ಆಕ್ಟ್‌ನ ಅಡಿಯಲ್ಲಿ ಅದರ ಜೊತೆಯಲ್ಲಿ ಅಲ್ಲಿರುವ ಇನ್‌ಫ್ರಾಸ್ಟ್ರಕ್ಚರ್ಸ್ ಏನೇನು ಇದೆ, ಅವುಗಳೆಲ್ಲವುಗಳ ಆಧಾರದ ಮೇಲೆ ಅಲ್ಲಿರುವಂಥ ಮೆಡಿಕಲ್ ಕಾಲೇಜುಗಳಿಗೆ ಪರ್ಮಿಶನ್ ಕೊಡಬಾರದು ಎಂಬ ಬಗ್ಗೆ ವರದಿಯನ್ನು ತಮಗೆ ಸಲ್ಲಿಸಲಾಯಿತು. ಅವರು ೨೧-೯-೨೦೦೦ದಲ್ಲಿ ವರದಿಯನ್ನು ಕೊಟ್ಟಿದ್ದಾರೆ ಇಲ್ಲಿ ತಾವು ಸರಕಾರದಿಂದ ಫಿಸಿಬಿಲಿಟಿ ಸರ್ಟಿಫಿಕೇಟ್ ಕೊಡುವ ಮೊದಲು ಚಿಂತನೆ ಮಾಡಬೇಕಾಗಿತ್ತು. ಆದರೆ ಬೆಂಗಳೂರಿನಲ್ಲಿ ಎರಡು ಹಾಗೂ ಒಂದು ಮಂಗಳೂರಿನಲ್ಲಿರುವ ಕಾಲೇಜುಗಳಿಗೆ ಫೀಸಿಬಿಲಿಟಿ ಸರ್ಟಿಫಿಕೇಟ್‌ನ್ನು ಕೊಟ್ಟಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಅಧ್ಯಕ್ಷರೇ, ಹಿಂದಿನ ಸರಕಾರದವರು ಯಾವುದಕ್ಕೆ ಎಷೆನ್‌ಶಿಯಾಲಿಟಿ ಸರ್ಟಿಫಿಕೇಟನ್ನು ಕೊಟ್ಟಿದ್ದರೋ ಅವುಗಳನ್ನು ಪುನರ್ ಪರಿಶೀಲನೆ ಮಾಡಿಯೇ ನಾವು ಅದನ್ನು ಕೊಟ್ಟಿರತಕ್ಕಂಥಾದ್ದು. ಅವರು 10-11ಕ್ಕೆ ಆ ರೀತಿಯಾದ ಅನುಮತಿ ಕೊಟ್ಟಿದ್ದರು.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಅದರಲ್ಲಿ ಕೂಡ ನಿಮಗೆ ನಾವು ಕೊಟ್ಟಿದ್ದಕ್ಕೆಲ್ಲಾ ರೆಕಮಂಡ್ ಮಾಡಿಲ್ಲ. ನಿಮಗೆ ಯಾವುದು ಕನ್‌ವೀನಿಯಂಟ್ ಆಗುತ್ತದೋ ಅದಕ್ಕೆ ಮಾತ್ರ ಕೊಟ್ಟಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ :— ನಾವು ಒಂದು ವೇಳೆ ಕೊಟ್ಟಿಲ್ಲವಾದಲ್ಲಿ ಕೊಟ್ಟಿಲ್ಲ ಎಂದು ನೀವೇ ಹೇಳುತ್ತೀರಿ; ಕೊಟ್ಟಾಗ ನಿಮಗೆ ಕನ್‌ವೀನಿಯಂಟ್ ಆದವುಗಳಿಗೆ ಕೊಟ್ಟಿದ್ದೀರಿ ಎಂದು ಹೇಳುತ್ತೀರಿ. ಆ ಜಾಗದಲ್ಲಿ ಕುಳಿತಾಗ ಸಾಮಾನ್ಯವಾಗಿ ಎಲ್ಲರೂ ಹಾಗೆಯೇ ಹೇಳುತ್ತಾರೆ ಎಂದು ಇಟ್ಟುಕೊಳ್ಳೋಣ. ಆದರೆ ನೀವು ಹಿಂದೆ ಕೊಟ್ಟಿದ್ದನ್ನು ಪುನರ್

ಪರಿಶೀಲನೆ ಮಾಡಿ, ಕ್ಯಾಬಿನೆಟ್ ಉಪಸಮಿತಿಯನ್ನು ಮಾಡಿ, ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರನ್ನು ಕೇಳಿ, ಆಮೇಲೆ ರಾಜೀವ್ ಗಾಂಧಿ ಮೆಡಿಕಲ್ ಯೂನಿವರ್ಸಿಟಿಯವರ ಒಪ್ಪಿಗೆಗೆ ಕಳುಹಿಸಲಾಯಿತು. ಈ ವಿಚಾರಗಳು ಆಕ್ಷನಲ್ಲಿ ಇವೆ. ನಾವು ನಿಯಮಗಳ ಪ್ರಕಾರ ಮಾಡಿದ್ದೇವೆಯೇ ಹೊರತು ನೀವು ಕೊಟ್ಟಿದ್ದೀರಿ... ನೀವು ಕೊಟ್ಟಿದ್ದೀರಿ ಎಂದು ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಅದು ಸಮರ್ಪಕವೇ?

ಶ್ರೀ ಎ. ರಾಮದಾಸ್ :— ನೀವು ಹೀಗೆ ಮಾಡಿದ್ದೀರಿ ಎಂದು ನಾನು ಹೇಳಿದ್ದೇನೆ. ನೀವು ಕೊಟ್ಟಿದ್ದು ಜಗತ್ತಿಗೇ ತಿಳಿದಿರುವ ವಿಚಾರ. ಆದರೆ ಹಿಂದಿನ ಸರಕಾರದವರು ಫೀಸಿಬಿಲಿಟಿ ರಿಪೋರ್ಟ್‌ನ್ನು ಎಲ್ಲರಿಗೂ ಕೊಟ್ಟಿರಲಿಲ್ಲ. ಅವರು ಈ ಬಗ್ಗೆ ಕ್ಯಾಬಿನೆಟ್‌ನಲ್ಲಿ ನಿರ್ಧಾರ ಮಾಡಿದ್ದರು. ಆದರೆ ಆ ಸಮಯದಲ್ಲಿ ಉಂಟಾದ ತಕರಾರುಗಳಿಂದ ಅದು ಹಾಗೆಯೇ ಉಳಿದಿತ್ತು. ಯಾವ ದಿನಾಂಕದಂದು ತಾವುಗಳು ಕೊಟ್ಟಿದ್ದೀರಿ ಎಂದು ಹೇಳಲಿಚ್ಛಿಸುತ್ತೇನೆ. ೨೧-೯-೨೦೦೦ದಲ್ಲಿ ತಾವು ಸರಕಾರಿ ಸುತ್ತೋಲೆಯನ್ನು ಹೊರಡಿಸಿ ಮೂರು ಕಾಲೇಜುಗಳಿಗೆ ಫೀಸಿಬಿಲಿಟಿ ಸರ್ಟಿಫಿಕೇಟ್‌ನ್ನು ಕೊಟ್ಟಿದ್ದೀರಿ ಅದೂ ಕೂಡ ತಾವುಗಳೇ ಕಳುಹಿಸಿದ ಎಲ್‌ಐಸಿ ಸಮಿತಿಯವರ ವರದಿಗೆ ವಿರುದ್ಧವಾಗಿ ಕೊಟ್ಟಿದ್ದೀರಿ. ಆ ಬಗ್ಗೆ ಸರಕಾರಿ ಆದೇಶವನ್ನು ನೀವೇ ಹೊರಡಿಸಿದ್ದು, ಅದನ್ನು ಸಮಯಾವಕಾಶವಿಲ್ಲದ ಕಾರಣ ಓದಲು ಹೋಗುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಅಧ್ಯಕ್ಷರೇ, ಕಡತಕ್ಕೆ ತಪ್ಪು ಮಾಹಿತಿಗಳು ಹೋಗಬಾರದು. ನೀವು ಹಾಗೆ ಮಾಡಿದ್ದಾರೆಂದು ಹೇಳುವುದಾದರೆ ಅದಕ್ಕೊಂದು ಆಧಾರ ಇರಬೇಕು. ಸರಕಾರಕ್ಕೆ ನೀವು ಏನೂ ಯೋಚನೆ ಮಾಡದೇ ಕೊಟ್ಟಿದ್ದೀರಿ ಮುಂತಾಗಿ ಹೇಳುವುದು, ಸಾರಾಸಗಟಾಗಿ ಕೊಟ್ಟಿದ್ದೀರಿ ಎಂದು ಹೇಳುವುದು ಸರಿಯಲ್ಲ. ಈ ಬಗ್ಗೆ ಮೂರು ಮೂರು ಸಾರಿ ಹೋಗಿ ಬಂದಿದೆ ಎಂಬ ವಿಚಾರವನ್ನು ಕೂಡ ಹೇಳಿದ್ದೇನೆ. ಅದು ಸಾಕಾಗಲಿಲ್ಲವೆಂದು ಮತ್ತೆ ಯೂನಿವರ್ಸಿಟಿಗೆ ರೆಫರ್ ಮಾಡಿ ತರಿಸಿಕೊಂಡಿದ್ದೇವೆ ಎಂದು ಹೇಳಿದ್ದೇನೆ. ಇಷ್ಟೆಲ್ಲಾ ಇದ್ದೂ ಕೂಡ ಸಮಿತಿಯ ರೆಕಮೆಂಡೇಷನ್ ವಿರುದ್ಧ ಕೊಟ್ಟಿದ್ದೀರಿ ಎಂದು ಹೇಳಿದರೆ ಅದಕ್ಕೆ ನಾನೇನು ಹೇಳಲಿ?

ಶ್ರೀ ಎ. ರಾಮದಾಸ್ :— ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟ ಹಾಗೆ, Senate and the Academic Council of Rajiv Gandhi Health University has made recommendations to the Government under Sec. 45(5) of the Rajiv Gandhi Health University Act, 1994 to reject the affiliation. ಯಾವ ಎಲ್‌ಐಸಿ ಸಮಿತಿಯ ವರದಿ ಇದೆ, ಹಾಗೆಯೇ ಸರಕಾರದ ಸುತ್ತೋಲೆ ಏನಿದೆ, ಅದರ ವಿರುದ್ಧವಾಗಿ ತಮ್ಮ ಆದೇಶದ ಪ್ರಕಾರವೇ, Application for affiliation

of the above colleges, has been considered in the light of the report of local inspection committee, resolution of the Academic, Syndicate and the report of the High Power Inspection Committee constituted by the Government. ಯಾವ ಎಲ್‌ಐಸಿ ಸಮಿತಿಯನ್ನು ನೀವು ಕಳುಹಿಸಿದ್ದೀರಿ, ಅವರು ತಮ್ಮ ವರದಿಯನ್ನು ಕೊಟ್ಟರು. ಅವರ ವರದಿಯಲ್ಲಿ ಏನಿತ್ತು? ಈ ಮೂರು ಕಾಲೇಜುಗಳಿಗೆ ನೀವು ಹೇಳುವಹಾಗೆ ೩೦೦ ಬೆಡ್‌ಗಳ ಆಸ್ಪತ್ರೆ ಇಲ್ಲ. ಕೇವಲ ಮಂಗಳೂರಿನಲ್ಲಿರುವಂಥ ಒಂದೇ ಒಂದು ಕಾಲೇಜಿಗೆ ಅಟ್ಯಾಚ್ ಇದೆ. ಬೇರೆ ಎರಡು ಕಾಲೇಜುಗಳಿಗೆ ಅಟ್ಯಾಚ್ ಕೂಡ ಇಲ್ಲ ಎನ್ನುವ ರಿಪೋರ್ಟ್‌ನ್ನು ಕೊಟ್ಟರು. ಆದರೆ ಸರಕಾರದ ವರದಿಯಲ್ಲಿ ತಾವುಗಳು ದಾಖಲೆ ಮಾಡಿದ್ದೀರಿ. ಮೂರು ಕಾಲೇಜುಗಳಿಗೆ ಮುನ್ನೂರು ಬೆಡ್‌ಗಳ ಆಸ್ಪತ್ರೆ ಇದೆ ಎಂದು ಹೇಳಿದ್ದೀರಿ. ಅಂಥ ವರದಿಯನ್ನು ನೀವು ಯಾರಿಂದ ತರಿಸಿಕೊಂಡಿದ್ದೀರಿ? ಅದು ಎಲ್‌ಐಸಿ ಸಮಿತಿಯಿಂದ ಅಲ್ಲ. High power Inspection Committee constituted by the Government ತಮಗೆ ಬೇಕಾದಂಥವರನ್ನು ಅಲ್ಲಿ ಕಳುಹಿಸಿಕೊಟ್ಟು ವರದಿಯನ್ನು ತರಿಸಿಕೊಂಡಿದ್ದೀರಿ. ಅಲ್ಲಿ ೩೦೦ ಬೆಡ್‌ಗಳ ಆಸ್ಪತ್ರೆ ಇದೆಯೆಂಬ ಸುಳ್ಳು ದಾಖಲೆಗಳನ್ನು ನೀವು ಏಕೆ ನಿರ್ಮಾಣ ಮಾಡಿದ್ದೀರಿ?

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇನ್ಸ್‌ಪೆಕ್ಷನ್‌ಗೆ ಬೇಕಾದವರನ್ನು ಕಳುಹಿಸಿದ್ದೀರಿ, ಬೇಕಾದ ಹಾಗೆ ವರದಿಯನ್ನು ತರಿಸಿಕೊಂಡಿದ್ದೀರಿ, ಸಮಿತಿಯವರ ರೆಕಮಂಡೇಶನ್ಸ್‌ಗೆ ವಿರುದ್ಧವಾಗಿ ಮಾಡಿದ್ದೀರಿ ಮುಂತಾಗಿ ಹೇಳಿದ್ದಾರೆ. ಹೀಗೆ ಮಾಡುವ ಆಪಾದನೆಗಳಿಗೆ ಏನಾದರೂ ಸಕಾರಣಗಳು ಇರಬೇಕು. ಅಲ್ಲಿಗೆ ಹೋದ ಸಮಿತಿಯಲ್ಲಿ ಯಾರ್ಯಾರು ಹೋಗಿದ್ದಾರೆ? Top level officers, Departmental Heads who deal with the matter - they have gone.

ಶ್ರೀ ಬಿ.ಆರ್. ನೀಲಕಂಠಪ್ಪ :— ಮಾನ್ಯ ಅಧ್ಯಕ್ಷರೇ, ಅಲ್ಲಿಗೆ ಮಾನ್ಯ ರಾಮದಾಸ್‌ರವರನ್ನು ಕಳುಹಿಸಿ ಅವರ ಕಡೆಯಿಂದಲೇ ವರದಿಯನ್ನು ತರಿಸಿಕೊಳ್ಳಬೇಕು. ಸರಕಾರದ ವಿರುದ್ಧವಾಗಿ ತಮ್ಮ ಆಪಾದನೆಯನ್ನು ಹೀಗೆಲ್ಲಾ ಮಾಡುತ್ತಿರುವುದರಿಂದ ಅವರೇ ಹೋಗಿ ಒಂದು ವರದಿ ಕೊಡುವಂತೆ ಮಾನ್ಯ ಕಾನೂನು ಸಚಿವರು ಅನುಕೂಲ ಮಾಡಿಕೊಡಲಿ... ಎಲ್ಲದಕ್ಕೂ ವಿರೋಧ ಮಾಡುತ್ತಾ ಹೋದರೆ ಹೇಗೆ?

ಶ್ರೀ ಎ. ರಾಮದಾಸ್ :— ನಾನು ಸರಕಾರದ ವಿರುದ್ಧವಾಗಿ ಯಾವುದೇ ದಾಖಲೆಗಳಿಲ್ಲದ ಆಪಾದನೆಗಳನ್ನು ಮಾಡುತ್ತಾ ಇಲ್ಲ. ಈ ಮೂರು ಕಾಲೇಜುಗಳಲ್ಲಿ ಕೇವಲ ಮಂಗಳೂರಿನ ಕಾಲೇಜಿಗೆ ಮಾತ್ರ ಅಟ್ಯಾಚ್ ಆಗಿದೆ. ೩೦೦ ಬೆಡ್‌ಗಳ ಫುಲ್‌ಫ್ಲೆಡ್ಜ್ ಆಸ್ಪತ್ರೆ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ :— ಈ ಬಗ್ಗೆ ಹೆಚ್ಚಿನ ಚರ್ಚೆಗೆ ತಾವುಗಳು ಪ್ರತ್ಯೇಕ ನೋಟೀಸ್ ಕೊಟ್ಟರೆ ಅನುಕೂಲವಾಗುತ್ತದೆ. After the decision, the University shall, ಎಂಬ ಶಬ್ದವನ್ನು ಅಲ್ಲಿ ಬಳಸಿದ್ದಾರೆ.

ಶ್ರೀ ಎ. ರಾಮದಾಸ್ :— ಇಲ್ಲಿ ಇದನ್ನು ಹೇಳುವ ಅವಶ್ಯಕತೆ ಏನಿದೆ ಅಂದರೆ, ಅವರು ಒಂದು ಪದವನ್ನು ಇಲ್ಲಿ ಸೇರಿಸಿದ್ದಾರೆ. ಎಲ್ಲವನ್ನೂ ರಾಜ್ಯ ಸರಕಾರದವರು ಏನು ಹೇಳುತ್ತಾರೋ ಅದನ್ನು ಮಾತ್ರ ಚಾನ್ಸಲರ್, ವೈಸ್ ಚಾನ್ಸಲರ್‌ರವರು ಔಪಚಾರಿಕವಾಗಿ ಮಾತ್ರ ಮಾಡಬೇಕೆಂದು ಇದೆ. ಇದನ್ನು ಏತಕ್ಕೋಸ್ಕರವಾಗಿ ಸೇರಿಸಿದ್ದೀರಿ ಅಂದರೆ, ಈ ಒಂದು ವರದಿಗಳ ಮೇಲೆ ತಾವು ಹೈಪವರ್ ಕಮಿಟಿಗಳನ್ನು ಕಳುಹಿಸಿಕೊಟ್ಟು, ಅವರು ಕೊಟ್ಟ ವರದಿಯ ಮೇಲೆ ಸಿಂಡಿಕೇಟ್ ಮತ್ತು ಅಕಾಡಮಿಕ್ ಕೌನ್ಸಿಲ್‌ಗಳವರು ರಿಜೆಕ್ಟ್ ಮಾಡಿದರು. ಸರಕಾರದವರು ೨೦-೯-೨೦೦೦ರಂದು ಅಫಿಲಿಯೇಷನ್ ಕೊಡಬೇಕೆಂದು ಕಳುಹಿಸಿದ್ದನ್ನು, ಆ ಪ್ರಸ್ತಾವನೆಯನ್ನು ಹೆಲ್ತ್ ಯೂನಿವರ್ಸಿಟಿಯವರು ರಿಜೆಕ್ಟ್ ಮಾಡಿದರು. ಸರಕಾರಿ ಆದೇಶ ಕ್ರಮಾಂಕ ಹೆಚ್‌ಎಫ್‌ಡಬ್ಲ್ಯು-೧೧೪, ಎಂಇಎಸ್ :೯೯, ಬೆಂಗಳೂರು ದಿನಾಂಕ: ೧೫-೧೧-೨೦೦೦. ಇದೇ ತಿಂಗಳ ನವೆಂಬರ್‌ನಲ್ಲಿ ಹೊರಟ ಆದೇಶವಿದು.

> "In exercise of the powers conferred to the Government by sub Sec.(5) of sec.45 of Rajiv Gandhi Health University Act, 1994, the Government of Karnataka hereby recommends sanction of affiliation to A.J. Institute of Medical Sciences, Mangalore, with an intake of 100 seats applicable for the current academic year 2000-2001 by the Lakshmi Memorial Educational Trust, A.J. Towers, Mangalore"

ತಾವು ಹೇಳಿದ್ದನ್ನೇ ನಾನು ಹೇಳುತ್ತಿದ್ದೇನೆ. ಈ 45(5)ನೇ ಸೆಕ್ಷನ್‌ನಲ್ಲಿ, ಏನಿದೆಯೆಂದರೆ, ಎಮರ್ಜೆಂಟ್ ಕ್ಲಾಸ್ ಪ್ರೊವೈಡ್ ಮಾಡಿದ ಸಂದರ್ಭದಲ್ಲಿ, ಯೂನಿವರ್ಸಿಟಿಯವರು ಪಾಲಿಸಿ ಡೈರೆಕ್ಷನ್‌ಗೆ ವಿರುದ್ಧವಾಗಿ ಏನಾದರೂ ವರ್ತಿಸಿದ ಸಂದರ್ಭ ಬಂದಾಗ ಎಮರ್ಜೆನ್ಸಿಯಲ್ಲಿ ಇಂಥಾದ್ದನ್ನು ಉಪಯೋಗಿಸಿಕೊಳ್ಳಬೇಕು, ಅಂದರೆ ಕೇವಲ ಪಾಲಿಸಿಗೆ ಉಪಯೋಗಿಸಿಕೊಳ್ಳಬೇಕೇ ಎಂದು ಹೇಳಲಾಗಿದೆಯೇ ಹೊರತು ಇಲ್ಲಿ ಯಾವುದೋ ಇಂಡಿವಿಜ್ಯುಯಲ್ ಇನ್ಸ್‌ಟಿಟ್ಯೂಷನ್‌ಗೆ ಉಪಯೋಗಿಸಿಕೊಳ್ಳುವ ಒಂದು ತಪ್ಪು ಕೆಲಸವನ್ನು ಮಾಡುವುದಕ್ಕೆ ಹೊರಟಿದ್ದಾರೆ, ಆದರಿಂದ ದಯವಿಟ್ಟು ಇದನ್ನು ತೆಗೆದುಹಾಕಿ 58(12) ನೇ ಸೆಕ್ಷನ್ನನ್ನು ತೆಗೆದುಹಾಕುವ ಕೆಲಸವನ್ನು ತಾವು ಮಾಡಬೇಕು ಈ ಬಿಲ್ಲನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಕೊಡಿ ಎಂದು ಕೇಳಿದರು. ಏಕೆ ಕೇಳಿದ್ದು? ಇಲ್ಲಿ ಸೆಕ್ಷನ್ 69ನ್ನು ನೋಡಿ. ಪದವಿ

ಅಥವಾ ಡಿಪ್ಲೊಮಾಗಳನ್ನು ಹಿಂತೆಗೆದುಕೊಳ್ಳುವುದು ಬಹಳ ಒಳ್ಳೆಯ ವಿಚಾರ ನೈತಿಕ ಪತನವಾಗುವ ಸಂದರ್ಭ ಬಂದಾಗ ವಿದ್ಯಾರ್ಥಿಗಳು ಅಲ್ಲಿ ಏನಾದರೂ ಮಾಲ್-ಪ್ರಾಕ್ಟೀಸಸ್ ಆದಂಥ ಸಮಯ, ಇವೆಲ್ಲಾ ಬಂದಾಗ ಆ ಡಿಗ್ರಿಯನ್ನು ಆದರಲ್ಲಿ ಅದನ್ನು ಹಿಂದಕ್ಕೆ ತೆಗೆದುಕೊಳ್ಳುವ ಅಧಿಕಾರ ಯಾರಿಗೆ ಇದೆ? ಸೆನೆಟ್‌ಗೆ ಇರಬಾರದು ಎನ್ನುವ ವಿಚಾರವನ್ನು ಒಂದು ಕಡೆ ಹೇಳುತ್ತಿದ್ದೀರಿ, ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನೈತಿಕ ಪತನವನ್ನು ಒಳಗೊಳ್ಳುವಂತೆ ಸೆನೆಟ್ ಅಭಿಪ್ರಾಯಪಡುವ ಯಾವುದೇ ಅಪರಾಧಕ್ಕಾಗಿ ವ್ಯಕ್ತಿಯು ನ್ಯಾಯಾಲಯದಿಂದ ಅಪರಾಧಿ ಎಂದು ಪರಿಗಣಿಸಿದರೆ ಅಥವಾ ಅತೀವ ದುರ್ವತನೆಯಿಂದ ತಪ್ಪಿತಸ್ಥನಾಗಿದ್ದರೆ ಸೆನೆಟ್ ಒಟ್ಟು ಸದಸ್ಯರ ಬಹುಮತ ಮತ್ತು ಸಭೆಯಲ್ಲಿ ಹಾಜರಿದ್ದು ಮತ ಚಲಾಯಿಸುವ ಸೆನೆಟ್..

ಡಾ: ಜಿ. ಪರಮೇಶ್ವರ್ :— ಇಂಗ್ಲೀಷ್‌ನಲ್ಲಿ ಸರಿಯಾಗಿದೆ. ಕನ್ನಡದಲ್ಲಿ ಅದು ಪ್ರಿಂಟಿಂಗ್ ಮಿಸ್ಟೇಕ್ ಆಗಿದೆ.

SRI D.B. Chandre Gowda :— You are right.

ಶ್ರೀ ಎ. ರಾಮದಾಸ್ :— ಸೆನೆಟ್‌ನಲ್ಲೇ ಕ್ರಮ ತೆಗೆದುಕೊಳ್ಳಬೇಕೆನ್ನುವ ವಿಚಾರವನ್ನು ಸೆಕ್ಷನ್ 69ರಲ್ಲಿ ತಂದಿದ್ದೀರಲ್ಲ; ಕನ್ನಡದಲ್ಲಿ ಸೆನೆಟ್ ಎಂದರೆ ಇಂಗ್ಲೀಷ್‌ನಲ್ಲೂ ಸೆನೆಟ್ ಎಂದು ತಾನೇ ಹೇಳುವುದು. ಕನ್ನಡದಲ್ಲೇನಾದರೂ ಬೇರೆ ಬದಲಾವಣೆಯಾಗುತ್ತಾ?

ಡಾ: ಜಿ. ಪರಮೇಶ್ವರ್ :— ಇಂಗ್ಲೀಷ್‌ನಲ್ಲಿ ಸೆನೆಟ್ ಎಂದು ಇಲ್ಲ, ಅದರಲ್ಲಿ ನೋಡಿ; ಇಂಗ್ಲೀಷ್ ಕಾಪಿಯನ್ನು ದಯಮಾಡಿ ಓದಿ.

SRI D.B. Chandre Gowda :— "The Syndicate may on the recommendation of the Academic Council withdraw any distinction, degree, diploma...." ಎಂದಿದೆ.

ಶ್ರೀ ಎ. ರಾಮದಾಸ್ :— ಮಾನ್ಯ ಅಧ್ಯಕ್ಷರೇ, ನಿನ್ನೆ ಇಲ್ಲಿ ಪ್ರಮುಖವಾದಂಥ ವಿಚಾರವನ್ನು ಹೇಳುವ ಸಂದರ್ಭದಲ್ಲಿ ಸನ್ಮಾನ್ಯ ಸಚಿವರು ಒಂದು ವಿಚಾರವನ್ನು ಹೇಳಿದರು. ನಾನು ಆಗಲೇ ಹೇಳಿದಹಾಗೆ ಯಾವ ರೀತಿಯಲ್ಲಿ ಸರ್ಕಾರ ಸಂಪೂರ್ಣವಾಗಿ ದುರುಪಯೋಗ ಮಾಡಿಕೊಳ್ಳಬಹುದು, ಎಂದರೆ ವಿಶೇಷವಾಗಿ ಹೇಳುವುದಾದರೆ ಹೆಲ್ತ್ ಯೂನಿವರ್ಸಿಟಿಯಲ್ಲಿ ಆದ ಮೂರು ಕಾಲೇಜುಗಳಿಗೆ ಅಫಿಲಿಯೇಷನನ್ನು ಕೊಡುವುದಕ್ಕೋಸ್ಕರವಾಗಿ ಏನು ನಡೆದಿದೆ ಎಂದು ಎಲ್ಲರ್ಗೂ ಗೊತ್ತಿರುವ ವಿಚಾರವೇ ಆಗಿದೆ. ಆಗಲೇ ಹೇಳಿದ ಹಾಗೆ ಸೆಲೆಕ್ಟೀವ್ ಆಗಿ ಮೂರು ಜನರನ್ನು ತೆಗೆದುಕೊಂಡು ಕೊಡುವ ವರದಿಯಲ್ಲೂ ಯಾವ ರೀತಿಯಾದಂಥ ತಪ್ಪುಗಳನ್ನು ಸರ್ಕಾರ ಮಾಡಿದೆ, ಈ

ದೃಷ್ಟಿಯಲ್ಲಿ ದುರುಪಯೋಗ ಮಾಡಿಕೊಳ್ಳುವ ವ್ಯವಸ್ಥೆಯಾಗುತ್ತಿದೆ. ನಿನ್ನೆಯ ದಿವಸ ತಾವು ಒಂದು ಪ್ರಶ್ನೆಯನ್ನು ಕೇಳಿದಿರಿ. ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದಿರಿ. ಕಾಂಗ್ರೆಸ್ಸೀಕರಣ ಆಗುತ್ತಾ ಇದೆ ಎಂದ ತಕ್ಷಣದಲ್ಲೇ ಕಾಂಗ್ರೆಸ್ ಎನ್ನುವ ಪದ ಎಲ್ಲಿದೆ ತೋರಿಸಿ? ಇನ್ನೊಂದು ಕೇಳಿದಿರಿ, ಕಾಂಗ್ರೆಸ್‌ನ ಕಲರ್ ಏನಾದರೂ ಕೂಡ ಆಕ್ಟ್ ಒಳಗೆ ಇದೆಯೇ ಎನ್ನುವ ಮಾತನ್ನು ತಾವು ಕೇಳಿದಿರಿ. ಅದಕ್ಕೆ ನಾನು ಇವತ್ತು ಉತ್ತರವನ್ನು ಹೇಳಬೇಕಾಗುತ್ತದೆ. ಇವತ್ತು ಎರಡು ಯೂನಿವರ್ಸಿಟಿಗಳ ಇಬ್ಬರು ವೈಸ್ ಛಾನ್ಸಲರ್‌ಗಳನ್ನು ನೇಮಕ ಮಾಡುವ ಸಂದರ್ಭದಲ್ಲಿ ಸರ್ಕಾರ ಏನು ಹೇಳಿತ್ತೋ ಅದನ್ನು ರಾಜ್ಯಪಾಲರು ಕೇಳುವುದಕ್ಕಾಗಲಿಲ್ಲ ಎನ್ನುವ ವಿಚಾರಕ್ಕೋಸ್ಕರವಾಗಿ ಅವರ ಅಧಿಕಾರವನ್ನು ಕೀಳುತ್ತಿದ್ದೀರಿ. ಸೆನೆಟ್‌ನ್ನು ಏತಕ್ಕೋಸ್ಕರ ತೆಗೆದುಹಾಕುತ್ತಿದ್ದೀರಿ? ಬೆಂಗಳೂರು ಯೂನಿವರ್ಸಿಟಿಗೆ ತಾವು ಸಿಂಡಿಕೇಟ್‌ಗೆ ಡಿ. ಶಿವಣ್ಣ ಎನ್ನುವಂಥವರನ್ನು ನೇಮಕ ಮಾಡಿದಿರಿ. ಯಾರು ಆ ಶಿವಣ್ಣ? ಸರ್ಕಾರದಲ್ಲಿ ಇವತ್ತು ಎಕ್ಸ್‌ಪರ್ಟ್ ಆಗಿರತಕ್ಕವರು ವಿಶ್ವವಿದ್ಯಾನಿಲಯದಲ್ಲೆಲ್ಲಾ ಬಹಳ ಹೆಸರನ್ನು ಮಾಡಿದವರೇ? ನಾವು ಕೇಳಿದರೆ ನಿಮಗೆ ಕೋಪ ಬರುತ್ತದೆ. ಸದನದ ನಾಯಕರಾದ ಮಾನ್ಯ ಮುಖ್ಯಮಂತ್ರಿಗಳ ಸ್ವಂತ ಕಸಿನ್ ಅವರು.

ಶ್ರೀ ಎ. ಮಂಜು :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ನಾಮಿನೇಷನ್ ಮಾಡಿದ್ದರ ಬಗ್ಗೆ ಹೇಳಿದರು. ಪ್ರೊಫೆಸರ್ ಶಿವಣ್ಣ ಯಾರು ಎನ್ನುವ ವಿಚಾರವನ್ನು ನಾವು ತಿಳಿದುಕೊಳ್ಳಬೇಕು. ಅವರು ಕೂಡ ವಿಶ್ವವಿದ್ಯಾನಿಲಯದಲ್ಲಿ ಪ್ರೊಫೆಸರ್ ಆಗಿರತಕ್ಕವರು ನಾಮಿನೇಷನ್ ಮಾಡಬೇಕಾದರೆ ಒಕ್ಕಲಿಗರು, ಬ್ರಾಹ್ಮಣರು, ಲಿಂಗಾಯಿತರು ಎಂದು ಅವರವರ ನೆಂಟರು ಇದ್ದೇ ಇರುತ್ತಾರೆ. ಅಲ್ಲಿ ನೆಂಟರ ಮೇಲೆ ಅವರ ನೇಮಕ ಮಾಡಿಲ್ಲ. ಅವರು ಬೆಂಗಳೂರು ಯೂನಿವರ್ಸಿಟಿಯಲ್ಲಿ ಕೆಲಸ ಮಾಡಿದ ರಿಟೈರ್ಡ್ ಆದ ಪ್ರೊಫೆಸರ್‌ರವರು. ಅವರನ್ನು ನೆಂಟರು ಎಂದು ಹೇಳಿ ಮಾಡಿದ್ದರೆ ಅದು ತಪ್ಪಾಗುತ್ತದೆ, ಅವರು ನೆಂಟರಲ್ಲ. ಅವರು ಬೆಂಗಳೂರು ಯೂನಿವರ್ಸಿಟಿಯಲ್ಲಿ ಎಕನಾಮಿಕ್ಸ್ ಪ್ರೊಫೆಸರ್ ಆಗಿದ್ದವರು.

ಶ್ರೀ ಎ. ರಾಮದಾಸ್ :— ಮಾನ್ಯ ಅಧ್ಯಕ್ಷರೇ, ಅವರು ನಿನ್ನೆ ಹೇಳಿದಂಥ ಮಾತಿಗೆ, ಇವತ್ತು ತಮಗೆ ಮಂತ್ರಿಗಳಿಗೆ ಬೇಕಾದವರನ್ನು, ಕಾಂಗ್ರೆಸ್‌ಗೆ ಬೇಕಾದಂಥವರನ್ನು ಅಲ್ಲಿ ನೇಮಕ ಮಾಡಿಕೊಳ್ಳುವುದಕ್ಕೋಸ್ಕರ ಮಾಡಿರುವ ಹುನ್ನಾರ ಎಂದು ಹೇಳುವಂಥ ಮಾತು. ಹೌದು. ಇವತ್ತು ಮುಖ್ಯಮಂತ್ರಿಗಳಿಗೆ ಸಂಬಂಧಿಗಳಾದರು. ಹತ್ತಿರ ಇದ್ದಾರೇನೊ ಎನ್ನುವ ದೃಷ್ಟಿಯಿಂದ ಇದಾಯಿತು. ಬೇರೆ ಇದಕ್ಕಿಂತಲೂ ಹೆಚ್ಚು ಕ್ವಾಲಿಫೈಡ್ ಇರುವವರೂ ಇರಬಹುದು. ಆದರೆ ನೇಮಕಾತಿ ಎಲ್ಲಿಗೆ ಬರುತ್ತೆ ಎನ್ನುವ ಮಾತನ್ನು ಹೇಳುವುದಕ್ಕೋಸ್ಕರವಾಗಿ ಹೇಳಿದೆ. ಎರಡನೆಯದು ಶ್ರೀ ನಂಜುಂಡಪ್ಪನವರು ರಿಟೈರ್ಡ್ ಡಿಸಿ ಅವರು, ಅವರು ಯಾರಿಗೆ ಸಂಬಂಧಿಗಳು? ಯಾರಿಗೆ ಹತ್ತಿರದವರು? ಇದನ್ನು ನಾನು ಹೇಳಬೇಕಾದ

ಅವಶ್ಯಕತೆ ಇಲ್ಲ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ ಒಂದು ಸಲ ರಾಜ್ಯ ಸರ್ಕಾರ ಸಂಪೂರ್ಣವಾಗಿ ಇದ್ದ ಅಧಿಕಾರವನ್ನು ತೆಗೆದುಕೊಳ್ಳುವುದಕ್ಕೆ ಹೊರಟರೆ ಯಾರ್ಯಾರನ್ನು ನೇಮಕ ಮಾಡುವುದಕ್ಕೆ ಹೊರಡುತ್ತೀರಿ? ಯಾರನ್ನು ನಾಮಿನೇಷನ್ ಮಾಡುವುದಕ್ಕೆ ಹೊರಡುತ್ತೀರಿ? ಇದು ಬಹಳ ಪ್ರಮುಖವಾದ ವಿಚಾರ. ತಮ್ಮ ಯೂನಿವರ್ಸಿಟಿ ಆಕ್ಟ್ ಪ್ರಕಾರವಾಗಿ ಎರಡು ವಿಶ್ವವಿದ್ಯಾನಿಲಯಗಳಿಗೆ ಒಬ್ಬರು ಬರುವುದಕ್ಕೆ ಸಾಧ್ಯವಿಲ್ಲ. ಇದು ಕಾನೂನು; ಹೌದಲ್ಲ! ಎರಡು ವಿಶ್ವವಿದ್ಯಾನಿಲಯಗಳಿಗೆ ಆಗ ಸುಲ್ತಾನ್ ಎನ್ನುವ ಒಬ್ಬರು ವ್ಯಕ್ತಿಯನ್ನು ತಾವು ಎರಡು ಯೂನಿವರ್ಸಿಟಿಗಳಿಗೆ ಮಾಡಿದ್ದೀರಿ; ಒಂದು ಟೆಕ್ನಿಕಲ್ ಯೂನಿವರ್ಸಿಟಿಯಲ್ಲೂ ಇದ್ದಾರೆ; ಮತ್ತೊಂದು ಯೂನಿವರ್ಸಿಟಿಗೆ ಕೂಡ ತಾವು ಸಿಂಡಿಕೇಟ್‌ಗೆ ಅವರನ್ನು ನಾಮಿನೇಟ್ ಮಾಡುವ ವ್ಯವಸ್ಥೆಯನ್ನು ಮಾಡಿದ್ದೀರಿ. ಇದು ಏಕೆ?

ಡಾ: ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :— ಮಾನ್ಯ ಅಧ್ಯಕ್ಷರೇ, ಈ ನಾಮಿನೇಷನ್‌ನೆಲ್ಲಾ ಯಾರು ಮಾಡಿದ್ದು ಎಂದು ತಮಗೆ ಗೊತ್ತಿರಬಹುದು. ಏಕೆಂದರೆ ನಾವು ಪ್ಯಾನಲ್‌ನಷ್ಟೇ ಕಳುಹಿಸಿದ್ದು. ಆದರೆ ಅದನ್ನು ಸೆಲೆಕ್ಟ್ ಮಾಡಿ ಅಪಾಯಿಂಟ್ ಮಾಡಿದಂಥವರು, ನಾಮಿನೇಟ್ ಮಾಡಿದಂಥವರು ಮಾನ್ಯ ರಾಜ್ಯಪಾಲರು.

ಶ್ರೀ ಎ. ರಾಮದಾಸ್ :— ಅಂದರೆ ಛಾನ್ಸಲರ್ ಮೇಲೆ ಇನ್ನೊಂದು ಪ್ರಭಾವವನ್ನು ಬೀರಿ ತಮಗೆ ಬೇಕಾದವರನ್ನು ನೇಮಕ ಮಾಡಿಸುವ ವ್ಯವಸ್ಥೆಗಳನ್ನು ನೀವು ಮಾಡುವುದಾದರೆ ನೀವೇ ಅಧಿಕಾರವನ್ನು ತೆಗೆದುಕೊಂಡರೆ ಹೇಗಾಗುತ್ತದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :— ಮಾನ್ಯ ಅಧ್ಯಕ್ಷರೇ, ನಿಮ್ಮ ಮೊದಲ ಆರ್ಗ್ಯುಮೆಂಟ್ ಏನು ಇತ್ತು? ನೀವು ಬೇಕಾದವರನ್ನು ನಾಮಿನೇಟ್ ಮಾಡುತ್ತೀರಿ ಎಂದು ಹೇಳಿದಿರಿ. ಈಗೇನು ಹೇಳುತ್ತೀರಿ, ರಾಜ್ಯಪಾಲರೇ ಮಾಡಿದ್ದಾರೆಂದರೆ ಹೀಗೇ ನೀವು ಪ್ರಭಾವವನ್ನು ಬೀರಿ ಮಾಡುವಾಗ ಎನ್‌ಟೈರ್ ಅಧಿಕಾರ ನಿಮ್ಮ ಕೈಗೆ ಬಂದಾಗ ಇನ್ನೆಷ್ಟು ಮಾಡುತ್ತೀರಿ ಎಂದು ಇನ್ನೊಂದು ಕಡೆ ಹೇಳುತ್ತೀರಿ.

ಶ್ರೀ ಎ. ರಾಮದಾಸ್ :— ರಾಜ್ಯಪಾಲರ ಮೇಲೆ ಸರ್ಕಾರ ಹಣವನ್ನು ವಿಶ್ವವಿದ್ಯಾನಿಲಯಗಳಿಗೆ ಕೊಡುತ್ತದೆ ಎನ್ನುವ ವಿಚಾರವಿದ್ದಾಗಲೇ ಇನ್ನೊಂದು ಪ್ರಭಾವವನ್ನು ಬೀರಿ ತಾವು ಮಾಡುತ್ತೀರಿ. ನಿಮ್ಮ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರು ಪ್ರೊಫೆಸರ್ ಆಗಿದ್ದಾರೆ, ಅವರ ಸಂಬಂಧಿಗಳು ಎಂದು ತೆಗೆದುಹಾಕಿಬಿಡಿ ಎಂದು ಹೇಳಿದಿರಿ. ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್‌ಗೆ ತಾವು ನೇಮಕ ಮಾಡುತ್ತೀರಲ್ಲ, ಮಿನಿಮಮ್ ಗ್ರಾಜುಯೇಟ್ ಆಗಿರಬೇಕು ಎನ್ನುವ ಅರಿವು ಇರುತ್ತದೆ ತಾನೆ. ಒಬ್ಬರು ಪಿಯುಸಿ ಫೇಲ್ ಆದವರನ್ನು ಅಲ್ಲಿಗೆ ಹಾಕಿದ್ದೀರಿ.

ಡಾ: ಜಿ. ಪರಮೇಶ್ವರ್ :— ಈ ಅಮೆಂಡ್‌ಮೆಂಟ್‌ನಲ್ಲಿ ಇದೆ; ಮಿನಿಮಮ್ ಒಂದು ಯೂನಿವರ್ಸಿಟಿಯ ಗ್ರ್ಯಾಜುಯೇಟ್ ಇರಬೇಕೆಂದು ಇದೆ.

ಶ್ರೀ ಎ. ರಾಮದಾಸ್ :— ನಾನು ಅದನ್ನೇ ಹೇಳುತ್ತಿದ್ದೇನೆ; ತಮ್ಮ ಯೂತ್ ಕಾಂಗ್ರೆಸ್ ವೈಸ್ ಪ್ರೆಸಿಡೆಂಟ್ ಶ್ರೀ ಬಸವರಾಜು ಎನ್ನುವವರನ್ನು ಅಕಾಡೆಮಿಕ್ ಕೌನ್ಸಿಲ್‌ಗೆ ಸರ್ಕಾರ ರೆಕಮೆಂಡ್ ಮಾಡಿದೆ. ಅವರು ಪಾಸಾಗಿರುವುದು ಕೇವಲ ಎಸ್‌ಎಸ್‌ಎಲ್‌ಸಿ.

ಅಧ್ಯಕ್ಷರು :— ಮಾನ್ಯ ರಾಮದಾಸ್‌ರವರೇ, ಈ ಸಭೆಯಲ್ಲಿ ಇಲ್ಲದಿರುವವರ ಹೆಸರು ಏಕೆ ಹೇಳುತ್ತೀರಿ? ಇನ್ ಜನರಲ್ ಹೇಳಿ. ನಿಮಗೆ ಬೇಕಾದವರನ್ನು ಮಾಡುತ್ತೀರಿ ಎಂದು ಹೇಳುತ್ತಿದ್ದೀರಿ. ನಿಮ್ಮ ಸರ್ಕಾರ ಬಂದಾಗ ನೀವೂ ಮಾಡುತ್ತೀರಿ.

ಶ್ರೀ ಎ. ರಾಮದಾಸ್ :— ಕೇವಲ ಒಬ್ಬರು ಗ್ರ್ಯಾಜುಯೇಟ್ ಅಲ್ಲದಿರುವವರನ್ನು ಅವರು ಯೂತ್ ಕಾಂಗ್ರೆಸ್‌ನಲ್ಲಿರುತ್ತಾರೆ ಎನ್ನುವ ಒಂದೇ ಒಂದು ಕಾರಣಕ್ಕೋಸ್ಕರ ಮಾಡುವುದಾದರೆ ಇನ್ನು ಮುಂದೆ ತಾವು ಹೇಗೆ ಮಾಡುತ್ತೀರಿ?

ಶ್ರೀ ಎ. ಮಂಜು :— ಮಾನ್ಯ ಸದಸ್ಯರು ಒಬ್ಬರ ಮೇಲೆ ಆರೋಪವನ್ನು ಮಾಡಬೇಕಾದರೆ ಅವರ ಹಿನ್ನೆಲೆಯನ್ನು ತಿಳಿದುಕೊಳ್ಳಬೇಕು. ಶ್ರೀ ಬಸವರಾಜ್ ಎನ್ನುವವರು ಇಂಜಿನಿಯರಿಂಗ್ ಸ್ಟೂಡೆಂಟ್. ಬಿಐಟಿ ಕಾಲೇಜಿನಲ್ಲಿ ಓದಿರುವವರು. ವೈಸ್ ಸಿಗುತ್ತೆ ಎಂದು ಕೇಳಿ ಇಲ್ಲದೇ ಇರುವುದನ್ನೆಲ್ಲಾ ಮಾತನಾಡಿದರೆ ತಪ್ಪಾಗುತ್ತದೆ. ನಾವು ಮಾಹಿತಿಯನ್ನು ಈಗ ಕೊಡುತ್ತೇವೆ.

ಶ್ರೀ ಎ. ರಾಮದಾಸ್ :— ನಾನು ತಪ್ಪು ಹೇಳುತ್ತಿಲ್ಲ; ನಾನು ಹೇಳಿದೆ, ಪಿಯುಸಿ ಪಾಸಾಗಿ ಮೊದಲನೆಯ ವರ್ಷ ಇಂಜಿನಿಯರಿಂಗ್ ಕಾಲೇಜಿಗೆ ಸೇರಿ ಫೇಲ್ ಆಯಿತು. ಅಷ್ಟಕ್ಕೇ ಬಿಟ್ಟರು ಎಂದು ನೇರವಾಗಿ ಹೇಳುತ್ತಿದ್ದೇನೆ. ನಾನು, ಸ್ವಾಗತ ಮಾಡುವ ವಿಚಾರಗಳನ್ನು ಕೂಡ ಸ್ವಾಗತ ಮಾಡಿದ್ದೇನೆ; ಒಳ್ಳೆಯ ವಿಚಾರಗಳ ಬಗ್ಗೆ ಸ್ವಾಗತವನ್ನು ಮಾಡಿದ್ದೇನೆ. ಒಳ್ಳೆಯ ವಿಚಾರಗಳನ್ನು ಹೇಳುವಾಗ ಅದನ್ನು ಸ್ವಾಗತ ಮಾಡುತ್ತಾ ಅದಕ್ಕೆ ಸಂತೋಷಪಡುತ್ತೀರಿ. ತಪ್ಪಾಗಿರುವ ವಿಷಯಗಳಿದ್ದರೆ ಅದನ್ನು ತಪ್ಪು ಎಂದು ಹೇಳಿದಾಗ ಅದನ್ನೂ ಕೇಳಬೇಕಲ್ಲ.

11.30 ಎ.ಎಂ.

ಶ್ರೀ ಎನ್. ಸಂಪಂಗಿ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ರಾಮದಾಸ್‌ರವರು ಈಗ ಏನು ಹೇಳುತ್ತಿದ್ದಾರೆ, ಅವೆಲ್ಲಾ ಸತ್ಯ, ಬೇರೆಯವರು ಹೇಳುತ್ತಿರುವುದೆಲ್ಲಾ ಸುಳ್ಳು ಎನ್ನುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ.

ಶ್ರೀ ಎ. ರಾಮದಾಸ್ :— ಒಳ್ಳೆಯ ಅಂಶಗಳು ಏನೇನಿವೆಯೋ ಅವೆಲ್ಲವನ್ನೂ ನಾನು ಸ್ವಾಗತಿಸಿದ್ದೇನೆ. ಆದರೆ, ಇದರಲ್ಲಿ ವಿಶೇಷವಾಗಿ ಚಾನ್ಸಲರ್‌ಗೆ ಮತ್ತು ರಾಜ್ಯಪಾಲರಿಗೆ ಇದ್ದಂಥ ಅಧಿಕಾರವನ್ನು ಕಿತ್ತುಕೊಂಡು ರಾಜ್ಯ ಸರ್ಕಾರ ರಾಜಕಾರಣ ಮಾಡುವಂಥ ವ್ಯವಸ್ಥೆ ಮಾಡಿ ವಿಶ್ವವಿದ್ಯಾನಿಲಯವನ್ನು ಕಾಂಗ್ರೆಸ್ ಭವನ ಮಾಡಲು ಹೊರಟಿರುವುದಕ್ಕೆ ನನಗಾಗಿರುವ ನೋವನ್ನು ತೋಡಿಕೊಂಡಿದ್ದೇನೆ. ಹಾಗೆಯೇ ಸೆಕ್ಷನ್ 45(5)ರಲ್ಲಿ ಅಧಿಕಾರದ ದುರುಪಯೋಗವಾಗಿ, ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದಲ್ಲಿ ಹಿಂದೆ ಏನೇನು ಅವ್ಯವಹಾರಗಳಾಯಿತು ಎಂಬುದರ ಬಗ್ಗೆ ಎಲ್ಲಾ ವಿಷಯಗಳನ್ನು ತಮ್ಮ ಮುಂದಿಟ್ಟಿದ್ದೇನೆ. ಆ ದೃಷ್ಟಿಯಿಂದ ಈ ವಿಧೇಯಕವನ್ನು ಇವೊತ್ತು ಜಂಟಿ ಸದನದ ಸಲಹಾ ಸಮಿತಿಗೆ ವಹಿಸಿಕೊಡಬೇಕು. ನೀವು ತಂದಿರುವಂಥ ವಿಧೇಯಕಕ್ಕೆ ಏನೇನು ಬದಲಾವಣೆಗಳಾಗಬೇಕೆಂಬುದನ್ನು ನಾವು ಸಮಿತಿಯಲ್ಲಿ ಸೂಚಿಸುತ್ತೇವೆ ಮತ್ತು ರಾಜ್ಯದಲ್ಲಿ ಈ ಸಮಗ್ರ ವಿಧೇಯಕವನ್ನು ತಂದಂಥ ಕೀರ್ತಿ ನಿಮ್ಮದಾಗಲಿ. ಬದಲಾವಣೆ ಮಾಡುವಂಥ ವ್ಯವಸ್ಥೆ ಬಗ್ಗೆ ತಾವು ಮಾತನಾಡುತ್ತಾ ಆಂಧ್ರಪ್ರದೇಶವನ್ನು ಉದಾಹರಣೆಯಾಗಿ ಕೊಟ್ಟಿರಿ. ಇವೊತ್ತು ಆಲ್ ಇಂಡಿಯಾ ಎಂಟ್ರೆನ್ಸ್ ಎಕ್ಸಾಮಿನೇಷನ್‌ನಲ್ಲಿ ಆಂಧ್ರಪ್ರದೇಶ ಎಲ್ಲೂ ಕೂಡ ಭಾಗವಹಿಸುತ್ತಿಲ್ಲ, ಅವರು ಸೀಟು ಕೊಡುತ್ತಿಲ್ಲ. ಇದರ ಜೊತೆಗೆ ಯು.ಜಿ.ಸಿ.ಯಿಂದ ಬರುತ್ತಿರುವ ಹಣವೂ ಕಡಿತವಾಗುತ್ತಿದೆ. ಆ ರಾಜ್ಯದಲ್ಲಿರುವಂಥ ಯಾರೂ ಕೂಡ ಆಲ್ ಇಂಡಿಯಾ ಎಂಟ್ರೆನ್ಸ್ ಎಕ್ಸಾಮಿನೇಷನ್ ತೆಗೆದುಕೊಳ್ಳಲು ಪ್ರಾವಿಜನ್ ಇಲ್ಲ. ಆದರೆ, ನಮ್ಮ ರಾಜ್ಯಕ್ಕೆ ಈ ಕೀರ್ತಿ ಇದ್ದು, ಇಡೀ ದೇಶದಲ್ಲಿಯೇ ಆಲ್ ಇಂಡಿಯಾ ಎಂಟ್ರೆನ್ಸ್ ಎಕ್ಸಾಮಿನೇಷನ್‌ನಲ್ಲಿ ನಮ್ಮ ರಾಜ್ಯದವರೇ ಫಸ್ಟ್ ಬರುತ್ತಿದ್ದಾರೆ.

ಡಾ: ಜಿ. ಪರಮೇಶ್ವರ್ :— ತಾವು ಮಾತನಾಡುತ್ತಾ ಆಂಧ್ರಪ್ರದೇಶದಲ್ಲಿ ಯಾವುದೇ ಎಂಟ್ರೆನ್ಸ್ ಎಕ್ಸಾಮಿನೇಷನ್ ತೆಗೆದುಕೊಳ್ಳುವುದಿಲ್ಲ, ಕಾಂಪಿಟೇಟಿವ್ ಎಕ್ಸಾಮಿನೇಷನ್ ತೆಗೆದುಕೊಳ್ಳುವುದಿಲ್ಲ, ಅಲ್ಲಿ ಬೇರೆ ರೀತಿಯ ವ್ಯವಸ್ಥೆ ಮಾಡಿದ್ದಾರೆಂದು ಸುಮ್ಮನೆ ಹೇಳುವುದಕ್ಕಾಗುವುದಿಲ್ಲ. ಇದಕ್ಕೆಲ್ಲಾ ತಾವು ಅಂಕಿ-ಅಂಶಗಳನ್ನು ಒದಗಿಸಬೇಕಾಗುತ್ತದೆ. If you take the statistics of people who have passed I.A.S., ಆಂಧ್ರಪ್ರದೇಶದ ವಿಶ್ವವಿದ್ಯಾನಿಲಯದಿಂದ ಎಷ್ಟು ಜನ ಪದವೀಧರರು ಪಾಸಾಗಿ ಬಂದಿದ್ದಾರೆ? ಅದಕ್ಕೆ ಯಾವ ರೀತಿ ರೆಕಗ್ನಿಷನ್ ಸಿಕ್ಕಿದೆ? ಮುಂತಾದ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ತಾವು ಮಾಹಿತಿ ಕೊಡಬೇಕು. ಸುಮ್ಮನೆ ಹೇಳಿದರೆ ಸದನಕ್ಕೆ ತಪ್ಪು ಮಾಹಿತಿ ನೀಡಿದಂತಾಗುತ್ತದೆ.

ಶ್ರೀ ಎ. ರಾಮದಾಸ್ :— ಆಂಧ್ರಪ್ರದೇಶದಲ್ಲಿರುವಂಥ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಆಲ್ ಇಂಡಿಯಾ ಎಂಟ್ರೆನ್ಸ್ ಎಕ್ಸಾಮಿನೇಷನ್, ಅದು ಮೆಡಿಕಲ್ ಇರಬಹುದು, ಅದಕ್ಕೆ ರಾಜ್ಯ ಸರ್ಕಾರ ಕೋಟಾ ಕೊಡುವುದಿಲ್ಲ. ಅಲ್ಲಿನ ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೂ ಆಲ್ ಇಂಡಿಯಾ ಎಂಟ್ರೆನ್ಸ್ ಎಕ್ಸಾಮಿನೇಷನ್‌ಗೆ ಹೋಗುವುದಕ್ಕೆ ಪ್ರಾವಿಜನ್ ಇಲ್ಲ.

ಏಕೆಂದರೆ, ಇಂತಿಂಥ ವಿಚಾರಗಳಿಗೆ ಸಂಬಂಧಿಸಿದಂತೆ ಅಲ್ಲಿ ತಿದ್ದುಪಡಿಯಾಗಿ ಬಂದಿರುವುದರಿಂದ ಸಮಸ್ಯೆಯುಂಟಾಗಿದೆಯೆಂಬ ವಿವರಗಳನ್ನು ತಮಗೆ ಕೊಡುತ್ತೇನೆ. ಆದುದರಿಂದ, ಈ ವಿಧೇಯಕವನ್ನು ಪರಿಶೀಲನೆಗಾಗಿ ಜಂಟಿ ಸದನ ಸಲಹಾ ಸಮಿತಿಗೆ ವಹಿಸಿಕೊಡಬೇಕೆಂದು ಹೇಳುತ್ತಾ, ನಾನು ಒಳ್ಳೆಯ ವಿಚಾರಗಳನ್ನು ಸ್ವಾಗತಿಸಿದ್ದು, ತಪ್ಪಾಗಿರುವಂಥ ವಿಚಾರಗಳನ್ನು ತಮ್ಮ ಮುಂದಿಟ್ಟಿದ್ದೇನೆ. ತಪ್ಪಾಗಿರುವುದನ್ನು ಸರಿಪಡಿಸಿಕೊಳ್ಳುವಂಥ ಕೆಲಸ ಮಾಡಬೇಕೆಂದು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) :— ಸನ್ಮಾನ್ಯ ಅಧ್ಯಕ್ಷರೆ, ನಾನು ಇವೊತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕದ ಬಗ್ಗೆ ಒಂದೆರಡು ಉಪಯುಕ್ತ ಸಲಹೆಗಳನ್ನು ನೀಡುವ ದೃಷ್ಟಿಯಿಂದ ಮಾತನಾಡಲು ಎದ್ದು ನಿಂತಿದ್ದೇನೆ. ನನ್ನದು ಭಾಷಣವಲ್ಲ. ಮಾನ್ಯ ಉನ್ನತ ಶಿಕ್ಷಣ ಸಚಿವರು ಒಳ್ಳೆಯ ಉದ್ದೇಶವಿಟ್ಟುಕೊಂಡು ಈ ವಿಧೇಯಕವನ್ನು ತಂದಿದ್ದು, ಇದಕ್ಕೆ ಪೂರಕವಾಗಿ ನನ್ನ ಕೆಲವು ಸಲಹೆಗಳನ್ನು ಪ್ರಸ್ತುತವಾಗಿ ಇಡಬೇಕೆಂಬುದು ಇಚ್ಛೆಯಾಗಿದೆ. ನಾನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಓದಿದವನಾಗಿದ್ದು, ವಿಶ್ವವಿದ್ಯಾನಿಲಯದ ನಿಕಟ ಸಂಬಂಧ ಹೊಂದಿರುವವನಾಗಿದ್ದು ಸೆನೆಟ್ ಸದಸ್ಯನಾಗಿ ವಿಶ್ವವಿದ್ಯಾನಿಲಯದಲ್ಲಿ ಜರುಗುವ ಅನೇಕ ಸಭೆ, ಸಮಾರಂಭಗಳಲ್ಲಿ ಭಾಗವಹಿಸಿರುವ ನಾನು ವಿಶ್ವವಿದ್ಯಾನಿಲಯ ಎನ್ನುವುದರ ಬಗ್ಗೆ ನನಗಾಗಿರುವ ಕಟು ಅನುಭವಗಳನ್ನು ನಿಮ್ಮ ಮುಂದಿಡುವುದಕ್ಕೆ ಇಚ್ಛಿಸುತ್ತೇನೆ. ಯೂನಿವರ್ಸಿಟಿ ಸೆನೆಟ್ ಮೀಟಿಂಗ್ ಕೂಡ ನಮ್ಮ ಪೊಲಿಟಿಕಲ್ ಮೀಟಿಂಗ್ ನಡೆಯುವಂಥ ರೀತಿಯಲ್ಲಿ ಜರುಗಿ ಸತ್ಯಾಗ್ರಹ, ಶೌಟಿಂಗ್, ಸ್ಲೋಗನ್ಸ್, ಡೌನ್‌ವಿತ್ ಪ್ರೊಟೆಸ್ಟ್ ಮುಂತಾದೆಲ್ಲವೂ ಸೆನೆಟ್ ಮೀಟಿಂಗ್‌ನಲ್ಲಿ ನಡೆಯುತ್ತಿರುವುದನ್ನು ನೋಡಿ ನನ್ನ ಮನಸ್ಸಿಗೆ ಸ್ವಲ್ಪ ನೋವಾಯಿತು. ನಮ್ಮ ಯೂನಿವರ್ಸಿಟಿ ಎಲ್ಲಿಯೋ ತಪ್ಪು, ಹೆಜ್ಜೆ ಇಡುತ್ತಿದೆಯೆಲ್ಲಾ, ಇಲ್ಲೇಕೆ ಧರಣಿ, ಸತ್ಯಾಗ್ರಹ, ಕೌಂಟರ್ ಚಾರ್ಜಸ್, ಶೌಟಿಂಗ್ ಬಿಸಿನೆಸ್ ಬಂತು? ಸೆನೆಟ್, ಸಿಂಡಿಕೇಟ್, ಅಕಾಡೆಮಿಕ್ ಕೌನ್ಸಿಲ್ ಎಂದರೆ ಬುದ್ಧಿಜೀವಿಗಳು ಇರುವಂಥ ಬಾಡಿಗಳು ಇಲ್ಲೇಕೆ ಇಂತಹ ಪರಿಸ್ಥಿತಿ ಬಂತು? ಈ ಸಂಸ್ಥೆ ಏಕೆ ಈ ದಿಕ್ಕಿನಲ್ಲಿ ಹೋಗುತ್ತಿದೆಯೆಂದು ಯೋಚಿಸಿದಾಗ ಈ ಸಂಸ್ಥೆಗೆ ಕಾಯಕಲ್ಪ ಆಗಬೇಕಾಗಿದೆಯೆಂದು ನನಗನ್ನಿಸಿತು. ಈ ಸಂಸ್ಥೆಗೆ ನಾಮಿನೇಟ್ ಆಗಿ ಬರುವಂಥ ಜನರು ಯಾರಿದ್ದಾರೆ, ಇಲ್ಲಿಗೆ ಬರುವ ಸರಸ್ವತಿಗೆ ಹತ್ತಿರವಿರುವ ಬುದ್ಧಿಜೀವಿ ಜನರು ಯಾರಿದ್ದಾರೆ, ವಿದ್ಯಾದಾನ ಮಾಡುವುದಕ್ಕೆ ಯಾರು ಅರ್ಹರಿದ್ದಾರೆ, ಅಂತಹವರು ಇಂತಹ ಸಂಸ್ಥೆಯಲ್ಲಿದ್ದರೆ ಬಹುಶ: ಇಂತಹ ಪರಿಸ್ಥಿತಿ ಬರಲಾರದೆಂಬ ಭಾವನೆ ನನ್ನ ಮನಸ್ಸಿಗೆ ಬಂತು. ಅದೊಂದು ಘಟನೆಯೇ ನಾನು ಇವತ್ತು ಈ ವಿಷಯ ಕುರಿತಂತೆ ಪೂರಕವಾಗಿ ಮಾತನಾಡುವುದಕ್ಕೆ ಪ್ರೇರಣೆಯಾಯಿತು. ಎರಡನೆಯದಾಗಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿರುವ ಮತ್ತೊಂದು ಘಟನೆ ಏನೆಂದರೆ, ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ತಾವು ಮೌಲ್ಯಮಾಪನ ಮಾಡುವುದಿಲ್ಲವೆಂದು ವಿಶ್ವವಿದ್ಯಾನಿಲಯದ ಪ್ರೊಫೆಸರ್‌ಗಳು ಮತ್ತು ರೀಡರ್‌ಗಳು ಮುಷ್ಕರ

ಹೊಂದಿದ್ದೇವೆ. ತಾವೆಲ್ಲರೂ ಈ ಘಟನೆಯನ್ನು ಜ್ಞಾಪಿಸಿಕೊಳ್ಳಬೇಕು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಲೆಕ್ಚರರ್ಸ್, ಪ್ರೊಫೆಸರ್ಸ್, ರೀಡರ್ಸ್ ಕೈಕೆಳಗೆ ಓದಿದಂಥ ವಿದ್ಯಾರ್ಥಿಗಳ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವುದಕ್ಕೆ ನಾವ್ಯಾರೂ ಮುಂದೆ ಬರುವುದಿಲ್ಲ, ನಮಗೆ ಇಚ್ಛೆಯಿಲ್ಲ. ನಾವೇನಾದರೂ ಮೌಲ್ಯಮಾಪನ ಮಾಡಿ ಸರಿಯಾದ ಅಂಕಗಳನ್ನು ಕೊಟ್ಟರೆ ವಿದ್ಯಾರ್ಥಿಗಳು ನಮಗೆ ಹೊಡೆಯುತ್ತಾರೆ. ಆಸಿಡ್ ಎರಚುತ್ತಾರೆ, ನಮ್ಮ ಮನೆ ಹತ್ತಿರ ಬಂದು ಗಲಾಟೆ ಮಾಡುತ್ತಾರೆ, ಅವಾಚ್ಯ ಶಬ್ದಗಳಿಂದ ಬಯ್ಯುತ್ತಾರೆಂದು ಲೆಕ್ಚರರ್ಸ್, ಪ್ರೊಫೆಸರ್ಸ್, ರೀಡರ್ಸ್ ಎಲ್ಲರೂ ಬಾಯ್ಕಾಟ್ ಮಾಡುತ್ತಾರೆ. ಅಲ್ಲಿ ಇಂತಹ ಸನ್ನಿವೇಶ ಏಕೆ ಬಂತು? ಈ ವಿಶ್ವವಿದ್ಯಾನಿಲಯವನ್ನು ಯಾವ ದಿಕ್ಕಿನತ್ತ ಕರೆದುಕೊಂಡು ಹೋಗಬೇಕೆಂಬ ಬಗ್ಗೆ ನಾವೆಲ್ಲರೂ ಚಿಂತನೆ ಮಾಡಬೇಕಾಗಿದೆ. ಅದೇ ರೀತಿ ಮತ್ತೊಂದು ಘಟನೆ ಬಗ್ಗೆ ತಮ್ಮ ಗಮನಕ್ಕೆ ತರುವುದಾದರೆ, ವಿಶ್ವವಿದ್ಯಾನಿಲಯದವರೇ ಕೊಟ್ಟಂಥ ಪದವಿ ಅಂಕಪಟ್ಟಿಗಳನ್ನು ವಿದ್ಯಾರ್ಥಿಗಳು ಒಪ್ಪದಿರುವುದರಿಂದ ಪುನಃ ರೀ-ಎಕ್ಸಾಮಿನೇಷನ್ ನಡೆಸುವಂಥ ಪರಿಸ್ಥಿತಿ ಬಂದಿದೆ . ಈ ಪರಿಸ್ಥಿತಿ ಏಕೆ ಬಂತು ? ಬಿ.ಎ. ಬಿ.ಎಸ್.ಸಿ. ಯಲ್ಲಿ ಓದಿರುವ ಯಾವ ವಿದ್ಯಾರ್ಥಿ ಮಾರ್ಕ್ಸ್‌ಕಾರ್ಡ್ ಪಡೆದುಕೊಂಡು ಅಡ್ಮಿಷನ್‌ಗೆ ಅಪ್ಲಿಕೇಷನ್ ಕೊಡುತ್ತಾನೋ, ಆತನಿಗೆ ಪುನಃ ಅಲ್ಲೊಂದು ಎಂಟ್ರಿ ಎಕ್ಸಾಮ್ ಕಂಡಕ್ಟ್ ಮಾಡುತ್ತಾರೆ. ಇದರ ಅರ್ಥ ಏನು ಸೂಚಿಸುತ್ತದೆ ? ಇದರಿಂದ ನಮ್ಮನ್ನು ನಾವೇ ಕೆಳಮಟ್ಟಕ್ಕಿಳಿಸಿಕೊಳ್ಳುತ್ತಿದ್ದೇವೆ. ಯಾವ ವಿಶ್ವವಿದ್ಯಾನಿಲಯ ನಮ್ಮಿಂದ ಮೇಲಿರಬೇಕಾಗಿತ್ತೋ, ಅದು ಇವೊತ್ತು ಕೆಳಮಟ್ಟಕ್ಕೆ ಬಂದಿದೆಯೆಂದು ನೊಂದು ಹೇಳಬೇಕಾಗುತ್ತದೆ. ವಿಶ್ವವಿದ್ಯಾನಿಲಯ ಎಂದರೆ ಅದು ಸರಸ್ವತಿ ಮಂದಿರವೆಂದು ನಾವು ವ್ಯಾಸಂಗ ಮಾಡುತ್ತಿದ್ದಾಗ ನಮಗೆ ಮಾಸ್ತರು ಹೇಳುತ್ತಿದ್ದರು. ಯಾವ ರೀತಿಯಾದ ತಿದ್ದುಪಡಿಗಳನ್ನು ತಂದರೆ ವಿಶ್ವವಿದ್ಯಾನಿಲಯ ಉನ್ನತ ಮಟ್ಟಕ್ಕೆ ಹೋಗುತ್ತದೆಂಬುದರ ಕಡೆ ನಾವುಗಳೆಲ್ಲರೂ ಚಿಂತನೆ ಹರಿಸಬೇಕೆಂದು ಹೇಳುತ್ತಾ. ಈ ದಿಸೆಯಲ್ಲಿ ನಾಲ್ಕೈದು ಸಲಹೆಗಳನ್ನು ತಮ್ಮ ಮುಂದಿಡಲು ಇಚ್ಛಿಸುತ್ತೇನೆ. ವಿದ್ಯೆ ಎಂಬುದು ಸರ್ವರ ಸ್ವತ್ತು, ಇಲ್ಲಿ ತಾರತಮ್ಯವಿರಬಾರದು. ಆತ ಮೇಲು, ಈತ ಕೀಳು ಎಂಬ ಭೇದ-ಭಾವ ತೋರದೆ ಬುದ್ಧಿಗೆ ಇಲ್ಲಿ ಪ್ರಾಧ್ಯಾನತೆ ಇರಬೇಕು. ಹಣಕ್ಕಾಗಲಿ, ಸ್ನಾಯು ಶಕ್ತಿಗಾಗಲಿ, ರಾಜಕೀಯ ಶಕ್ತಿಗಾಗಲಿ ಇಲ್ಲಿ ಬೆಲೆ ಇರಬಾರದು. ಬುದ್ಧಿವಂತರು ಯಾರಿದ್ದಾರೋ ಅವರಿಗೇ ಇಲ್ಲಿ ಅವಕಾಶವಿರಬೇಕು. ಇದಕ್ಕೆ ಪೂರಕವಾದ ಸನ್ನಿವೇಶವನ್ನು ನಾವು ನಿರ್ವಂಚನೆಯಿಂದ ಕಲ್ಪಿಸಿಕೊಳ್ಳಬೇಕು. ಸಮಾಜದಲ್ಲಿರುವ ವಂಚಿತ ವರ್ಗಕ್ಕೂ ಕೂಡ ಈ ಅವಕಾಶ ಕಲ್ಪಿಸಿದಾಗ ವಿಶ್ವವಿದ್ಯಾನಿಲಯಗಳ ಶ್ರೇಯಸ್ಸು ಅಭಿವೃದ್ಧಿ ಯಾಗುತ್ತದೆ. ಇದಕ್ಕೋಸ್ಕರವೇ ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ ಮತ್ತು ಲಾ-ಕಮಿಷನ್ ಜತೆಗೂಡಿ ಏನು ಸಜೆಸ್ಟ್ ಮಾಡುತ್ತಿದೆಯೆಂದರೆ, ಯಾವುದೇ ಆ್ಯಕ್ಟ್ ಆಗಿರಲಿ, ಯಾವುದೇ ಸ್ಟ್ಯಾಟ್ಯೂಟ್ ಇರಲಿ, ಹತ್ತು ವರ್ಷಗಳಿಗೊಮ್ಮೆ ರಿವ್ಯೂ ಮಾಡುವ ಕಾನೂನು ತರಬೇಕೆಂಬುದು. ಎಲ್ಲಿ ಸ್ಟ್ಯಾಟ್ಯುಟರಿ ಉಳಿಯುವುದಕ್ಕೆ ಸಾಧ್ಯವಿಲ್ಲವೋ ಅದು ಪರ್ಮನೆಂಟ್ ಸ್ಟ್ಯಾಟ್ಯೂ ಅಲ್ಲ. ಮನುಷ್ಯ ಹೇಗೆ ಬದಲಾವಣೆಯಾಗುತ್ತಾ ಹೋಗುತ್ತಾನೋ, ಸನ್ನಿವೇಶಗಳು ಹೇಗೆ ಬದಲಾವಣೆಯಾಗುತ್ತವೋ ಅದಕ್ಕೆ ಪೂರಕವಾಗಿ ಆ್ಯಕ್ಟ್ ಕೂಡ ಬದಲಾಗುತ್ತಾ ಹೋಗಬೇಕಾಗುತ್ತದೆ. ಈ ದೃಷ್ಟಿಯಿಂದ

ಸುಮಾರು ಇಪ್ಪತ್ತು ವರ್ಷಗಳಷ್ಟು ಹಳೆಯದಾಗಿರುವ ಯೂನಿವರ್ಸಿಟಿ ಆ್ಯಕ್ಟ್ ಏನಿದೆ, ಇದನ್ನು ಬದಲಾಯಿಸಬೇಕಿದೆ. ಪ್ರಖ್ಯಾತ ಶಿಕ್ಷಣ ತಜ್ಞರಾಗಿರುವ ಶ್ರೀ ನವನೀತರಾವ್‌ರವರು ವಿಶ್ವವಿದ್ಯಾನಿಲಯಗಳನ್ನು ಯಾವರೀತಿ ಉಚ್ಚ ಸ್ಥಾಯಿಗೆ ತೆಗೆದುಕೊಂಡು ಹೋಗಬೇಕೆಂಬ ದಿಸೆಯಲ್ಲಿ ಸರ್ಕಾರಕ್ಕೆ ತಮ್ಮ ವರದಿಯಲ್ಲಿ ಕೆಲವಾರು ಸಲಹೆಗಳನ್ನು ಸೂಚಿಸಿದ್ದಾರೆ. ಶ್ರೀ ನವನೀತರಾವ್‌ರವರು ಯಾವುದೇ ಪಕ್ಷ, ಜಾತಿ, ಕುಲ, ಧರ್ಮಕ್ಕೆ ಸಂಬಂಧಿಸಿದವರಲ್ಲ. ಇವರು ನೀಡಿರುವ ಸಲಹೆಗಳನ್ನು ಸರ್ಕಾರ ಆ್ಯಕ್ಟ್‌ನಲ್ಲಿ ತಿದ್ದುಪಡಿ ಮಾಡಿ ಇನ್ ಕಾರ್ಪೊರೇಟ್ ಮಾಡಿರುವುದಕ್ಕೆ ಸ್ವಾಗತಿಸುತ್ತಾ, ತಂದಿರುವ ಮಸೂದೆಯಲ್ಲಿ ಕಾಣುತ್ತಿರುವ ಕೆಲವು ಲೋಪಗಳನ್ನು ಗಮನಿಸಿ ಸರಿಪಡಿಸಿಕೊಳ್ಳಬೇಕೆಂದು ಹೇಳುತ್ತಾ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

MR. SPEAKER : I welcome the Chairman and the Hon'ble Members of the Committee on Sub-ordinate Legislation of Rajasthan Legislative Assembly, who are witnessing the proceedings of the Assembly in the VIP Gallery.

SRI A.S. GURU SWAMY : We welcome them on behalf of our Members, the fellow MLAs who have come all the way from Rajasthan.

ಅವರಿಗೆ ಕನ್ನಡ ಅರ್ಥವಾಗುವುದಿಲ್ಲ, ಅವರಿಗೆ ನಾವು ಮಾತನಾಡಿದ್ದು ಅರ್ಥವಾಗಲು ಯಾವ ರೀತಿಯ ಟ್ರಾನ್ಸ್‌ಲೇಷನ್ ವ್ಯವಸ್ಥೆ ಮಾಡಿಕೊಟ್ಟಿದ್ದಿರೋ ನನಗೆ ಗೊತ್ತಿಲ್ಲ. ಇವರೂ ನಮ್ಮ ತರಹವೇ ಮಾತನಾಡುತ್ತಾರೆಂದು ತಿಳಿದುಕೊಂಡು ಹೋಗಿಬಿಟ್ಟಾರು. ಆದ್ದರಿಂದ ದಯಮಾಡಿ ಅವರಿಗೆ ಟ್ರಾನ್ಸ್‌ಲೇಷನ್ ವ್ಯವಸ್ಥೆ ಮಾಡುವುದು ಬಹಳ ಉತ್ತಮ. ನನ್ನ ಮಿತ್ರರು ಮಾತನಾಡುವಾಗ ಬಹಳ ಚೆನ್ನಾಗಿ ತಿಳಿದುಕೊಂಡು ಮಾತನಾಡಿದ್ದಾರೆ. ಆದರೆ ಅವರುಗಳು ಮಾತನಾಡುವಾಗ ಯಾವಾಗಲೂ ನೆಗೆಟಿವ್ ಆಗಿಯೇ ಯೋಚನೆ ಮಾಡುತ್ತಾರಲ್ಲ ಎಂಬುದು ನನಗೆ ಅರ್ಥವಾಗುತ್ತಿಲ್ಲ. ನೆಗೆಟೀಯಿಸಂ ಅವರ ತಲೆಯಲ್ಲಿ ಸೇರಿಬಿಟ್ಟಿದೆಯೋ ಏನೋ ನನಗಂತು ಗೊತ್ತಿಲ್ಲ. ಅವರುಗಳು ಪಾಜಿಟಿವ್ ಆಗಿ ಏಕೆ ಯೋಚನೆ ಮಾಡುತ್ತಿಲ್ಲ ? ಪಾಜಿಟಿವ್ ಸೈಕಾಲಜಿ ಎನ್ನತಕ್ಕದ್ದು ಇದೆ. ಅಂದರೆ ಆಶಾಜೀವಿಗಳಾಗಿ ಇರತಕ್ಕದ್ದು ಇದೆ. ಎಲ್ಲವನ್ನೂ ಭೂತಕನ್ನಡಿಯಲ್ಲಿ ನೋಡುವ ವಿಚಾರ, ಎಲ್ಲವನ್ನೂ ಸಂಶಯದಿಂದ ನೋಡುವ ವಿಚಾರ, ನೀವು ಮಾಡಿದರೆ ನಾವು ಒಪ್ಪುವಂತಿಲ್ಲ, ನಾವು ಮಾಡಿದ್ದನ್ನು ನೀವು ಒಪ್ಪುವಂತಿಲ್ಲ, ಇದು ಈ ದೇಶದ ವೈಪರೀತ್ಯ. ಇನ್ಯಾರೋ ಮಾಡಿದರೆ ಜಾತಿ, ಕುಲ, ಧರ್ಮ ಇನ್ನೇನನ್ನೋ ತಂದು ಇಟ್ಟು ಬಿಡುತ್ತಾರೆ. ಹಾಗಾದರೆ

ಮಾಡುವವರು ಯಾರು? ಸರಿಪಡಿಸುವವರು ಯಾರು? ಪ್ರಾರಂಭ ಮಾಡುವವರು ಯಾರು? ಯಾರಾದರೂ ಪ್ರಾರಂಭ ಮಾಡಿ, ಆದರೆ ಬದಲಾವಣೆಯನ್ನು ತೆಗೆದುಕೊಂಡು ಬನ್ನಿ. to change the society I take the oath in the name of the God. I am part and parcel of the system. ನಾನು, ನೀವು, ಎಲ್ಲರೂ ಸಿಸ್ಟಂನಿಂದ ಹೊರಗಿಲ್ಲ, ಎಲ್ಲರೂ ಅದರಲ್ಲೇ ಇದ್ದೇವೆ. We are talking negatively. That is a very bad approach to the system. ಎನ್ನತಕ್ಕ ವಿಚಾರವನ್ನು ಮಾನ್ಯ ಮಿತ್ರರೆಲ್ಲರಿಗೆ ನೆನಪು ಮಾಡುತ್ತೇನೆ. ಇವತ್ತು ಏನು ಪ್ರಗತಿಪರವಾಗಿ ಯೋಚನೆ ಮಾಡಿದ್ದಾರೆ, ನನಗೆ Burtrand Russel ಹೇಳಿದಂಥ ಒಂದು ಮಾತು ನೆನಪಿಗೆ ಬರುತ್ತದೆ. ಅದೇನೆಂದರೆ change is always a sign of progress. ಅಂದರೆ ಏನಾದರೂ ಬದಲಾವಣೆಯಾದಾಗ ಅದು ಪ್ರೋಗ್ರೆಸ್ ಆಗುತ್ತದೆಂದು ಲೆಕ್ಕ. ಏನೂ ಬದಲಾವಣೆಯಾಗಿಲ್ಲವೆಂದರೆ ಅದು ಸ್ಥಗಿತ. ನಿಂತ ನೀರು. ಅದನ್ನು ಯಾರೂ ಕುಡಿಯಲು ಆಗುವುದಿಲ್ಲ. ಹರಿಯುವ ನೀರನ್ನಾದರೂ ಕುಡಿಯಬಹುದು. ಮಾನ್ಯ ಸಚಿವರು ಬದಲಾವಣೆ ತರುವ ಪ್ರಯತ್ನವನ್ನು ಮಾಡಿದ್ದಾರೆ. ಆದರೆ ಇದೇ ಶಾಶ್ವತವೇನಲ್ಲ. We can always bring an amendment. ಇದು ಸರಿಯಲ್ಲ ಎಂಬುದು ಮನವರಿಕೆಯಾದಾಗ ಬದಲಾವಣೆ ತರುವುದೇನೂ ಕಷ್ಟವಲ್ಲ. ಆದರೆ ಬದಲಾವಣೆಯನ್ನು ಬಯಸುವಲ್ಲಿ ನಾವೆಲ್ಲರೂ ಹೆಜ್ಜೆಯನ್ನಿಡೋಣವೆಂದು ನನ್ನ ಮನವಿ. ಇದರ ಬಗ್ಗೆ ನಿನ್ನೆ ಮಾತನಾಡುತ್ತ ನನ್ನ ಹಲವಾರು ಮಿತ್ರರು ಚುನಾವಣಾ ಪದ್ಧತಿಯನ್ನು ಎಲ್ಲಾ ರಂಗದಲ್ಲೂ ತರಬೇಕೆಂದು ಪ್ರಸ್ತಾಪ ಮಾಡಿದರು. ಬಹುಶಃ ಮಾನ್ಯ ಸೋಮಶೇಖರ್ ರವರು ಅದರ ಬಗ್ಗೆ ಪ್ರಸ್ತಾಪ ಮಾಡಿದ್ದರು ಈ ಸಂದರ್ಭದಲ್ಲಿ ನಾನು ಒಂದು ಘಟನೆಯನ್ನು ನೆನಪಿಸಿಕೊಳ್ಳುತ್ತೇನೆ. ಅಮೇರಿಕಾದಲ್ಲಿ Judges are elected by the Voters. Governors are elected by the voters. ಇದು ನಮ್ಮ ದೇಶದಲ್ಲಿ ನಡೆಯಲು ಸಾಧ್ಯವೆ? ಎಲ್ಲಾ ರಂಗದಲ್ಲೂ ಪ್ರಜಾಪ್ರಭುತ್ವ ಬೇಕು ಎಂದು ಹೊರಟರೆ ನಮ್ಮಲ್ಲಿ ಸಾಧ್ಯವೆ? ನಮ್ಮಲ್ಲಿ ಜಡ್ಜ್‌ಗಳ ನೇಮಕವೇ ಸಮಸ್ಯೆಯಾಗಿಬಿಟ್ಟಿದೆ. ನಮ್ಮಲ್ಲಿ ಚುನಾವಣೆಯ ಮೂಲಕ ಜಡ್ಜ್‌ಗಳನ್ನು, ರಾಜ್ಯಪಾಲರನ್ನು ಆಯ್ಕೆ ಮಾಡುವುದೆಂದರೆ ನಮ್ಮ ದೇಶದಲ್ಲಿರುವ ಅಗಾಧವಾದ ವೈಪರೀತ್ಯಗಳು, ಅಸಮಾನತೆಗಳಲ್ಲಿ ಇದು ಸಾಧ್ಯವೇ? Demacracy has to be limited to a certain extent, to certain bodies. ಎಲ್ಲಾ ಕಡೆಗಳಲ್ಲೂ ಅದನ್ನು ತರಲು ಸಾಧ್ಯವಿಲ್ಲ. ಎಲ್ಲಾ ಕಡೆ ತಂದರೆ ನಾನು ಹೇಳಿದಂತೆ ಸೆನೆಟ್‌ನಲ್ಲಿ ಧರಣಿಯಾಗುತ್ತದೆ, ಶೌಟಿಂಗ್ ಆಗುತ್ತದೆ, ಅಲಿಗೇಷನ್ ಆಗುತ್ತದೆ In what way are they different from us? That is where we have to think over. ಆದ್ದರಿಂದ ವಿಶ್ವವಿದ್ಯಾನಿಲಯಗಳಿಗೆ ಉಪಕುಲಪತಿಗಳನ್ನು ನಾಮಕರಣ ಮಾಡಬೇಕಾಗಿದ್ದರೆ ಯಾರು ಟೆಂಪಲ್ ಆಫ್ ಸರಸ್ವತಿಯ ಹತ್ತಿರವಿದ್ದಾರೆ ಅಂಥವರನ್ನು ನೇಮಕ ಮಾಡಿ. ನಮ್ಮಂಥವರನ್ನು ನಾಮಕರಣ ಮಾಡಬೇಕಾಗಿಲ್ಲ. ಒಳ್ಳೆಯವರನ್ನು ಕಣ್ಣಿಂದ ನೋಡಿ

ನಾಮಕರಣವನ್ನು ಮಾಡಿ. ಇನ್ನು ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳ ಸಂಘದ ಚುನಾವಣೆಯ ಬಗ್ಗೆ ಹೇಳುವುದಾದರೆ, ಓದುವಂಥ ಕಾಲದಲ್ಲೇ ವಿದ್ಯಾರ್ಥಿಗಳನ್ನು ಚುನಾವಣೆಯ ಪ್ರಸಂಗಕ್ಕೆ ತಂದು ಅವರ ಮೈಂಡ್‌ನ್ನು ಪಾಯಿಸನ್ ಮಾಡುತ್ತೇವಲ್ಲ, ಇದು ಎಷ್ಟರಮಟ್ಟಿಗೆ ಸರಿ? ಎಂ.ಎಲ್.ಎ. ಆದಾಗ ನಮ್ಮ ಮೈಂಡ್ ಕೆಟ್ಟುಹೋಗುತ್ತದೆಂಬುದು ಸರಿ. ಆದರೆ ವಿದ್ಯಾರ್ಥಿಗಳು ವ್ಯಾಸಂಗ ಮಾಡುವ ಪ್ರಾರಂಭದಲ್ಲೇ ಈ ದೇಶದ ಹಣೆಯಬರಹವನ್ನೆಲ್ಲ ತಿಳಿದುಕೊಳ್ಳುವುದೇ? ಯಾವ ರೀತಿ ಒಳ್ಳೆಯ ರಾಜಕಾರಣಿಯಾಗಬೇಕು ಎಂದು ಆಗಲೇ ತರಬೇತಿ ಪಡೆದುಕೊಂಡುಬಿಡುವುದೇ? Should he not read? Should he not study? Should he not equip himself for a degree? Of course, they are not matured. ಅವರು ಫಿಸಿಕಲಿ, ಮೆಂಟಲಿ ಇನ್ನೂ ಮೆಚ್ಯೂರ್ ಆಗಿರುವುದಿಲ್ಲ, ಅಷ್ಟರಲ್ಲಿಯೇ ಚುನಾವಣೆಯ ವೈಪರೀತ್ಯವನ್ನು ತರುವುದು ಸರಿಯಲ್ಲ. ನಾನು ದೆಹಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯಾಗಿದ್ದ ಕಾಲದಲ್ಲಿ ನೋಡಿದ್ದೇನೆ. ಅಲ್ಲಿನ ವಿದ್ಯಾರ್ಥಿ ಸಂಘದ ಚುನಾವಣೆ ಎಂ.ಎಲ್.ಎ, ಎಂ.ಪಿ. ಚುನಾವಣೆಗಳಿಗಿಂತ ಜೋರಾಗಿ ನಡೆಯುತ್ತದೆ. ಇದು ಏಕೆ ಬೇಕಾಗಿತ್ತು? ಆ ವಿಶ್ವವಿದ್ಯಾನಿಲಯದ ಪ್ರೊಫೆಸರ್ ತನ್ನ ಕೆಲಸವಾಗಿ ಬೇಕಾದಾಗ ಆ ವಿದ್ಯಾರ್ಥಿ ಮುಖಂಡನನ್ನೇ ಕೇಳುತ್ತಾನೆ. ಆಗ ವಿದ್ಯಾರ್ಥಿ ಮತ್ತು ಅವರ ಮಧ್ಯ ಸಂಬಂಧ ಎಷ್ಟರಮಟ್ಟಿಗೆ ಇರುತ್ತದೆ ನೀವೇ ಯೋಚನೆ ಮಾಡಿ. ಇದರಲ್ಲಿ ಐದು ವರ್ಷಕ್ಕೆ ಒಂದು ಸಲ ಈ ಪದ್ಧತಿಯನ್ನು ರಿವ್ಯೂ ಮಾಡಬೇಕೆಂಬ ಸೆಕ್ಷನ್‌ನ್ನು ಸೇರಿಸಿದ್ದಾರೆ. ಇದು ಬಹಳ ಒಳ್ಳೆಯದು. ಇನ್ನು ಐದು ವರ್ಷಗಳಲ್ಲಿ ಏನು ಬದಲಾವಣೆಯಾಗುತ್ತದೋ, ಅದರ ಬಗ್ಗೆ ರಿವ್ಯೂ ಮಾಡಲು ಇದರಲ್ಲಿ ಅವಕಾಶ ಮಾಡಿಕೊಟ್ಟಿರುವುದು ಬಹಳ ಒಳ್ಳೆಯದು. ಜೊತೆಗೆ ಅಲ್ಲಿರುವ ನೌಕರರನ್ನು ವರ್ಗಾವಣೆ ಮಾಡುವುದನ್ನೂ ಮಾಡಿದ್ದೀರಿ. ಇದು ಬಹಳ ಒಳ್ಳೆಯದು. ಇದು ನಗರಪಾಲಿಕೆಗಳಿಗೆ ಮುನಿಸಿಪಾಲಿಟಿಗಳಿಗೆ ಡಿ.ಸಿ.ಸಿ. ಬ್ಯಾಂಕುಗಳಿಗೂ ಬರಬೇಕು. ಇದ್ದವರೇ ಅಲ್ಲಿದ್ದುಕೊಂಡು ಅವರ ಮರ್ಜಿಯಲ್ಲಿ ಸಂಸ್ಥೆ ನಡೆಯಬೇಕೆಂದರೆ ಸರಿಯಲ್ಲ. ಇದು ಸ್ವಾಗತ ಮಾಡುವ ಬೆಳವಣಿಗೆಯೆಂದು ಹೇಳುತ್ತೇನೆ. ವಿಶ್ವವಿದ್ಯಾನಿಲಯದ ಆ್ಯಕ್ಟ್‌ನಲ್ಲಿ ಬರತಕ್ಕ ಸಮಸ್ಯೆಗಳು, ಅದು ಅಡ್ಮಿನಿಸ್ಟ್ರೇಟೀವ್ ಸಮಸ್ಯೆ ಇರಬಹುದು, ಅಲಿಗೇಷನ್ಸ್, ಗ್ರೀವನೆಷನ್ ಇರಬಹುದು, ಯಾವುದೇ ಆದರೂ ಅಲ್ಲೇ ತೀರ್ಮಾನವಾಗುವ ವ್ಯವಸ್ಥೆಗೆ ತಾವು ಆರ್ಬಿಟ್ರೇಟ್ ಪದ್ಧತಿಯನ್ನು ಅಥವಾ ಟ್ರಿಬ್ಯೂನಲ್ ಪದ್ಧತಿಯನ್ನು ಕ್ರಿಯೇಟ್ ಮಾಡಬೇಕಾಗಿ ವಿನಂತಿಸುವೆ. ತಾವು ವಿದೇಶಿ ವಿಶ್ವವಿದ್ಯಾನಿಲಯದಲ್ಲಿರುವ ವ್ಯವಸ್ಥೆಯನ್ನು ನೋಡಿ. ಅವರಲ್ಲಿ ಅವರದ್ದೇ ಆದಂಥ ಆರ್ಬಿಟ್ರೇಟರ್ ಜ್ಯುಡೀಷಿಯರಿ ಟ್ರಿಬ್ಯೂನಲ್‌ನ್ನು ಇಟ್ಟುಕೊಂಡಿರುತ್ತಾರೆ. ವಿಶ್ವವಿದ್ಯಾನಿಲಯಗಳಲ್ಲಿ ಬರುವ ಸಮಸ್ಯೆಗಳನ್ನು, ಗ್ರೀವೆನ್ಸಸ್‌ಗಳನ್ನು ಅವರೇ ತೀರ್ಮಾನ ಮಾಡಿಕೊಳ್ಳುತ್ತಾರೆ. ಇವತ್ತು ನಮ್ಮಲ್ಲಿ ಹಿರಿಯ ಅಧಿಕಾರಿ ಕಿರಿಯ ಅಧಿಕಾರಿ ಬಗ್ಗೆ ಬರೆದರೆ ಅವನು ಬೈಯುತ್ತಾನೆ, ಹೊಡೆಯುತ್ತಾನೆ, ಅಥವಾ ಇನ್ನಾವುದೋ ವಿಚಾರವನ್ನು ಕಟ್ಟಿಬಿಡುತ್ತಾನೆ. ಇವೆಲ್ಲದರಿಂದ ನ್ಯಾಯವನ್ನು

ಹುಟ್ಟುವ ಪರಿಸ್ಥಿತಿ ನಮಗೆ ಬಂದಿದೆ. ಆದ್ದರಿಂದ ನಾವು ಇದಕ್ಕೆ ನಿವೃತ್ತ ಜ್ಯುಡಿಷಿಯಲ್ ಅಧಿಕಾರಿಯನ್ನು ನೇಮಕ ಮಾಡಿದರೆ ಒಳ್ಳೆಯದು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಾವು ಅದನ್ನು ಮಾಡಿದ್ದೇವೆ. ಜಗದೀಶ್ ಎಂಬ ನಿವೃತ್ತ ಜಿಲ್ಲಾ ಮ್ಯಾಜಿಸ್ಟ್ರೇಟರವರಿಗೆ ಅಂದಿನ ಉಪಕುಲಪತಿಗಳಲ್ಲಿ ಹಾಡಿ ಬೇಡಿ, ಇವರು ಜ್ಯುಡೀಷಿಯಲ್ ಅಧಿಕಾರಿಯಾಗಿ ಕೆಲಸ ಮಾಡುತ್ತಾರೆ, ಇವರಿಗೆ ಸಂಬಳವನ್ನೇನು ಕೊಡಬೇಡಿ ಎಂದು ಹೇಳಿದ್ದಮೇಲೂ, ವಿಶ್ವವಿದ್ಯಾನಿಲಯದ ಎಲ್ಲಾ ಡಿಸ್ಪ್ಯೂಟ್‌ನ್ನು ರೆಫರ್ ಮಾಡಿ, ನಾನು ತೀರ್ಮಾನ ಮಾಡುತ್ತೇನೆಂದು ಅವರು ಹೇಳಿದ್ದರು. ವಿಶ್ವವಿದ್ಯಾನಿಲಯದ ಪರೀಕ್ಷಾ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುತ್ತಿಲ್ಲವೆಂಬ ವಿಚಾರವನ್ನು ಅವರ ಗಮನಕ್ಕೆ ತಂದಾಗ ಅವರು ಅಮಿಕಬಲ್ ಆಗಿ ಅದನ್ನು ಸೆಟಲ್ ಮಾಡಿದರು. ಅಂಥ ವ್ಯವಸ್ಥೆಯನ್ನು ನಾವು ಜಾರಿಗೆ ತರಬೇಕು. ಅನಂತರ ನಾವು ಇನ್‌ಫಾರ್ಮಲ್ ಎಜ್ಯುಕೇಷನ್ ಬಗ್ಗೆ ಗಮನಹರಿಸಬೇಕು. ಇನ್‌ಫಾರ್ಮಲ್ ಎಂದರೆ ಹೇರ್ ಕಟ್ಟಿಂಗ್ ಸೆಲೂನ್ ಇದೆ. You give a degree in Haircutting Saloon. Let a barbar be proud that "I am a graduate of Haircutting." ಫ್ಯಾಷನ್ ಇರುತ್ತದೆ, ಅದರ ಬಗ್ಗೆ ಮಂಗಳೂರಿನಲ್ಲಿ ಕಾಲೇಜು ಇದೆ, ಅವರು ಅದನ್ನು ಕೊಡುತ್ತಿದ್ದಾರೆ. ಈ ರೀತಿ ಫ್ಯಾಷನ್ ಟೆಕ್ನಾಲಜಿ, ಬೇರೆ ಬೇರೆ ರೀತಿಯ ಬಗ್ಗೆ ಡಿಪ್ಲೊಮೋ ಕೋರ್ಸನ್ನು ಜಾರಿಗೆ ತನ್ನಿ. Let him make an honourable living. ಇದು ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಇದೆ. ಇದರ ಜೊತೆಗೆ ನಮ್ಮ ವಿಶ್ವವಿದ್ಯಾನಿಲಯಗಳು ಅದು ಯಾವುದೇ ಇರಬಹುದು ಅವುಗಳು ಫಾರಿನ್ ವಿಶ್ವವಿದ್ಯಾನಿಲಯಗಳೊಂದಿಗೆ ಟೈಯಪ್ ಹೊಂದಿರಬೇಕು. ಫಾರಿನ್ ಟೆಕ್ನಾಲಜಿ ಇಲ್ಲಿಗೆ ಹರಿದುಬರಬೇಕು. ಫಾರಿನ್ ವಿಶ್ವವಿದ್ಯಾನಿಲಯಗಳ ಪ್ರೊಫೆಸರ್‌ಗಳು ಇಲ್ಲಿಗೆ ಬರಬೇಕು. ನಮ್ಮೊಡನೆ ಅವರು ಕುಳಿತು ಮಾತನಾಡಬೇಕು. ಈ ಟೈಯಪ್ ಪದ್ಧತಿಯನ್ನು ನಾವು ಜಾರಿಗೆ ತಂದಿಲ್ಲ. ಅದನ್ನು ಜಾರಿಗೆ ತರುವ ಸ್ಕೀಮ್ ಮಾಡಬೇಕೆಂದು ವಿನಂತಿಸುತ್ತೇನೆ. ವಿಶ್ವವಿದ್ಯಾನಿಲಯಗಳನ್ನು ಖಾಸಗೀಕರಣ ಮಾಡುವ ಬಗ್ಗೆ ಒಲವು ತೋರುವಲ್ಲಿ ನಾನೇ ಮೊದಲಿಗ. ಸರ್ಕಾರಕ್ಕೆ ಅನೇಕ ಸಮಸ್ಯೆಗಳು ಬಂದಾಗ ನಾವು ಬಹಳ ಸಲ ಖಾಸಗಿಯವರೊಂದಿಗೆ ಕನ್ಸಲ್ಟಿಂಗ್‌ಗೆ ಹೋಗಿದ್ದೇವೆ. ಅನೇಕ ಸಚಿವರುಗಳು ತಮ್ಮ ಸಮಸ್ಯೆಯನ್ನು ಪತ್ತೆ ಮಾಡಲು ಖಾಸಗಿಯ ಏಜನ್ಸಿಯವರ ಹತ್ತಿರ ಹೋಗಿದ್ದಾರೆ. ಖಾಸಗಿಯವರು ಅಷ್ಟು ಸ್ಟ್ರಾಂಗ್ ಆಗಿದ್ದರೆ ಅವರ ಟ್ರಯಲ್ಲೇಕೆ ಕೊಟ್ಟು ನಡೆಸಬಾರದು? ನಮ್ಮ ಕಂಡೀಷನ್‌ಗಳಾದ 18 ಪರ್ಸೆಂಟ್ ಮೀಸಲಾತಿ ಕೊಡಬೇಕು, ಬುದ್ಧಿಜೀವಿಗಳಿಗೆ ಅವಕಾಶ ಕೊಡಬೇಕು ಮುಂತಾದವುಗಳನ್ನು ಅವರ ಮುಂದಿಟ್ಟು ಇದರ ಅನುಸಾರ ನಾವೇ ವಿಶ್ವವಿದ್ಯಾನಿಲಯವನ್ನು ನಡೆಸಿ ಎಂದು ಹೇಳಬಹುದಲ್ಲ. ಈ ರೀತಿ ಖಾಸಗೀಕರಣ ಮಾಡುವ ಬಗ್ಗೆ ಹಿಂದಿನ ಮಾನವ ಸಂಪನ್ಮೂಲ ಸಚಿವರಾಗಿದ್ದಂಥ ಮಾನ್ಯ ಬೊಮ್ಮಾಯಿಯವರು ಪ್ರಯತ್ನ ಮಾಡಿದ್ದರು. ಆದರೆ ಆ ವಿಚಾರ ಏನಾಯಿತೋ ನನಗೆ ಗೊತ್ತಿಲ್ಲ. ಯಾರಲ್ಲಿ ಹಣವಿದೆ, ಯಾರ ಹತ್ತಿರ

ಹಣವನ್ನು ಕೊಟ್ಟು ಓದಲು ಬರುತ್ತಾರೆ, let them read. ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಹ್ಯೂಮನ್ ಟೆಕ್ನಾಲಜಿ ಎಂದು ಇದೆ. ಅಲ್ಲಿ ಅಡ್ಮಿಷನ್ ತೆಗೆದುಕೊಳ್ಳಬೇಕಾಗಿದ್ದರೆ ಅಪ್ಲಿಕೇಶನಿಗೆ ಕನಿಷ್ಠ ಐವತ್ತು ಸಾವಿರ ರೂಪಾಯಿ ಕೊಡಬೇಕು. ಅಂಥ ಕಾಲೇಜು ದೇಶದಲ್ಲಿದೆ. ಆ ಕಾಲೇಜಿನಲ್ಲಿ ಡಿಗ್ರಿ ತೆಗೆದುಕೊಂಡು ಒಳ್ಳೆಯ ಕೆಲಸದಲ್ಲಿ ಹಲವಾರು ಜನರು ಇದ್ದಾರೆ. ಆ ರೀತಿ ವಿಶ್ವವಿದ್ಯಾನಿಲಯಗಳು ಏಕೆ ಆಗಬಾರದು? ಇದರ ಬಗ್ಗೆ ಮಾನ್ಯ ಸಚಿವರು ಆಕ್ಟ್‌ನಲ್ಲಿ ಅಳವಡಿಸಿಕೊಳ್ಳಬೇಕೆಂದು ಹೇಳುತ್ತೇನೆ. ತಾವು ಸೆನೆಟ್ ಮತ್ತು ಸಿಂಡಿಕೇಟಿಗೆ ಏನು ನಾಮಕರಣ ಮಾಡುತ್ತಿದ್ದೀರಿ ಎಲ್ಲೂ ಅಂದರೆ ಗ್ರಾಜ್ಯುಯೇಟ್ಸ್ ಆಗಲಿ, ಪ್ರೊಫೆಷನ್ ಪೊಲಿಟೀಷಿಯನ್ ಆಗಲಿ, ಇವರುಗಳನ್ನು ನೇಮಕ ಮಾಡುವ ಪರಿಸ್ಥಿತಿ ಬರಬಾರದೆಂದು ಕಾಡಿಬೇಡಿ ಕೇಳಿಕೊಳ್ಳುತ್ತೇನೆ. ನಮ್ಮ ಎಲೆಕ್ಟೋರಲ್ ಪದ್ಧತಿ ಕೆಡಬೇಕಾದರೆ ಇದೇ ಕಾರಣ. ಆದ್ದರಿಂದ ವಿಶ್ವವಿದ್ಯಾನಿಲಯಗಳಾದರು ಚೆನ್ನಾಗಿ ಉಳಿಯಲಿ. ಟೆಂಪಲ್ ಆಫ್ ಸರಸ್ವತಿ ಅಲ್ಲಾದರೂ ಇರಲಿ. ಅದನ್ನು ಡಿಸ್ಟರ್ಬ್ ಮಾಡುವುದು ಬೇಡ. ಸರ್ಕಾರವೇನು ಪ್ರಗತಿದಾಯಕ ಆಕ್ಟನ್ನು ತಂದಿದೆ ಇದನ್ನು ಸ್ವಾಗತಿಸಿ ಇದನ್ನು ಬಹುಶಃ ಜಾರಿಗೆ ತಂದು ನಮ್ಮ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಭವಿಷ್ಯವನ್ನು ನೀಡುತ್ತಾರೆಂದು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) :— ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ತಾವು ಈ ಮಸೂದೆ ವಿಚಾರದಲ್ಲಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿ, ಸರ್ಕಾರದವರು ಶಿಕ್ಷಣ ಕ್ಷೇತ್ರದಲ್ಲಿ ಒಂದು ಸಮಗ್ರ ಬದಲಾವಣೆಯನ್ನು ಮಾಡಬೇಕು ಎನ್ನುವ ಘನ ಉದ್ದೇಶವನ್ನು ಇಟ್ಟುಕೊಂಡು ಈ ಒಂದು ಮಸೂದೆಯನ್ನು ಮಂಡಿಸಿರತಕ್ಕಂಥದ್ದು, ಇದರ ಬಗ್ಗೆ ನಾನು ಸಂಪೂರ್ಣವಾಗಿ ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಈ ಮಸೂದೆಯಲ್ಲಿ, ಕೆಲವು ಬದಲಾವಣೆಗಳು ಆಗಲೇಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ನಮ್ಮ ಸರ್ಕಾರದಲ್ಲಿ ಶಿಕ್ಷಣ ಮಂತ್ರಿಗಳಾಗಿದ್ದಂತಹ ಶ್ರೀಮಾನ್ ಬಿ. ಸೋಮಶೇಖರ್ ಅವರು ಈ ಮಸೂದೆ ಬಗ್ಗೆ ಬಹಳ ಕೂಲಂಕುಷವಾಗಿ ಮಾತನಾಡಿದ್ದಾರೆ. ಈಗ ಅವರು ಕೊಟ್ಟಿರತಕ್ಕಂಥ ಸಲಹೆಗಳ ಪೂರಕವಾಗಿ ಒಂದೆರಡು ವಿಚಾರಗಳನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಆರ್ಥಿಕ ಉದಾರೀಕರಣದ ಹಿನ್ನೆಲೆಯಲ್ಲಿ ರಾಷ್ಟ್ರದಲ್ಲಿ ಹೆಚ್ಚುತ್ತಿರುವ ನಿರುದ್ಯೋಗ ಮತ್ತು ಸಾಮಾಜಿಕ ನ್ಯಾಯಕ್ಕೆ ಆಗಿರತಕ್ಕಂಥ ಧಕ್ಕೆ, ಇದರ ಹಿನ್ನೆಲೆಯಲ್ಲಿ ಶಿಕ್ಷಣದಲ್ಲಿ ವ್ಯಾಪಕವಾಗಿರತಕ್ಕಂಥ ಬದಲಾವಣೆ ಬಹಳ ಅವಶ್ಯಕವೆಂದು ನಾವೆಲ್ಲರೂ ಸಹ ಒಪ್ಪುತ್ತೇವೆ. ಇದರ ಬಗ್ಗೆ ಸರ್ಕಾರ ಚಿಂತನೆ ಮಾಡತಕ್ಕಂಥದ್ದು ಸರಿಯಾದ ಒಂದು ದಿಕ್ಕು. ಆದರೆ ಇವತ್ತು ನಮ್ಮ ವಿಶ್ವವಿದ್ಯಾನಿಲಯಗಳು, ಎಲ್ಲಿ ಉನ್ನತ ಶಿಕ್ಷಣವನ್ನು ಕೊಡಬೇಕು, ಶಿಕ್ಷಣದ ದೇವಾಲಯಗಳು ಆಗಬೇಕು ಎಂದು ಭಾವಿಸಿದ್ದೇವೆ, ಅವು ಎಲ್ಲರಿಗೂ ಮನವರಿಕೆ ಆಗುವ ಹಾಗೆ ಯಾವ ದೇವಾಲಯಗಳಲ್ಲಿ ಶಿಕ್ಷಣವನ್ನು ಒದಗಿಸಬೇಕು ಅಲ್ಲಿ ಜಾತಿಯ ವಿಚಾರಧಾರೆಗಳನ್ನು

ಹಬ್ಬುತಕ್ಕಂಥ ಸ್ಥಾನವಾಗಿರತಕ್ಕಂಥಾದ್ದು ನಮಗೆಲ್ಲರಿಗೂ ಸಹ ಗೊತ್ತಿದೆ. ವಿಶೇಷವಾಗಿ ಮಾನ್ಯ ಗುರುಸ್ವಾಮಿಯವರು ಮಾತನಾಡುತ್ತಾ ಶಿಕ್ಷಣ ನಿಂತ ನೀರಾಗಬಾರದು, ಹರಿಯುವ ನೀರಾಗಬೇಕೆಂದು ಹೇಳಿದರು. ಅಧ್ಯಾಪಕರ ನಡವಳಿಕೆಗಳು ವಿಶೇಷವಾಗಿ ಮೌಲ್ಯಮಾಪನ ಸಂದರ್ಭದಲ್ಲಿ ಅವರು ನಡೆದುಕೊಂಡಿರತಕ್ಕಂಥ ರೀತಿನೀತಿಗಳು ಮತ್ತು ಅಧ್ಯಾಪಕರುಗಳು ಕೊಡತಕ್ಕಂಥ ಪ್ರೈವೇಟ್ ಟ್ಯೂಷನ್‌ನಿಂದ ಆಗತಕ್ಕಂಥ ಹಾವಳಿ, ಈ ಮೌಲ್ಯಮಾಪನದ ಸಂದರ್ಭದಲ್ಲಿ ಮಾಡತಕ್ಕಂಥ ಬ್ಲಾಕ್‌ಮೇಲ್ ಟ್ಯಾಕ್ಟಿಕ್ಸ್ ಇವುಗಳಿಗೆ ಸರ್ಕಾರ ಎಲ್ಲೋ ಒಂದು ಕಡೆ ನಿಯಂತ್ರಣ ಮಾಡಬೇಕು ಎಂದು ನಾವು ಬಯಸುತ್ತೇವೆ. ಆದುದರಿಂದ ನಾವು ಸರ್ಕಾರವನ್ನು ನಡೆಸತಕ್ಕಂಥ ಸಂದರ್ಭದಲ್ಲಿ ಅನೇಕ ಬದಲಾವಣೆಗಳನ್ನು ತರುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಈ ಬಗ್ಗೆ ನಮಗೆ ಬಹಳ ಹೆಮ್ಮೆ ಇದೆ. ಕನ್ನಡದ ಒಂದು ವಿಶ್ವವಿದ್ಯಾನಿಲಯವನ್ನು ಕರ್ನಾಟಕದಲ್ಲಿ ಪ್ರಾರಂಭ ಮಾಡಿದಂತಹ ಕೀರ್ತಿ ನಮ್ಮ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲ್ ಅವರಿಗೆ ಸಲ್ಲಬೇಕು. ಮತ್ತೆ ನಾವು ಟೆಕ್ನಿಕಲ್ ಯೂನಿವರ್ಸಿಟಿಯನ್ನು ಮಾಡತಕ್ಕಂಥ ಕೆಲಸವನ್ನು ಸಹ ಮಾಡಿದ್ದೇವೆ. ಮೆಡಿಕಲ್ ಯೂನಿವರ್ಸಿಟಿಯನ್ನು ಮಾಡತಕ್ಕಂಥ ಕೆಲಸವನ್ನು ಸಹ ನಮ್ಮ ಸರ್ಕಾರದ ಕಾಲದಲ್ಲಿ ಆಗಿದೆ. ಅದೇ ರೀತಿಯಲ್ಲಿ ಕೇಂದ್ರ ಸರ್ಕಾರದವರು ಇಂದಿರಾಗಾಂಧಿ ಓಪನ್ ಯೂನಿವರ್ಸಿಟಿ ಏನು ಮಾಡಿದರು ಈ ರೀತಿಯಲ್ಲಿ ಕರ್ನಾಟಕದಲ್ಲಿ ಮತ್ತೊಂದು ಓಪನ್ ಯೂನಿವರ್ಸಿಟಿಯನ್ನು ಸಹ ನಾವು ಮಾಡಿದೆವು. ಈ ಕೆಲಸಗಳು ಡೂಪ್ಲಿಕೇಟ್ ಆಗಬಾರದು ಎನ್ನುವುದಕ್ಕೆ ತಾವು ಮಸೂದೆಯಲ್ಲಿ ಒಂದು ಬದಲಾವಣೆಯನ್ನು ಮಾಡುವ ಅಗತ್ಯತೆ ಇದೆಯೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ 15-20 ವರ್ಷಗಳಲ್ಲಿ ಈ ಕ್ಷೇತ್ರದಲ್ಲಿ ಸಾಕಷ್ಟು ಒಳ್ಳೆಯ ಕೆಲಸವನ್ನು ನಾವು ಮಾಡಿದ್ದೇವೆ. ಇವತ್ತು ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸರ್ಕಾರದವರು ವಿಶೇಷವಾಗಿ ಮಾಹಿತಿ ತಂತ್ರಜ್ಞಾನ ವಿಚಾರದಲ್ಲಿ ತಮ್ಮ ಬೆನ್ನನ್ನು ತಟ್ಟಿಕೊಂಡು ನಮ್ಮ ಸರ್ಕಾರದ ಸಾಧನೆ ಎಂದು ಹೇಳಿ ಏನು ಒಂದು ಪ್ರಚಾರವನ್ನು ಪಡೆಯುತ್ತಿದ್ದಾರೆ ಅದು ನಮ್ಮ ವಿಶ್ವವಿದ್ಯಾಲಯದ ಅಧ್ಯಾಪಕರುಗಳಿಗೆ ಸಲ್ಲಬೇಕಾದ ಒಂದು ಕೀರ್ತಿ. ಕರ್ನಾಟಕ ಮತ್ತು ಬೆಂಗಳೂರು ಇಂತಹ ಕಡೆ ಇಂಜಿನಿಯರ್ ಮತ್ತು ಡಾಕ್ಟರ್‌ಗಳನ್ನು ಕೊಟ್ಟಿರುವುದರಿಂದ ಇವತ್ತು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ನಾವು ಖ್ಯಾತಿಯನ್ನು ಪಡೆದಿರತಕ್ಕಂಥಾದ್ದು. ಅದಕ್ಕೆ ಪೂರಕವಾಗಿ ನಮ್ಮ ಸರ್ಕಾರಗಳು ವಿಶೇಷವಾಗಿ ಸಿ.ಇ.ಟಿ. ಪರೀಕ್ಷೆಯನ್ನು ಮಾಡಿರುವಂತಾದ್ದು. ನಿಜವಾಗಿ ನಮ್ಮ ರಾಜ್ಯದಲ್ಲಿ ಇದೊಂದು ಅನುಕರಣೀಯವಾಗಿರತಕ್ಕಂಥ ವಿಚಾರವೆಂದು ನಾನು ಹೇಳಬಯಸುತ್ತೇನೆ. ಇದೇ ಸಂದರ್ಭದಲ್ಲಿ ಮೊನ್ನೆ ದಿನ ಬಹಳ ಆತಂಕಕಾರಿಯಾಗತಕ್ಕಂಥ ವಿಚಾರ ಕೇಳಿದೆವು. ಅದರ ಬಗ್ಗೆ ಒಂದು ಸಿ.ಓ.ಡಿ. ತನಿಖೆಯಾಗಬೇಕು ಎಂದು ಒತ್ತಾಯ ಮಾಡುತ್ತೇನೆ. ಅದನ್ನು ಪ್ರತ್ಯೇಕವಾಗಿ ತೆಗೆದುಕೊಂಡು ಚರ್ಚೆ ಮಾಡಬೇಕೆಂದು ಇತ್ತು, ಆದರೆ ಸಮಯದ ಅಭಾವದಿಂದಾಗಿ ಚರ್ಚೆ ಮಾಡುವುದಕ್ಕೆ ಆಗಲಿಲ್ಲ. ಅದೇನೆಂದರೆ

ಎಂ.ಬಿ.ಬಿ.ಎಸ್‌ನ ಉತ್ತರ ಪತ್ರಿಕೆಗಳನ್ನು ಕೆಲವು ಪ್ರಾಧ್ಯಾಪಕರುಗಳು ಹೆಚ್ಚಿಗೆ ಹಣವನ್ನು ಪಡೆದು ಹೆಚ್ಚು ಅಂಕಗಳನ್ನು ಹಾಕಿ ಪಾಸ್ ಮಾಡಿದ್ದಾರೆನ್ನುವಂತಹ ಮೈಸೂರಿಗೆ ಸಂಬಂಧಪಟ್ಟ ವಿಚಾರ 'ಪ್ರಜಾವಾಣಿ' ಎನ್ನುವ ಜವಾಬ್ದಾರಿ ಪತ್ರಿಕೆಯಲ್ಲಿ ನಾನು ಓದಿದ್ದೇನೆ. ಇದರ ಬಗ್ಗೆ ತುರ್ತಾಗಿ ತನಿಖೆಯಾಗಬೇಕು. ಯಾವ ಮಟ್ಟದಲ್ಲಿ ಇವತ್ತು ನಮ್ಮ ಶಿಕ್ಷಣದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ; ಇದರ ಬಗ್ಗೆ ಮಾನ್ಯ ಗೃಹ ಸಚಿವರು ಇದ್ದಾರೆ, ಇದರ ಬಗ್ಗೆ ತತ್‌ಕ್ಷಣ ಸಿ.ಓ.ಡಿ. ತನಿಖೆಯಾಗಬೇಕು ಎಂದು ಒತ್ತಾಯ ಮಾಡುತ್ತಿದ್ದೇನೆಯ ಈಗ ನಾನು ಈ ಮಸೂದ ಬಗ್ಗೆ ಒಂದರಿಂದ ಕೊನೆವರೆಗೂ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಬಹಳಷ್ಟು ಒಳ್ಳೆಯ ವಿಚಾರಗಳು ಇದರಲ್ಲಿ ಅಡಕವಾಗಿವೆ. ಒಂದು ವಿಶ್ವವಿದ್ಯಾಲಯದಿಂದ ಮತ್ತೊಂದು ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಮಾಡತಕ್ಕಂಥ ವಿಚಾರ, ಇವೆಲ್ಲವನ್ನೂ ಸಹ ಸ್ವಾಗತ ಮಾಡಿದರೂ ಕೂಡ ಒಂದು ನನಗೆ ಗೊತ್ತಿದ್ದ ಹಾಗೆ ಎಲ್ಲಾ ವಿಚಾರಗಳನ್ನು ಮಾನ್ಯ ಸೋಮಶೇಖರ್‌ರವರು ಶಿಕ್ಷಣ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ನಮ್ಮ ಸರ್ಕಾರ ಇದ್ದಾಗ ಇದೆಲ್ಲಾ ವಿಚಾರ ಮಸೂದೆಯಲ್ಲಿ ರೂಪುಗೊಂಡು ತಂದಿತ್ತು. ಅದರೆ ಒಂದು ಗುಮಾನಿ ಇದೆ; ಆ ಗುಮಾನಿ ಏನೆಂದರೆ ರಾಜ್ಯಪಾಲರಿಗೆ ಇರತಕ್ಕಂಥ ಅಧಿಕಾರವನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ನೀವು ಕೊಡುತ್ತಿದ್ದೀರಿ. ಇದರ ಅವಶ್ಯಕತೆ ಇದೆಯೇ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಈಗ ಮೊದಲನೆ ಬಾರಿಗೆ ಕರ್ನಾಟಕದಲ್ಲಿ ಉನ್ನತ ಶಿಕ್ಷಣ ಇಲಾಖೆಗೆ ಒಬ್ಬ ಕ್ಯಾಬಿನೆಟ್ ಸ್ಟೇಟಸ್ ಮಂತ್ರಿಯನ್ನು ಮಾನ್ಯ ಮುಖ್ಯಮಂತ್ರಿಗಳ ಕೈಯಲ್ಲಿ ಕೊಡುವುದಕ್ಕಾಗುವುದಿಲ್ಲ. It is the most shameful thing. He has to deal with the Vice-Chancellors, he has to deal with the University Grants Commission. Dr. Parameshwar is the most deserving man. ಅದನ್ನು ಮಾಡುವುದಕ್ಕಾಗಿಲ್ಲ. ಕಾರಣವೇನು? ರಾಜಕೀಯ ಒತ್ತಡಗಳು. ಈಗ ನಾನು ಹೇಳುತ್ತೇನೆ, ಮಂತ್ರಿಮಂಡಲದ ರಚನೆಯನ್ನು ಸಹ ಮಾನ್ಯ ಮುಖ್ಯಮಂತ್ರಿಗಳು ಪ್ರತ್ಯೇಕವಾಗಿ ನಮ್ಮ ಪೊಲಿಟಿಕಲ್ ಸಿಸ್ಟಂನಲ್ಲಿ, ಅದರಲ್ಲಿ ಆಲ್ ಇಂಡಿಯಾ ಪಾರ್ಟೀಸ್ ಎಂದು ಇದೆಯಲ್ಲ, ಅದಕ್ಕೆಲ್ಲಾ ಇದೇ ಹಾಯಿಲೆ. ದೆಹಲಿಗೆ ಹೋಗಬೇಕು ಎಂದರೆ ಇವತ್ತು, ನಾಳೆ, ನಾಡಿದ್ದು ಏರ್ ಟಿಕೇಟ್ ಸಿಗುವುದೇ ಇಲ್ಲ. ಕಾರಣವೇನು? ಕಾರಣ ಏನು ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿದೆ. ಅನೇಕ ವಿಚಾರಗಳು ಗೊತ್ತಿದೆ. ಅನೇಕರನ್ನು ಮಂತ್ರಿಮಂಡಲದಿಂದ ತೆಗೆಯಬೇಕು, ಅನೇಕರನ್ನು ಮಂತ್ರಿಮಂಡಲಕ್ಕೆ ಸೇರಿಸಬೇಕೆಂದು ಇದೆ. ಹೈಯರ್ ಎಜುಕೇಷನ್ ಅಂತಹ ಒಂದು ಉನ್ನತ ಮಟ್ಟದ ಇಲಾಖೆಗೆ ಕ್ಯಾಬಿನೆಟ್ ದರ್ಜೆಯ ಮಂತ್ರಿಯನ್ನು ಮಾಡುವುದಕ್ಕೆ ಆಗಿಲ್ಲ. ಎಂದರೆ ಇನ್ಯಾವುದು ಮುಜರಾಯಿ ಇಲಾಖೆಗೆ ಮಾಡಿಸುತ್ತೀರಾ? ಸ್ಮಾಲ್ ಸ್ಕೇಲ್, ಸೇವಿಂಗ್ಸ್‌ಗೆ ಮಾಡಿಸುತ್ತೀರಾ? ಇದು ನನಗಂತೂ ಅರ್ಥವಾಗುತ್ತಿಲ್ಲ. ಏಕೆ ಇದು? ಏಕೆಂದರೆ ಕ್ಯಾಬಿನೆಟ್ ರಚನೆ ಮಾಡತಕ್ಕಂಥ ಪರಮಾಧಿಕಾರ ಸಹ ಮಾನ್ಯ ಮುಖ್ಯಮಂತ್ರಿಗಳಿಗೆ ಇಲ್ಲ. ಮತ್ತೊಂದು ವಿಚಾರ,

ಮಂತ್ರಿಮಂಡಲವನ್ನು ರಚನೆ ಮಾಡತಕ್ಕಂಥ ಸಂದರ್ಭದಲ್ಲಿ ನಾವು ನೋಡುವುದು ಏನು, ಒಂದು ಜಾತಿ. ಅದಾದನಂತರ ಹೈಕಮಾಂಡ್‌ನಿಂದ ಬರತಕ್ಕಂಥ ಪಟ್ಟಿ, ಗುಂಪು ಇದನ್ನು ನೋಡುತ್ತೇವೆ. ಇದನ್ನು ಮಾಡುವಾಗ ನಮ್ಮ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯರವರು ನಮ್ಮ ಪಾರ್ಟಿ ಬಗ್ಗೆ ಬಹಳ ಆಳವಾಗಿ ಅಭ್ಯಾಸ ಮಾಡಿ, ಬಹಳ ತಿಳಿದುಕೊಂಡು ಎಷ್ಟು ಆಸಕ್ತಿ ವಹಿಸಿದ್ದಾರೆ ಎಂಬುದನ್ನು ಇದು ತೋರಿಸುತ್ತದೆ. ಅದಕ್ಕೆ ತಮ್ಮ ಟೈಮನ್ನು ಯೂನಿವರ್ಸಿಟಿ ಎಜುಕೇಶನ್ ಕಡೆ ಚೆಲ್ಲಿದರೆ ಒಳ್ಳೆಯದಾಗುತ್ತದೆ. ಆದರೆ ಅದನ್ನು ನಾವು ನಿಭಾಯಿಸಿಕೊಳ್ಳುತ್ತೇವೆ. ನಮ್ಮ ಪಾಡಿಗೆ ಬಿಡಿ.

ಅಧ್ಯಕ್ಷರು :— ಕ್ಯಾಬಿನೆಟ್ ಫಾರ್ಮೇಷನ್, ರೀಷಫಲ್, ಇದಕ್ಕೂ ಏನು ಸಂಬಂಧ?

ಶ್ರೀ ಪಿ.ಜಿ.ಆರ್. ಸಿಂಧ್ಯ :— ನಾನು ರೀಷಫಲ್ ಬಗ್ಗೆ ಹೇಳಲಿಲ್ಲ. ನಾವೂ ಕೂಡ ಸರ್ಕಾರ ನಡೆಸಿದ್ದೇವೆ. ಪ್ರಾಮಾಣಿಕವಾಗಿ ಮಾತನಾಡೋಣ. ಈಗ ಆಶ್ರಯ ಸಮಿತಿ ನಮ್ಮ ತಾಲ್ಲೂಕಿನಲ್ಲಿ ಇದೆ. ನೀವು ಅಧ್ಯಕ್ಷರಾಗಿರುವುದರಿಂದ ತಾವು ಕಮಿಟಿ ಅಧ್ಯಕ್ಷರಾಗುವುದಕ್ಕೆ ಆಗುವುದಿಲ್ಲ. ನೀವು ಬೇರೆ ಯಾರಿಗೋ ಸೂಚನೆ ಮಾಡುತ್ತೀರಿ. ಆದರೆ ಅಲ್ಲಿ ಇರತಕ್ಕಂಥ ಸಮಿತಿಯ ಸದಸ್ಯರು ಇದ್ದಾರಲ್ಲ ಅವರೆಲ್ಲಾ ಯಾವ ಪಕ್ಷದವರು ಸ್ವಾಮಿ? ನಮ್ಮ ಮಾನ್ಯ ಸದಸ್ಯರಾದ ಸದಾನಂದ ಗೌಡರು ಮಾಡಿದ ಹಾಗೆ ಹೈಕೋರ್ಟಿಗೆ ಹೋಗಿಬಿಟ್ಟು ಒಂದು ಆರ್ಡರ್ ತೆಗೆದುಕೊಂಡು ಬಂದಿದ್ದಾರೆ. ನಮ್ಮ ಪಾರ್ಟಿಯಲ್ಲಿ, ಅಷ್ಟೆ, ನಿಮ್ಮ ಪಾರ್ಟಿಯಲ್ಲಿ ಅಷ್ಟೆ, ಆಶ್ರಯ ಸಮಿತಿ ಇರಬಹುದು, ಆರಾಧನಾ ಇರಬಹುದು, ಬಗರ್ ಹುಕುಂ ಇರಬಹುದು ಎಲ್ಲವೂ ಸಹ ಮಾನ್ಯ ಮುಖ್ಯಮಂತ್ರಿಗಳು ಅವರವರ ಪಕ್ಷದವರನ್ನು ಹಾಕಿಕೊಳ್ಳುತ್ತಾರೆ. ಇಲ್ಲಿ 1972-73ನೇ ಇಸವಿಯಲ್ಲಿ ಶ್ರೀಮಾನ್ ದೇವರಾಜ್ ಅರಸು ಅವರು ಮುಖ್ಯಮಂತ್ರಿಯಾಗಿದ್ದಂತಹ ಕಾಲದಲ್ಲಿ ಬಹಳ ಜನ ಸದಸ್ಯರುಗಳಿಗೆ ಇದು ಗೊತ್ತಿಲ್ಲ. ಆದರೆ ಮಾನ್ಯ ಮಲ್ಲಿಕಾರ್ಜುನ ಖರ್ಗೆ, ಮಾನ್ಯ ಧರ್ಮಸಿಂಗ್ ಇಂತಹವರಿಗೆ ಎಲ್ಲಾ ಗೊತ್ತಿರುತ್ತದೆಂದು ನಾನು ಅಂದುಕೊಂಡಿದ್ದೇನೆ. ಲ್ಯಾಂಡ್ ಟ್ರಿಬ್ಯೂನಲ್ ಮೆಂಬರ್ ಆಗಬೇಕಾದರೆ ಈ ಸದನದಲ್ಲಿ ಧರಣಿಯನ್ನು ವಿರೋಧ ಪಕ್ಷದವರು ಮಾಡಿದ್ದರೆಂದು

12.00 ಪಿ.ಎಂ.

ಸುದ್ದಿ ಇತ್ತು. ಆದರೆ ಇವತ್ತು ಏನಾಗಿದೆ? ಉದಾಹರಣೆಗೆ ವರ್ಗಾವಣೆ ವಿಷಯವನ್ನೇ ತೆಗೆದುಕೊಳ್ಳೋಣ. ವರ್ಗಾವಣೆಯನ್ನು ನಾವು ಯಾವ ಆಧಾರದ ಮೇಲೆ ಮಾಡುತ್ತೇವೆ?

ಅಧ್ಯಕ್ಷರು :— ತಾವು ಯಾವ್ಯಾವ ವಿಷಯಗಳಿಗೋ ಹೋಗುತ್ತಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಸಿಂಧ್ಯರವರು ಮಾತನಾಡುತ್ತಾ ಯಾವ ಆಧಾರದ ಮೇಲೆ ವರ್ಗಾವಣೆ ಮಾಡಲಾಗುತ್ತದೆಂದು ಕೇಳುತ್ತಿದ್ದಾರೆ. ನೀವು ಹಾಕಿಕೊಟ್ಟಿರುವಂಥ ಗೈಡ್‌ಲೈನ್ಸ್ ಮೇಲೆಯೇ ನಾವು ವರ್ಗಾವಣೆ ಮಾಡುತ್ತಿದ್ದೇವೆಂದು ಹೇಳಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಅಧ್ಯಕ್ಷರೆ, ನಾನು ಹಾಕಿಕೊಟ್ಟಿರುವ ಗೈಡ್‌ಲೈನ್ಸ್ ಆಧಾರದ ಮೇಲೆಯೇ ಅವರು ವರ್ಗಾವಣೆ ಮಾಡಿದ್ದಾರೆಂದು ಏನು ಸಚಿವರು ಹೇಳಿದ್ದಾರೆ, ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದನ್ನು ಅವರು ಚೆನ್ನಾಗಿ ಮಾಡಿದ್ದಾರೆ. ಕೆಲವರು ಒಂದೇ ಸ್ಥಳದಲ್ಲಿ, 15-20 ವರ್ಷಗಳ ಕಾಲ ಬೇರು ಬಿಟ್ಟುಕೊಂಡು ಕುಳಿತಿದ್ದರು. ಇದರ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ಅಂತಹವರನ್ನೆಲ್ಲಾ ಬೇರೆಡೆಗೆ ವರ್ಗಾವಣೆ ಮಾಡಿದ್ದಾರೆ. ನಾನು ಅದನ್ನು ಡಿಸ್ ಪ್ಯೂಟ್ ಮಾಡುತ್ತಿಲ್ಲ. ಆದರೆ, ನಾನು ಇಲ್ಲಿ ಯಾವ ಅಂಶವನ್ನು ಪ್ರಸ್ತಾಪಿಸಲು ಹೊರಟಿದ್ದೇನೆಂದರೆ, ಒಬ್ಬ ಉಪಕುಲಪತಿಯನ್ನು ನೇಮಕ ಮಾಡುವುದಕ್ಕೆ ಮಾನ್ಯ ರಾಜ್ಯಪಾಲರಿಗಿದ್ದ ಅಧಿಕಾರವನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕೊಡುವುದರ ಮೂಲಕ ರಾಜ್ಯಪಾಲರ ಅಧಿಕಾರವನ್ನು ಏಕೆ ಕಿತ್ತುಕೊಳ್ಳುತ್ತಿದ್ದೀರಿ? ಇದರ ಘನ ಉದ್ದೇಶವೇನು? ದುರುದ್ದೇಶವೇನು? ಇದರ ಬಗ್ಗೆ ನಾನು ಹೇಳುವುದೇನೆಂದರೆ, ಬಹಳಷ್ಟು ವಿಚಾರಗಳಿದ್ದು, ನಿಮ್ಮಲ್ಲಿ, ಬಹಳಷ್ಟು ಜನ ಬುದ್ಧಿವಂತರಿದ್ದಾರೆ, ಶಿಕ್ಷಣ ತಜ್ಞರಿದ್ದಾರೆ, ಇಲಾಖೆಯಲ್ಲಿ ಕೆಲಸ ಮಾಡಿರುವವರು ಮಂತ್ರಿಮಂಡಲದಲ್ಲೂ ಇದ್ದಾರೆ, ಇವರೆಲ್ಲರ ಅಭಿಪ್ರಾಯಗಳನ್ನು ತಾವು ಪಡೆದುಕೊಳ್ಳದೆ ಈ ಮಸೂದೆಯನ್ನು ಕಳೆದ ಮೂರು ದಿವಸಗಳಲ್ಲಿ ತರಾತುರಿಯಿಂದ ತೆಗೆದುಕೊಂಡು ಬಂದಿದ್ದೀರಿ. ಕಾರಣವೇನು? ಇದನ್ನು ತಾವು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಬೇಕು. ಇಲ್ಲಿ ಈ ಮಸೂದೆ ಅಂಗೀಕಾರವಾದ ನಂತರ ಮೇಲ್ಮನೆಯಲ್ಲೇನೂ ಅಂಗೀಕಾರವಾಗುವುದಿಲ್ಲ. ಮೇಲ್ಮನೆಯಲ್ಲಿ ನಿಮಗೆ ಬಹುಮತವಿಲ್ಲ. ಮೇಲ್ಮನೆಗೆ ತಾವು ಈ ಮಸೂದೆಯನ್ನು ತೆಗೆದುಕೊಂಡು ಹೋದ ತಕ್ಷಣ, ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡುವುದಕ್ಕೆ ಒಂದು ನಿರ್ಣಯ ಮಂಡಿಸುತ್ತಾರೆ, ಅಲ್ಲಿರುವ ಮಾನ್ಯ ಸಭಾಪತಿಯವರಿಗೆ ವಿಧಿಯಿಲ್ಲ, ವಿರೋಧ ಪಕ್ಷಗಳಿಗೆ ಅಲ್ಲಿ ಬಹುಮತವಿದೆ. ನಂತರ ಅದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗುತ್ತದೆ. ಆದುದರಿಂದ, ನಾನು ಸಲಹೆ ಕೊಡುವುದೇನೆಂದರೆ, ತಾವು ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿ. ಈ ರೀತಿ ಕಮಿಟಿಗೆ ರೆಫರ್ ಮಾಡುವುದರಿಂದ ಇದರ ಬಗ್ಗೆ ಮೂರ್ನಾಲ್ಕು ತಿಂಗಳುಗಳ ಕಾಲ ಇಡೀ ರಾಜ್ಯದ್ಯಂತ ಚರ್ಚೆಯಾಗುತ್ತದೆ. ಚರ್ಚೆಯಾಗಿ ಮಸೂದೆಯ ಮೂಲಕ ತಾವೇನು ಒಳ್ಳೆಯ ಅಂಶಗಳನ್ನು ತೆಗೆದುಕೊಂಡು ಬಂದಿದ್ದೀರಿ, ಶಿಕ್ಷಣ ಕ್ಷೇತ್ರದಲ್ಲಿ ಅಕಾಡೆಮಿಕ್ ವಾತಾವರಣವಿಲ್ಲ, ಆದುದರಿಂದ, ಶೈಕ್ಷಣಿಕ ವಾತಾವರಣವನ್ನು ನಿರ್ಮಾಣ ಮಾಡುವ ದೃಷ್ಟಿಯಿಂದ, ಸಾಮಾಜಿಕ ನ್ಯಾಯವನ್ನು ಒದಗಿಸುವ ದೃಷ್ಟಿಯಿಂದ ಮೌಲ್ಯಮಾಪನದಲ್ಲಿ ಇರಬಹುದು, ಅಥವಾ ಆಡಳಿತದಲ್ಲಿರಬಹುದು,

ಇದರಲ್ಲಿ ಆಗಬೇಕಾಗಿರುವಂಥ ಭ್ರಷ್ಟಾಚಾರವನ್ನು ತಡೆಗಟ್ಟುವ ವಿಚಾರವಿರಬಹುದು ಅಥವಾ ಆಡಳಿತದ ಸುಧಾರಣೆ ವಿಚಾರದಲ್ಲಿರಬಹುದು, ತಾವು ತಂದಿರುವುದನ್ನು ನಾವು ಸ್ವಾಗತಿಸುತ್ತೇವೆ. ಮಾನ್ಯ ಅಧ್ಯಕ್ಷರೆ, ನಾನು ಕೊನೆಯದಾಗಿ ಒಂದೇ ಒಂದು ವಿಚಾರವನ್ನು ಪ್ರಸ್ತಾಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಏನೆಂದರೆ, ಇವರು ಯಾವತ್ತೂ ತರಾತುರಿಯಲ್ಲಿ ಈ ಮಸೂದೆಯನ್ನು ಸದನದಲ್ಲಿ ತರುತ್ತಿರಲಿಲ್ಲ. ಆದರೆ, ಇದ್ದಕ್ಕಿದ್ದಂತೆ ಏಕೆ ಈ ಮಸೂದೆಯನ್ನು ತೆಗೆದುಕೊಂಡು ಬಂದಿದ್ದಾರೆ? ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡದಾಗಿ ಕ್ರಾಂತಿ ಮಾಡುವ ವಿಚಾರ ತಮಗೆ ಈಗ ಬಂದುಬಿಟ್ಟಿತೇ? ಎಲ್ಲಾದಕ್ಕೂ ಟಾಸ್ಕ್‌ಫೋರ್ಸ್ ಮಾಡುತ್ತೀರಿ ಬೆಂಗಳೂರು ನಗರವನ್ನು ಎಲ್ಲಾ ರೀತಿಯಲ್ಲೂ ಸುಂದರವಾಗಿಡುವುದಕ್ಕೆ ಎಲ್ಲಾ ವ್ಯವಸ್ಥೆ ಮಾಡುತ್ತೀರಿ, ಎಲ್ಲವನ್ನೂ ಖಾಸಗೀಕರಣ ಮಾಡುತ್ತೀರಿ. ಇದನ್ನು ಮಾತ್ರ ಸೆಂಟ್ರಲೈಜ್ ಮಾಡುವುದಕ್ಕೆ ಹೊರಟಿದ್ದೀರಲ್ಲ, ಏಕೆ? Why do you want to concentrate power in the hands of the Chief Minister? ಇದನ್ನು ತೆಗೆದುಕೊಂಡು ಬಂದಿರುವುದಕ್ಕೆ ಒಂದು ದುರುದ್ದೇಶವಿದೆ; ಅದಕ್ಕೋಸ್ಕರ ನಾವು ವಿರೋಧಿಸುತ್ತಿದ್ದೇವೆ. ತಾವು ಇದನ್ನು ಬದಲಾಯಿಸಿ, ನಂತರ ಇದನ್ನು ಅಂಗೀಕರಿಸಿಕೊಡುವುದಕ್ಕೆ ನಾವು ತಯಾರಿದ್ದೇವೆ. ಉಪಕುಲಪತಿಗಳನ್ನು ನೇಮಕ ಮಾಡುವುದಕ್ಕೆ ರಾಜ್ಯಪಾಲರಿಗಿದ್ದ ಅಧಿಕಾರವನ್ನು ತಾವೇನು ಮೊಟಕುಗೊಳಿಸುತ್ತಿದ್ದೀರಿ, ಆ ಕುರಿತ ಸೆಕ್ಷನ್ ಅನ್ನು ಮಸೂದೆಯಿಂದ ತೆಗೆದುಹಾಕಿ. ಮಸೂದೆಯನ್ನು ಸರ್ವಾನುಮತದಿಂದ ನಾವು ಅಂಗೀಕರಿಸಿಕೊಡುತ್ತೇವೆ. ಆದರೆ, ಇದಕ್ಕೆ ನೀವು ತಯಾರಿಲ್ಲ. ಇದರಲ್ಲಿರುವ ದುರುದ್ದೇಶವೇನೆಂದರೆ, xxx ಅದಕ್ಕೋಸ್ಕರ ಅವರು ಈ ರೀತಿ ಮಸೂದೆಯನ್ನು ತಂದಿದ್ದಾರೆ.

ಅಧ್ಯಕ್ಷರು :— ಮಾನ್ಯ ಸಿಂಧ್ಯರವರೆ, ರಾಜ್ಯಪಾಲರ ವಿಷಯವನ್ನು ಇಲ್ಲೇಕೆ ಪ್ರಸ್ತಾಪಿಸುತ್ತೀರಿ?

ಶ್ರೀ ಪಿ.ಜಿ.ಆರ್ ಸಿಂಧ್ಯ :— ಮಾನ್ಯ ಅಧ್ಯಕ್ಷರೆ, ಈ ಸದನ ಕ್ರಿಯೇಟ್ ಆಗಿರುವುದೇ ರಾಜ್ಯಪಾಲರಿಂದ. xxx ಅದಕ್ಕೋಸ್ಕರ ಅವರು ಈ ರೀತಿಯ ಮಸೂದೆಯನ್ನು ಮಂಡಿಸಿರುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಇಲ್ಲದಿರುವ ಸಮಸ್ಯೆಯನ್ನು ಹುಟ್ಟುಹಾಕುವುದು ಬೇಡ. ಯಾವುದೇ ಭಿನ್ನಾಭಿಪ್ರಾಯವಿಲ್ಲ. ರಾಜ್ಯಪಾಲರು ಮತ್ತು ಮುಖ್ಯಮಂತ್ರಿಗಳಿಬ್ಬರೂ ಚೆನ್ನಾಗಿದ್ದಾರೆ.

ಅಧ್ಯಕ್ಷರು :— ಮಾನ್ಯ ಸಿಂಧ್ಯರವರೆ, ರಾಜ್ಯಪಾಲರ ಹೆಸರನ್ನು ತಾವು ಇಲ್ಲಿ ಉಪಯೋಗಿಸಬಾರದು.

---

xxx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಪಿ.ಜಿ.ಆರ್ ಸಿಂಧ್ಯ :— ಮಾನ್ಯ, ಅಧ್ಯಕ್ಷರೆ, ನಾನೇನಾದರೂ ಸಂಸದೀಯವಲ್ಲದ ಪದವನ್ನು ಉಪಯೋಗಿಸಿದ್ದೇನೆಯೇ? ಆ ದುರುದ್ದೇಶದಿಂದಲೇ ಮಾಡಿದ್ದರೆ ಮಾನ್ಯ ರಾಜ್ಯಪಾಲರ ಹೆಸರನ್ನು ತೆಗೆದುಕೊಳ್ಳಬಾರದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಇಲ್ಲಿ ರಾಜ್ಯಪಾಲರ ಹೆಸರನ್ನು ತೆಗೆದುಕೊಂಡು ಬರಬಾರದೆಂದು ಏನೂ ಹೇಳುವುದಿಲ್ಲ, ಅನಾವಶ್ಯಕವಾಗಿ ಸುಮ್ಮನೆ ರಾಜ್ಯಪಾಲರ ಹೆಸರನ್ನು ಏಕೆ ತೆಗೆದುಕೊಂಡು ಬರುವುದು?

ಅಧ್ಯಕ್ಷರು :— ಏನೂ ಇಲ್ಲದಿರುವಾಗ ಆ ಕುರಿತು ಸುಮ್ಮನೇ ಏಕೆ ಚರ್ಚೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಅವರ ಹೆಸರನ್ನು ಇಲ್ಲಿ ಪ್ರಸ್ತಾಪಿಸುವುದರಿಂದ ತಮಗೇನಾದರೂ ಪ್ರಯೋಜನವಾಗುತ್ತದೆಂದು ಕಂಡುಬಂದರೆ ತಾವು ಪ್ರಸ್ತಾಪಿಸಿ. ಅದರಿಂದೇನೂ ಪ್ರಯೋಜನವಾಗುವುದಿಲ್ಲ.

ಶ್ರೀ ಪಿ.ಜಿ.ಆರ್ ಸಿಂಧ್ಯ :— ತಾವು ದಯವಿಟ್ಟು ಕ್ಷಮಿಸಬೇಕು. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಹೇಳಲಿ ಅಥವಾ ಅವರ ಪರವಾಗಿ ಸರ್ಕಾರದಲ್ಲಿರುವ ಯಾರಾದರೂ ಹೇಳಲಿ. ನಮಗೇನೂ ಭಿನ್ನಾಭಿಪ್ರಾಯವಿಲ್ಲ; ನಾವು ಬಹಳ ಆತ್ಮೀಯಿಂದಿದ್ದೇವೆ, ನಮ್ಮ ಶಿಫಾರಸ್ಸುಗಳೆಲ್ಲವನ್ನೂ ಅವರು ಒಪ್ಪಿದ್ದಾರೆ ಎನ್ನುವುದಾದರೆ ನಮ್ಮದೇನೂ ತಕರಾರಿಲ್ಲ. ಆದರೆ, ಇದನ್ನು ತಾವು ಅನ್‌ಪಾರ್ಲಿಮೆಂಟರಿ ಎಂದು ಹೇಳಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ನಾನು ಅಪಾರ್ಲಿಮೆಂಟರಿ ಎಂದು ಹೇಳಲಿಲ್ಲ.

ಅಧ್ಯಕ್ಷರು :— ಅನ್‌ಪಾರ್ಲಿಮೆಂಟರಿ ಅಲ್ಲ. ಸಾಮಾನ್ಯವಾಗಿ ರಾಜ್ಯಪಾಲರ ಹೆಸರನ್ನು ಉಪಯೋಗಿಸಬಾರದು ಅಷ್ಟೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರದಲ್ಲಿ ಏನು ಹೇಳುತ್ತಾರೆಂದು ಗಮನಿಸಿ ನಂತರ ವಿವರಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಸಭಾಧ್ಯಕ್ಷರೆ, ಆಗಿರುವ ಒಂದು ತಪ್ಪನ್ನು ಸರಿಪಡಿಸುವುದಕ್ಕೆ ಮತ್ತೊಂದು ತಪ್ಪನ್ನು ನಮ್ಮಿಂದ ಮಾಡಿಸಬೇಡಿ. ಅವರು ಏನು ಹೇಳಿದ್ದಾರೆ, ಅದು ತಪ್ಪು ಎಂದು ತಾವೇ ತೀರ್ಮಾನಿಸುವುದಾದರೆ ಉತ್ತರ ಹೇಳಿಸಿ ಮತ್ತೊಂದು ತಪ್ಪನ್ನು ನಮ್ಮಿಂದ ಮಾಡಿಸಬೇಡಿ. ರಾಜ್ಯಪಾಲರ ವಿಚಾರವನ್ನು ಶಾಸನಸಭೆಗಳಲ್ಲಿ ಚರ್ಚಿಸಬಾರದೆಂಬ ಒಂದು ಸಂಪ್ರದಾಯವನ್ನು ಹಾಕಿಕೊಂಡು ಬಂದಿದ್ದೇವೆ. ಇದಕ್ಕೆ ವಿರುದ್ಧವಾಗಿ ಹೋಗುವುದು ಬೇಡ. ಅದಕ್ಕೋಸ್ಕರ ಇವರು ತಾವೇ ಮಾಡಿರುವ ತಪ್ಪನ್ನು ನಮ್ಮಿಂದ ಸರಿಪಡಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ತಾವು ದಯವಿಟ್ಟು ಅದಕ್ಕೆ ಅವಕಾಶ ಕೊಡಬಾರದು.

ಶ್ರೀ ಪಿ.ಜಿ.ಆರ್ ಸಿಂಧ್ಯ :— ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಬಗ್ಗೆ ನನಗೆ ಬಹಳ ಗೌರವವಿದೆ. ರಾಜ್ಯಪಾಲರ ವಕೀಲನಾಗಿ ನಾನು ಈ ಮಾತಾಡುತ್ತಿಲ್ಲ. ಆದರೆ, ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ನಾವು ತುಂಬಾ ಗೌರವ ಕೊಟ್ಟಿದ್ದೇವೆ. ಅವರು ಮಾಡಿರುವ ಭಾಷಣಗಳ ಪ್ರತಿಗಳಿಗೂ ಸಹ ಗೌರವ ಕೊಟ್ಟಿದ್ದೇವೆ. ಇವೆಲ್ಲಾ ನಡೆಯುವಾಗ ನಾನೇನೂ ಹೇಳಲಿಲ್ಲ. ರಾಜ್ಯಪಾಲರು ನಾನ್-ಪಾರ್ಟಿ ಬೇಸಿಸ್ ಮೇಲೆ ಇದನ್ನು ಕೆಲಸ ಮಾಡುತ್ತಾರೆ. ಅವರಿಗಿರುವ ಅಧಿಕಾರವನ್ನು ನೀವೇಕೆ ಕಸಿದುಕೊಳ್ಳುತ್ತೀರಿ? ಇದರಿಂದ ನಿಮ್ಮ ಮೇಲೆ ರಾಜಕೀಯ ಒತ್ತಡ ಬರುತ್ತದೆ, ಕೆಟ್ಟ ಹೆಸರು ಬರುತ್ತದೆ, ನಿಮ್ಮ ರಾಜಕಾರಣಕ್ಕೆ ತೊಂದರೆಯಾಗುತ್ತದೆ ಮತ್ತು ನಾವುಗಳು ಟ್ರಾನ್ಸ್‌ಪರೆಂಟ್ ಗವರ್ನಮೆಂಟ್ ಮಾಡೆಲ್ ಗವರ್ನಮೆಂಟ್, ಐಡಿಯಲ್ ಗವರ್ನಮೆಂಟ್ ಎಂದು ದೇಶದಲ್ಲೆಲ್ಲಾ ಏನು ಹೇಳುತ್ತಿದ್ದೀರಿ, ಇದರಿಂದ ಕರ್ನಾಟಕ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆಂದು ಹೇಳಿದರೆ ಅದನ್ನೇಕೆ ಕಡತದಿಂದ ತೆಗೆಯುತ್ತೀರಿ? ಅದು ಕಡತದಲ್ಲಿಯೇ ಇರಲಿ.

MR SPEAKER :— Finally I will give a ruling.

(Interruptions)

Mr. SPEAKER :— It should be expunged.

SRI. P.G.R. SCINDIA :— I am going to protest. I am going to repeat it 100 times. There is a difference and that is the intention of the Bill....

ಪ್ರೊ: ಬಿ.ಕೆ. ಚಂದ್ರಶೇಖರ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಸಿಂಧ್ಯರವರು ಮಾತನಾಡುತ್ತಾ, ಮಾನ್ಯ ಮುಖ್ಯಮಂತ್ರಿಗಳಿಗೂ ಹಾಗೂ ರಾಜ್ಯಪಾಲರಿಗೂ ಭಿನ್ನಾಭಿಪ್ರಾಯವಿದ್ದು, ಮುಖ್ಯಮಂತ್ರಿಗಳ ಶಿಫಾರಸ್ಸುಗಳನ್ನು ರಾಜ್ಯಪಾಲರು ಒಪ್ಪುತ್ತಿಲ್ಲವೆಂದರು. ಆದುದರಿಂದ, ಮಾನ್ಯ ಮುಖ್ಯಮಂತ್ರಿಗಳು ಯಾವುದೇ ಒಂದೇ ಒಂದು ವೈಸ್ ಚಾನ್ಸಲರ್ ಬಗ್ಗೆ ರಾಜ್ಯಪಾಲರಿಗೆ ಶಿಫಾರಸ್ಸು ಮಾಡಿರುವ ಬಗ್ಗೆ ತಮಗೆ ಮಾಹಿತಿಯಿದ್ದರೆ ತಾವು ದಯಮಾಡಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್ ಸಿಂಧ್ಯ :— ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಸಾಕ್ಷಿ ಆಧಾರಗಳ ಸಮೇತ ಮಾನ್ಯ ಸದಸ್ಯರಾದ ಸದಾನಂದಗೌಡರು ಹೇಳಿದ್ದಾರೆ. ಅದನ್ನು ತಾವು ಪರಾಂಬರಿಸಬೇಕು. ಅದಕ್ಕೋಸ್ಕರವೇ ಅಪ್ರತ್ಯಕ್ಷವಾಗಿ, ಪ್ರತ್ಯಕ್ಷವಾಗಿ ತಾವು ತೆಗೆಯುತ್ತೀರಿ. ಅದು ಅಪ್ರತ್ಯಕ್ಷವಾಗಿ ಇರಲಿ ಸಾರ್. Let the people know.

MR. SPEAKER :— You must have proper evidence.

(Interruptions)

MR. SPEAKER :— Please Expunge it...

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೆ, ಮೈಸೂರು ಮತ್ತು ಧಾರವಾಡ ಕೃಷಿ ವಿಶ್ವವಿದ್ಯಾನಿಲಯಗಳಿಗೆ ಕುಲಪತಿಗಳನ್ನು ನೇಮಕ ಮಾಡುವ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ರಾಜ್ಯಪಾಲರಿಗೂ ವ್ಯಾಪಕವಾಗಿ ಭಿನ್ನಾಭಿಪ್ರಾಯ ವ್ಯಕ್ತವಾಗಿದೆಯೆಂದು ಅನೇಕ ಪತ್ರಿಕೆಗಳಲ್ಲಿ ವರದಿಯಾಗಿದೆ ಎನ್ನುವುದನ್ನು ಪ್ರಸ್ತಾಪಿಸಿದ್ದೇನೆ.

ಶ್ರೀ ಪಿಜಿಆರ್ ಸಿಂಧ್ಯ :— ಮಾನ್ಯ ಅಧ್ಯಕ್ಷರೆ, ತಮ್ಮ ರೂಲಿಂಗ್ ಅನ್ನು ದಯವಿಟ್ಟು ಪರಾಂಬರಿಸಬೇಕು. How can this be expunged? It is not unparliamentary. We are not attributing anything against the Chief Minister or the Governor.

ಅಧ್ಯಕ್ಷರು :— ಊಹಾಪೋಹ ಬೇಡ.

ಶ್ರೀ ಪಿಜಿಆರ್ ಸಿಂಧ್ಯ :— ಊಹಾಪೋಹವಲ್ಲ. How can anybody be suppressed?

ಅಧ್ಯಕ್ಷರು :— ತಮ್ಮ ಅಭಿಪ್ರಾಯ ತಾವು ಹೇಳಿದ್ದೀರಿ. ಅದೇ ರೀತಿ ನನ್ನ ಅಭಿಪ್ರಾಯವನ್ನೂ ಹೇಳಿದ್ದೇನಲ್ಲ.

ಶ್ರೀ ಪಿಜಿಆರ್ ಸಿಂಧ್ಯ :— ಈಗ ನಾವು ಭಾಷಣ ಮಾಡುವುದೇ ಜನರಿಗೆ ಗೊತ್ತಾಗಲೆಂದು. ನನ್ನ ಭಾಷಣವನ್ನು ನೀವು ಎಕ್ಸ್‌ಪಂಜ್ ಮಾಡಿದರೆ ಜನರಿಗೆ ಹೇಗೆ ಗೊತ್ತಾಗುತ್ತದೆ?

ಅಧ್ಯಕ್ಷರು :— particular ಪ್ಯಾರಾಗ್ರಾಫ್ ಅನ್ನು ನಾನು ಎಕ್ಸ್‌ಪಂಜ್ ಮಾಡುತ್ತೇನೆ.

ಶ್ರೀ ಪಿಜಿಆರ್ ಸಿಂಧ್ಯ :— ನಾನು ನೂರು ಸಲ ಹೇಳುತ್ತೇನೆ, ಇದು ಇದೆ.

ಶ್ರೀ ಬಿ. ಸೋಮಶೇಖರ್ :— ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರಾದ ಸದಾನಂದಗೌಡರು ತಿಳಿಸಿರುವಂತೆ ಪತ್ರಿಕೆಗಳಲ್ಲಿ ವರದಿಯಾಗಿರುವುದನ್ನು ರಾಜ್ಯಾದ್ಯಂತ ಲಕ್ಷಾಂತರ ಜನರು ಓದಿರುತ್ತಾರೆ. ಪತ್ರಿಕೆಗಳಲ್ಲಿ ವರದಿಯಾಗಿರುವುದರ ಬಗ್ಗೆ ನಾವು ವಿಧಾನಸಭೆಯಲ್ಲಿ ಹೇಳುವುದಕ್ಕಾಗುವುದಿಲ್ಲವೆಂದು ನಮ್ಮ ಬಾಯಿ ಮುಚ್ಚಿಸಿದರೆ ಹೇಗೆ?

MR SPEAKER :— You must have sufficient evidence at the same time.

(Interruptions)

SRI. B. SOMASHEKAR :— Members can make allegations. They cannot be expected to adduce evidence.

MR. SPEAKER :— As per Rules of Procedure, it is my duty to expunge.

(Interruptions)

ಅಧ್ಯಕ್ಷರು :— ಪತ್ರಿಕೆಗಳಲ್ಲಿ ಬೇಕಾದಷ್ಟು ವಿಚಾರಗಳು ಬರುತ್ತವೆ, ಅವನ್ನೆಲ್ಲಾ ಇಲ್ಲಿ ನಾವು ಚರ್ಚೆ ಮಾಡುವುದಕ್ಕಾಗುವುದಿಲ್ಲ; You must have other evidence also.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೆ ಹಾಗಾದರೆ ಯಾವುದನ್ನು ಆಧಾರವಾಗಿಟ್ಟುಕೊಂಡು ಚರ್ಚೆ ಮಾಡಬೇಕು.

ಶ್ರೀ ಶಿವಾನಂದ ಎಸ್. ಪಾಟೀಲ್ :— ಅವರು ಪತ್ರಿಕೆಯಲ್ಲಿ ಬಂದ ದಿವಸ ಅಲ್ಲಗಳೆಯಲಿಲ್ಲ, ಆ ವಿಚಾರ ಪತ್ರಿಕೆಗಳಲ್ಲಿ ಬಂದು ಎಷ್ಟು ದಿವಸಗಳಾದವು?

ಶ್ರೀ ಡಿ.ವಿ. ಸದಾನಂದಗೌಡ :— ನಾನು ನನ್ನ ಪ್ರಾರಂಭಿಕ ಭಾಷಣದಲ್ಲಿ, ಇವರು ಈ ಒಂದು ವಿಧೇಯಕವನ್ನು ತರಲು ಕಾರಣ ಮೈಸೂರು ಹಾಗೂ ಧಾರವಾಡ ಕೃಷಿ ವಿಶ್ವವಿದ್ಯಾಲಯಗಳ ಕುಲಪತಿಗಳ ನೇಮಕಾತಿಯಲ್ಲಿ, ಮಾನ್ಯ ಮುಖ್ಯಮಂತ್ರಿ ಹಾಗೂ ಮಾನ್ಯ ರಾಜ್ಯಪಾಲರ ನಡುವೆ ಭಿನ್ನಾಭಿಪ್ರಾಯವಿದೆ ಎಂದು ನೇರವಾಗಿ ಹೇಳಿದ್ದೇನೆ. ಮಾಹಿತಿಗಳು ನಮಗೆ ತಿಳಿದು ಬರುವುದು ಪತ್ರಿಕೆಗಳ ಮುಖಾಂತರ ಅವರು ಮಾಡಿದ್ದನ್ನು ನಮಗೆ ಯಾರು ಬಂದು ಹೇಳುತ್ತಾರೆ? ಅವರು ಎಲ್ಲೆಲ್ಲೊ ಹೇಳಿದ್ದು ಪತ್ರಿಕೆಗಳಲ್ಲಿ ಬರುತ್ತವೆ, ಪತ್ರಿಕೆಯಲ್ಲಿ ಬಂದಿರುವುದನ್ನು ಆಧಾರವಾಗಿಟ್ಟುಕೊಂಡು ನಾವು ಮಾತನಾಡಬೇಕಾಗಿದೆ.

ಅಧ್ಯಕ್ಷರು :— ಪತ್ರಿಕೆಯಲ್ಲಿ ಬಂದಿರುವುದನ್ನ ಆಧಾರವಾಗಿಟ್ಟುಕೊಳ್ಳಬೇಡಿ, ಇತರೆ ಆಧಾರಗಳು ಇರಬೇಕು. You must have other evidence also.

ಶ್ರೀ ಪಿಜಿಆರ್ ಸಿಂಧ್ಯ :— ಮಾನ್ಯ ಅಧ್ಯಕ್ಷರೆ, ನಾವು ಹೇಳುವುದಕ್ಕೆ, ಸರ್ಕಾರದವರು ಡಿನೈ ಮಾಡಿದರೆ ಸಾಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಇಲ್ಲಿ, ಸಾಮಾನ್ಯವಾಗಿ ರಾಜ್ಯಪಾಲರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ, ಇದೊಂದು ಕನ್ವೆನ್ಷನ್ ರಾಜ್ಯಪಾಲರ ಕಾಂಡಕ್ಟ್ ಬಗ್ಗೆಯೂ ಕೂಡ ನಾವು ಮಾತನಾಡುವುದಕ್ಕೆ ಹೋಗುವುದಿಲ್ಲ. ಸುಮ್ಮನೆ ಆ ಬಗ್ಗೆ ರೆಫರ್ ಮಾಡಿ ಯಾವ ಸಮಸ್ಯೆ ಇಲ್ಲವೋ ಆ ಸಮಸ್ಯೆ ಸೃಷ್ಟಿ ಮಾಡಿದಂತಾಗುತ್ತದೆ.

ಪತ್ರಿಕೆಯಲ್ಲಿ ಹಾಗೆ ಬಂದಿದೆ ಎಂದು ಹೇಳಿಕೊಳ್ಳುವುದಕ್ಕೆ ಅವರಿಗೆ ಅಧಿಕಾರವಿದೆ, ಆದರೆ ಆ ಸುದ್ದಿ ಸತ್ಯಕ್ಕೆ ದೂರವಾದುದು; ಆ ಪತ್ರಿಕೆಯಲ್ಲಿ ಬಂದಿರುವುದಕ್ಕೆ ಯಾವ ಆಧಾರವೂ ಇಲ್ಲ, ಮಾನ್ಯ ಮುಖ್ಯಮಂತ್ರಿ ಹಾಗೂ ಮಾನ್ಯ ರಾಜ್ಯಪಾಲರ ನಡುವೆ ಯಾವ ಭಿನ್ನಾಭಿಪ್ರಾಯವೂ ಇಲ್ಲ, ಅವರ ಬಗ್ಗೆ ಪ್ರಸ್ತಾಪ ಮಾಡುವಂಥ ಅವಶ್ಯಕತೆಯೇ ಇಲ್ಲವೆಂದು ನಾನು ಅವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್ :— ಈ ಬಗ್ಗೆ ಭಿನ್ನಾಭಿಪ್ರಾಯ ಬಂದಿರುವುದು ಚಾನ್ಸಲರ್ ಹಾಗೂ ಮುಖ್ಯಮಂತ್ರಿಗಳ ನಡುವೆ, ಆದರೆ ರಾಜ್ಯಪಾಲರ ನಡುವೆಯಲ್ಲ; ಆ ದೃಷ್ಟಿಯಿಂದ ಹೇಳಿರುವುದು; ವಿಶ್ವವಿದ್ಯಾಲಯಗಳ ಚಾನ್ಸಲರ್ ಆಗಿ ರಾಜ್ಯಪಾಲರನ್ನು ನೇಮಕ ಮಾಡಲಾಗುವುದು, ನಾನು ಆ ಖಾತೆಯನ್ನು ವಹಿಸಿಕೊಂಡಿದ್ದರಿಂದ ಹೇಳಿದೆ ಅಷ್ಟೆ.

ಶ್ರೀ ಪಿ.ಜಿ.ಆರ್ ಸಿಂಧ್ಯ :— ಮಾನ್ಯ ಅಧ್ಯಕ್ಷರೆ, ನಾನೇನೂ ಅದಕ್ಕೆ ಚಿನ್ನಬೆಳ್ಳಿ ಲೇಪನ ಮಾಡಿ ಹೇಳುವುದಕ್ಕೆ ತಯಾರಿಲ್ಲ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿರುವುದು ಕಡತಕ್ಕೆ ಹೋಗಿರುವುದರಿಂದ ನಾನು ಹೇಳಿರುವುದನ್ನು ಕಡತದಿಂದ ತೆಗೆದುಹಾಕಬೇಡಿ. ಮಾನ್ಯ ಖರ್ಗೆಯವರು ರಾಜ್ಯಪಾಲರು ಹಾಗೂ ಮುಖ್ಯಮಂತ್ರಿಗಳ ನಡುವೆ ಭಿನ್ನಾಭಿಪ್ರಾಯವಿಲ್ಲವೆಂದು ಹೇಳಿದ್ದಾರೆ ಅದು ಬಹಳ ಸಂತೋಷದ ವಿಚಾರ; ಇದೆ ಎಂದು ನಾವು ಹೇಳುತ್ತೇವೆ.

+ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ಮಾನ್ಯ ಅಧ್ಯಕ್ಷರೆ, ನನ್ನ ಪ್ರಾರಂಭಿಕ ಮಾತನ್ನು ರಾಜ್ಯಪಾಲರು ಹಾಗೂ ಸರ್ಕಾರದ ನಡುವೆ ಭಿನ್ನಾಭಿಪ್ರಾಯ ಬಂದಿರುವುದರಿಂದಲೇ ಸರ್ಕಾರ ಈ ಒಂದು ವಿಧೇಯಕವನ್ನು ತರುತ್ತಿದೆ ಎನ್ನುವುದರಿಂದಲೇ ಪ್ರಾರಂಭಿಸುತ್ತೇನೆ.

ಅಧ್ಯಕ್ಷರು :— ತಾವು ಹೇಳುವುದನ್ನು ಕೂಡ ಕಡತದಿಂದ ತೆಗೆದುಹಾಕಬೇಕಾಗುತ್ತದೆ ಅಷ್ಟೆ. ಮಾನ್ಯ ರಾಜ್ಯಪಾಲರ ಹೆಸರನ್ನು ಉಪಯೋಗಿಸಿದ ಮೇಲೆ ಅದನ್ನು ನಾವು ಕಡತದಿಂದ ತೆಗೆದು ಹಾಕಬೇಕಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರು ಎನ್ನುವುದು ಬೇಡವೆಂದ ಮೇಲೆ ಹಾಗಾದರೆ ಚಾನ್ಸಲರ್ ಎನ್ನುವ ಪದವನ್ನು ನಾನು ಉಪಯೋಗಿಸುತ್ತೇನೆ, ಅದಕ್ಕೆ ಅಭ್ಯಂತರವಿಲ್ಲ ತಾನೆ? ಇವರಿಬ್ಬರ ನಡುವೆ ಬಹಳ ಭಿನ್ನಾಭಿಪ್ರಾಯ ಬಂದಿದೆ, ಅದನ್ನು ಈ ರಾಜಕೀಯ ಮಾಡಲು ಉಪಯೋಗಿಸುವುದು ಸರ್ಕಾರಕ್ಕೆ ಗೌರವ, ಘನತೆ ತರುವಂತಹದ್ದಲ್ಲ. ಘನತೆವೆತ್ತ ರಾಜ್ಯಪಾಲರ ಬಗ್ಗೆ ಅವರ ಸಾರ್ವಭೌಮತೆಯ ಬಗ್ಗೆ, ಅವರ ಹಕ್ಕಿನ ಬಗ್ಗೆ ವಿಶೇಷವಾಗಿ ನಾನು ಇಲ್ಲಿ ಉಲ್ಲೇಖ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಸರ್ಕಾರ, ಗೌರವಾನ್ವಿತ ರಾಜ್ಯಪಾಲರು ನನ್ನ ಮಾತನ್ನು ಕೇಳಲಿಲ್ಲವೆಂದು, ಇಡೀ ರಾಜ್ಯಪಾಲರ ಸ್ಥಾನಮಾನಗಳಿಗೆ ಕುಂದು ತರುವಂತಹ ರೀತಿಯಲ್ಲಿ ನಡೆದುಕೊಳ್ಳುತ್ತಿರುವುದು ಅಕ್ಷಮ್ಯ ಅಪರಾಧ.

ಡಾ: ಜಿ. ಪರಮೇಶ್ವರ್ :— ತಾವು ಪದೇ ಪದೇ ಅವರಿಬ್ಬರಲ್ಲಿ ಭಿನ್ನಾಭಿಪ್ರಾಯವಿದ್ದ, ರಾಜ್ಯಪಾಲರು ಸರ್ಕಾರದ ಮಾತನ್ನು ಕೇಳಲಿಲ್ಲವೆಂದು ಹೇಳಿದಿರಿ, ನಾವು ಧಾರವಾಡ ಅಥವಾ ಮೈಸೂರು ವಿಶ್ವವಿದ್ಯಾನಿಲಯಕ್ಕಾಗಲೀ ಯಾವುದೇ ಶಿಫಾರಸ್ಸನ್ನು ಸರ್ಕಾರ ಮಾಡಲೇ ಇಲ್ಲ ಎಂದು ಮತ್ತೊಮ್ಮೆ ನಾನು ಸ್ಪಷ್ಟಪಡಿಸುತ್ತೇನೆ. ನಾವು ಶಿಫಾರಸ್ಸು ಮಾಡಿ ಆ ಪ್ರಸ್ತಾವನೆಯನ್ನೇ ಕಳುಹಿಸಲಿಲ್ಲ ಎಂದ ಮೇಲೆ ಇನ್ನು ಭಿನ್ನಾಭಿಪ್ರಾಯ ಹೇಗೆ ಬರುತ್ತದೆ? ಆದುದರಿಂದ ರಾಜ್ಯಪಾಲರು ಹಾಗೂ ಸರ್ಕಾರದ ನಡುವೆ ಯಾವುದೇ ಭಿನ್ನಾಭಿಪ್ರಾಯವಿಲ್ಲ; ನಾನು ಸಂಪೂರ್ಣವಾಗಿ ಇದನ್ನು ಅಲ್ಲಗಳೆಯುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ಡಾ: ಪರಮೇಶ್ವರ್‌ರವರು ನೇರವಾಗಿ ಮಾಡಲಿಲ್ಲ, ಸಮಿತಿ ಶಿಫಾರಸ್ಸು ಮಾಡಿತು ಅಷ್ಟೆ!

ಅಧ್ಯಕ್ಷರು :— ಸಮಿತಿ ಮಾಡಿತು ಎಂದಾಕ್ಷಣ, ಮಾನ್ಯ ಮುಖ್ಯಮಂತ್ರಿಗಳು ಮಾಡಿದರು ಎಂದು ಹೇಳುವುದಕ್ಕಾಗುವುದಿಲ್ಲ; How can you assume that the Chief Minister has recommended these names?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ಮಾನ್ಯ ಅಧ್ಯಕ್ಷರೇ, ಈ ವಿಧೇಯಕವನ್ನು ತರಲು ಸರ್ಕಾರ ಹಾಗೂ ರಾಜ್ಯಪಾಲರ ನಡುವೆ ಇರುವ ಭಿನ್ನಾಭಿಪ್ರಾಯವೇ ಕಾರಣ.

ಡಾ: ಜಿ. ಪರಮೇಶ್ವರ್ :— ತಾವು ಯಾವ ಆಧಾರದ ಮೇಲೆ ಹೇಳುತ್ತೀರಿ? ಸುಮ್ಮನೆ ಇಲ್ಲದ್ದನ್ನು ಸೃಷ್ಟಿ ಮಾಡಬೇಡಿ. ನಾವು ಪ್ಯಾನಲ್ ಕಳುಹಿಸಲಿಲ್ಲ, ಶಿಫಾರಸ್ಸು ಮಾಡಲಿಲ್ಲ, ಅವರಿಗೆ ಯಾವುದೇ ಹೆಸರು ಹೇಳಲಿಲ್ಲ; ಭಿನ್ನಾಭಿಪ್ರಾಯ ಬಂದಿದೆ ಎಂದು ಹೇಳುವಂತಹ ನಿಮ್ಮ ವಾದಕ್ಕೆ ಆಧಾರವೇನು? ಹಿನ್ನೆಲೆ ಏನು? ಏನಾದರೂ ಒಂದು ವಾದ ಮಂಡಿಸುವುದಕ್ಕೆ ಯಾವುದಾದರೂ ಹಿನ್ನೆಲೆ ಬೇಡವೆ?

ಶ್ರೀ ಡಿ.ವಿ. ಸದಾನಂದಗೌಡ :— ಇವರಿಗೆ ಸತ್ಯಸಂಗತಿಗಳನ್ನು ಹೇಳಿದರೆ ಈ ತುದಿಯಿಂದ ಆ ತುದಿಯವರೆಗೆ ಹೇಳಬೇಕು.

ಡಾ: ಜಿ ಪರಮೇಶ್ವರ :— ಆ ಸತ್ಯಸಂಗತಿಗಳನ್ನು ನೀವು ಪ್ರೂವ್ ಮಾಡಿ.

ಅಧ್ಯಕ್ಷರು :— ಅವರು ಹೆಸರುಗಳನ್ನೇ ಕಳುಹಿಸದಿರುವಾಗ ಇನ್ನು ಭಿನ್ನಾಭಿಪ್ರಾಯ ಹೇಗೆ ಬರಲು ಸಾಧ್ಯ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ಮಾನ್ಯ ಅಧ್ಯಕ್ಷರೆ, ನನ್ನ ವಿಷಯವೇನೆಂದರೆ, ಸರ್ಕಾರ ಹೇಳಿದ್ದನ್ನು ಘನತೆವೆತ್ತ ರಾಜ್ಯಪಾಲರು ಕೇಳಲಿಲ್ಲ, ರಾಜ್ಯಪಾಲರು ಹೇಳಿದ್ದು ಸರ್ಕಾರಕ್ಕೆ ಸರಿ ಬೀಳಲಿಲ್ಲವೆನ್ನುವ ಕಾರಣಕ್ಕೆ ಆ ಇನ್‌ಸ್ಟಿಟ್ಯೂಷನಲ್ ಪಾವಿತ್ರ್ಯತೆ ಏನಿದೆ ಅದನ್ನು ಹಾಳು ಮಾಡುವುದು ಬೇಡವೆಂದು ಹೇಳುತ್ತೇನೆ.

ಡಾ: ಜಿ. ಪರಮೇಶ್ವರ :— ತಾವು ಬೇಕಾದರೆ ಈ ವಿಧೇಯಕ ತಂದಿರುವುದು ಸರಿಯಿಲ್ಲವೆಂದು ಹೇಳಿ, ಆದರೆ ಯಾವುದೇ ಆಧಾರವಿಲ್ಲದೆ ಹಾಗೂ ಹಿನ್ನೆಲೆ ಇಲ್ಲದಿರುವುದನ್ನು ಸೃಷ್ಟಿ ಮಾಡಿ ಹೇಳುವುದನ್ನು ಬಿಟ್ಟು ಬೇರೆ ಹೇಳಿ. What is the basis for your argument?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ಮಾನ್ಯ ರಾಜ್ಯಪಾಲರು ಸಂವಿಧಾನಬದ್ಧವಾಗಿ ಪಡೆದ ಆ ಸ್ಥಾನ, ಗೌರವ, ಅದಕ್ಕಿರುವ ಪ್ರಾಮುಖ್ಯತೆಯನ್ನು ತಮ್ಮ ಸರ್ಕಾರ ಕಾಪಾಡಬೇಕು.

ಶ್ರೀ ಬಿ.ಆರ್. ನೀಲಕಂಠಪ್ಪ :— ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್,

ಶ್ರೀ ಎಸ್. ಸುರೇಶ್ ಕುಮಾರ್ :— ಯಾವ ಸೆಕ್ಷನ್ ಪ್ರಕಾರ ಎತ್ತುತ್ತಿದ್ದೀರಿ?

ಶ್ರೀ ಬಿ.ಆರ್. ನೀಲಕಂಠಪ್ಪ :— ಅದನ್ನು ಮಾನ್ಯ ಅಧ್ಯಕ್ಷರು ಕೇಳುತ್ತಾರೆ, ದಯವಿಟ್ಟು ನೀವು ಸುಮ್ಮನಿರಿ. ಮಾನ್ಯ ಅಧ್ಯಕ್ಷರೆ, ಇವತ್ತು ವಿರೋಧ ಪಕ್ಷದವರು ಸುಮಾರು ನೂರು ಸಾರಿ ರಾಜ್ಯದ ಮುಖ್ಯಮಂತ್ರಿಗಳು ಹಾಗೂ ರಾಜ್ಯಪಾಲರ ನಡುವೆ ಭಿನ್ನಾಭಿಪ್ರಾಯವಿದೆ ಎಂದು ಹೇಳಿದರು; ಇದನ್ನು ಅಲ್ಲಗಳೆದು ತಾವು ಹಲವಾರು ಸಾರಿ ತಮ್ಮ ರೂಲಿಂಗ್ ಅನ್ನು ಕೊಟ್ಟಿದ್ದೀರಿ. ಆದರೂ ಕೂಡ ವಿರೋಧ ಪಕ್ಷದವರು ಪುನಃ ಅದನ್ನೆ ಹೇಳುತ್ತಿದ್ದಾರೆ, ಅದನ್ನು ಹೇಳುವುದನ್ನು ಬಿಟ್ಟು ಈ ವಿಧೇಯಕದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವರಿಗೆ ಒಂದು ರೂಲಿಂಗ್ ಅನ್ನು ಕೊಡಬೇಕು.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಅಧ್ಯಕ್ಷರೆ, ಅದನ್ನು ಪಾಯಿಂಟ್ ಆಫ್ ಆರ್ಡರ್ ಎನ್ನುತ್ತೀರಾ? ಅಥವಾ ಪಾಯಿಂಟ್ ಆಫ್ ಡಿಸಾರ್ಡರ್ ಎನ್ನುತ್ತೀರಾ?

ಅಧ್ಯಕ್ಷರು :— ತಾವು ದಯವಿಟ್ಟು ಕುಳಿತುಕೊಳ್ಳಿ. ಅದು ಡಿಸ್-ಆರ್ಡರ್ರೋ ಇಲ್ಲವೋ ಎನ್ನುವುದನ್ನು ನಾನು ಹೇಳುತ್ತೇನೆ. ಅದು ನಿಮಗೇಕೆ? ಮಾನ್ಯ ನೀಲಕಂಠಪ್ಪನವರು ಎತ್ತಿರುವ ಪಾಯಿಂಟ್ ಆಫ್ ಆರ್ಡರನ್ನು ನಾನು ಎತ್ತಿ ಹಿಡಿಯುತ್ತೇನೆ. ರಾಜ್ಯಪಾಲರ ಹೆಸರನ್ನು ಭಾಷಣ ಮಾಡುವಾಗ ಅದರಲ್ಲಿ ತರಬಾರದು ಎಂದು ನಾನು ಮಾನ್ಯ ಸದಸ್ಯರುಗಳಲ್ಲಿ ವಿನಂತಿ ಮಾಡುತ್ತೇನೆ. I uphold the point of order raised by Mr. Neelakantappa.

ಶ್ರೀ ಎ. ರಾಮದಾಸ್ :— ಮಾನ್ಯ ಅಧ್ಯಕ್ಷರೆ, ಯಾವ ಸೆಕ್ಷನ್ನಿನ ಅಡಿಯಲ್ಲಿ ಅವರು ಪಾಯಿಂಟ್ ಆಫ್ ಆರ್ಡರ್ ತಂದರು? ತಾವು ಯಾವ ನಿಯಮಗಳ ಅಡಿಯಲ್ಲಿ ರೂಲಿಂಗ್ ಕೊಟ್ಟಿದ್ದೀರಿ ಎಂದು ದಯವಿಟ್ಟು ಹೇಳಿ.

ಅಧ್ಯಕ್ಷರು :— ಆಯಿತು, ಹೇಳುತ್ತೇನೆ. ಅದನ್ನು ಬರೆದು ಆಮೇಲೆ ಓದುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೇ, ತಮ್ಮ ಪೀಠದ ಮೇಲೆ ನಮಗೆ ಗೌರವವಿದೆ. ಆದರೆ ಆ ಪರ್ಟಿಕ್ಯುಲರ್ ಸೆಕ್ಷನ್ ಯಾವುದು ಎನ್ನುವುದು

ರೆಕಾರ್ಡಿಗೆ ಹೋಗದಿದ್ದರೆ, ಮುಂದೆ ಯಾವತ್ತಾದರೂ ಡಿಬೇಟ್ ಆದಾಗ ಯಾರಾದರೂ ಅದರ ಬಗ್ಗೆ ಹೇಳುತ್ತಾರೆ. ಆದ್ದರಿಂದ, ತಮ್ಮ ಈ ತೀರ್ಪಿಗೆ ಸಂಬಂಧಪಟ್ಟಂತೆ ದಯವಿಟ್ಟು ಯಾವುದಾದರೂ ಪರ್ಟಿಕ್ಯುಲರ್ ಸೆಕ್ಷನ್ ಅನ್ನು ಉಲ್ಲೇಖಿಸಿ ಮಾಡಿ.

ಅಧ್ಯಕ್ಷರು :— ಆಯಿತು, ಸೆಕ್ಷನ್ ಯಾವುದು ಎಂದು ಹೇಳುತ್ತೇನೆ.

ಶ್ರೀ ಕೆ.ವಿಶ್ವೇಶ್ವರ ಹೆಗಡೆ ಕಾಗೇರಿ :— ನೀವು ಈ ರೀತಿಯ ಒಂದು ನಿರ್ಣಯವನ್ನು ಕೊಟ್ಟರೆ ಬಹುಶಃ ನಮ್ಮ ಸದಸ್ಯರುಗಳಿಗೆ ತೊಂದರೆಯಾಗಬಹುದು. ಆದರೂ ಆ ಸ್ಥಾನಕ್ಕೆ ಮತ್ತು ನಿಮಗೆ ನಾನು ಗೌರವವನ್ನು ಕೊಟ್ಟು...

ಅಧ್ಯಕ್ಷರು :— ನಾನು ಮಾತ್ರವಲ್ಲ, ನನ್ನ ಹಿಂದಿನ ಅನೇಕ ಜನ ಅಧ್ಯಕ್ಷರುಗಳು ಕೂಡ ಸೇಮ್ ರೂಲಿಂಗ್ ಅನ್ನು ಕೊಟ್ಟಿದ್ದಾರೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ :— ಅದಕ್ಕಾಗಿಯೇ ನಾನು ಅದನ್ನು ಸಂಪೂರ್ಣವಾಗಿ ಗೌರವಿಸುತ್ತೇನೆ. ಕುಲಪತಿಗಳಿಗೂ ಮತ್ತು ಸರ್ಕಾರಕ್ಕೂ ಏನೊಂದು ಭಿನ್ನಾಭಿಪ್ರಾಯ ಇದೆ,...

ಅಧ್ಯಕ್ಷರು :— ಮಾನ್ಯ ಹೆಗಡೆಯವರೇ, ದಯವಿಟ್ಟು ವಿಷಯಕ್ಕೆ ಬನ್ನಿ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :— ಈ ಸರ್ಕಾರದವರು XXX ಬಳಸಿಕೊಳ್ಳಲು ಹೊರಟಿದ್ದಾರೆ.

(ಗೊಂದಲ)

ಅಧ್ಯಕ್ಷರು :— ರಬ್ಬರ್ ಸ್ಟ್ಯಾಂಪ್ ಎನ್ನುವುದನ್ನು ಎಕ್ಸ್‌ಪಂಜ್ ಮಾಡಿ.

ಶ್ರೀ ಬಿ.ಆರ್. ನೀಲಕಂಠಪ್ಪ :— XXX ಎಂದು ಕರೆದಿದ್ದಾರೆ. ಅದಕ್ಕಾಗಿ ಅವರು ಕ್ಷಮಾಪಣೆ ಕೇಳಬೇಕು.

ಅಧ್ಯಕ್ಷರು :— ಅದನ್ನು ಎಕ್ಸ್‌ಪಂಜ್ ಮಾಡಲು ತಿಳಿಸಿದ್ದೇನೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :— XXX ಮಾಡಲು ಹೊರಟಿದೆ.

ಅಧ್ಯಕ್ಷರು :— ಆ ಪದವನ್ನು ಎಕ್ಸ್‌ಪಂಜ್ ಮಾಡಿ. ಹೆಗಡೆಯವರೇ, ನೀವು ದಯವಿಟ್ಟು ಮುಂದುವರೆಸಿ.

ಶ್ರೀ ಬಿ.ಆರ್. ನೀಲಕಂಠಪ್ಪ :— ಅವರು XXX ಎಂದು ಹೇಳುತ್ತಿದ್ದಾರೆ. ಅವರು ಕ್ಷಮಾಪಣೆ ಕೇಳಬೇಕು.

XXX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಅಧ್ಯಕ್ಷರು :— ನೀಲಕಂಠಪ್ಪನವರೇ, ದಯವಿಟ್ಟು ತಾವು ಕುಳಿತುಕೊಳ್ಳಿ. ಒಂದು ಸಲ ಸರ್ಕಾರ ನಿರಾಕರಿಸಿದ ಮೇಲೆ, ಅದರಲ್ಲಿ ಯಾವುದನ್ನೂ ಅವರು ನೇಮಿಸಿಯೇ ಕಳುಹಿಸಿಲ್ಲ ಎಂದು ಹೇಳಿದ ಮೇಲೆ ಮತ್ತೆ ಏಕೆ ಅದನ್ನು ಒತ್ತಿ ಒತ್ತಿ ಹೇಳುತ್ತೀರಿ? They have denied it. I cannot understand the Members' attitude.

(ಗೊಂದಲ)

MR. SPEAKER :— Mr. Hegde, are you going to continue or shall I call the next hon.member?.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :— ನಾನು ಇನ್ನೂ ಮಾತನಾಡಲು ಶುರುವೇ ಮಾಡಿಲ್ಲ.

MR SPEAKER :— You are not continuing your speech.

ಶ್ರೀ ಬಿ.ಆರ್. ನೀಲಕಂಠಪ್ಪ :— ದಯವಿಟ್ಟು ಆ ಪದವನ್ನು ವಾಪಸ್ಸು ತೆಗೆದುಕೊಳ್ಳಲು ಅವರಿಗೆ ಹೇಳಿ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :— ಮೂಲಭೂತವಾಗಿ ಈ ವಿಧೇಯಕವನ್ನು ತರಲು ಕಾರಣ ಇದೆ. ಸರ್ಕಾರಕ್ಕೆ ಒಂದು ನೈತಿಕತೆಯಾದರೂ ಬೇಕಾಗುತ್ತದೆ.

(Interruptions)

MR SPEAKER :— You are referring again either this way or that way. Whatever Mr. Vishveshwara Hegde has said, the entire thing is expunged. ಪಾಯಿಂಟ್ ಆಫ್ ಆರ್ಡರ್ ಮೇಲೆ ರೂಲಿಂಗ್ ಕೊಟ್ಟಿದ್ದು ಯಾವ ಸೆಕ್ಷನ್ ಮೂಲಕ ಎಂದು ಕೇಳಿದಿರಿ. ಅದನ್ನು ಹೇಳುತ್ತೇನೆ. Rule 327

"A Member while speaking shall not reflect upon the conduct of person in high authority unless the discussion is based on a substantive motion drawn in proper terms;

Explanation: The words 'person in high authority mean persons whose conduct can only be discussed on a substantive motion drawn in proper terms under the constitution or such other person whose conduct in the opinion of the Speaker should be discussed on a substantive motion drawn up in terms to be approved by him.

> A member while speaking shall not use the Governor's name for the purpose of influencing the debates'.

That is the section. I do not want you to discuss this subject unnecessarily. You please continue by speaking section by section.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :— ಮಾನ್ಯ ಅಧ್ಯಕ್ಷರೆ, ನಾನು ಈ ವಿಷಯವನ್ನು ಮುಂದುವರೆಸಲು ಬಯಸುವುದಿಲ್ಲ. ಇದರ ಬಗ್ಗೆ ಸಾರ್ವಜನಿಕವಾಗಿ ಚರ್ಚೆಯಾಗಲಿ. ನಾವು ಕುಲಪತಿ ಸ್ಥಾನದ ಬಗ್ಗೆ ಮಾತನಾಡಿರುವುದು ಮತ್ತು ಸರ್ಕಾರದ ನಿಲುವು ಎಲ್ಲವೂ ಸಾರ್ವಜನಿಕವಾಗಿ ಚರ್ಚೆಯಾಗಿ ಒಂದು ಅಭಿಪ್ರಾಯ ರೂಪಿತವಾಗಲಿ. ಮುಂದೊಂದು ದಿನ ಸರ್ಕಾರಕ್ಕೆ ತಾವು ಮಾಡಿದ ತಪ್ಪಿನ ಅರಿವಾಗಲಿ, ಜ್ಞಾನೋದಯವಾಗಲಿ, ಈಗ ಅವರು ಮಾಡಿರುವ ತಪ್ಪು, ಸಾರ್ವಜನಿಕವಾಗಿ ಚರ್ಚೆಯಾಗಿ ಮುಂದೆ ನಿಮ್ಮ ಮೇಲೆ ಯಾವ ದುಷ್ಪರಿಣಾಮವಾಗುತ್ತದೆ ಎನ್ನುವುದನ್ನು ನಾವು ಈಗಾಗಲೇ ಊಹಿಸಿದ್ದೇವೆ. ಈ ದುಷ್ಪರಿಣಾಮದಿಂದ ಮುಂದಾದರೂ ಅವರು ಎಚ್ಚೆತ್ತುಕೊಳ್ಳಲಿ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ರಾಜಕೀಯದಿಂದ ಬೇರೆಯಾಗಿ ನಿಂತು ಯೋಚನೆ ಮಾಡಬೇಕಾದ ಕೆಲವು ಕ್ಷೇತ್ರಗಳಿವೆ ಎಂದು ಸಮಾಜದಲ್ಲಿ ಹಿರಿಯರು ಮಾತನಾಡುತ್ತಾರೆ. ಮಾನ್ಯ ಚಂದ್ರಶೇಖರ್‌ರವರು ಮತ್ತು ಮಾನ್ಯ ಪರಮೇಶ್ವರ್‌ರವರು ಇದಕ್ಕೆ ಒಪ್ಪಿಕೊಳ್ಳುತ್ತಾರೆ ಎಂದು ಕಾಣುತ್ತದೆ. ಕಲೆ, ಸಾಹಿತ್ಯ, ಶಿಕ್ಷಣ, ಕ್ರೀಡೆ ಇತ್ಯಾದಿ ಅನೇಕ ಕ್ಷೇತ್ರಗಳಲ್ಲಿ ನಾವು ರಾಜಕೀಯವಾಗಿ ಹಸ್ತಕ್ಷೇಪವನ್ನು ಮಾಡಿದರೆ ಭವಿಷ್ಯದಲ್ಲಿ ಅದು ಒಳ್ಳೆಯ ಪರಿಣಾಮವನ್ನು ಕೊಡುವುದಿಲ್ಲ. ಆದರಿಂದ ಇವತ್ತು ಆಡಳಿತದಲ್ಲಿರುವವರಿಗೆ ತಾತ್ಕಾಲಿಕವಾದ ಯಾವುದೋ ಒಂದು ಸಂತೋಷವಾಗಬಹುದು. ಅದನ್ನು ವಿಘ್ನ-ಸಂತೋಷ ಎಂದು ನಾನು ಕರೆಯುತ್ತೇನೆ. ಆದರೆ ಯೋಚನೆ ಮಾಡಿದರೆ ಭವಿಷ್ಯದಲ್ಲಿ ಅದು ದುಷ್ಪರಿಣಾಮವಾಗುತ್ತದೆ. ಸಾಹಿತ್ಯದಲ್ಲಿ ರಾಜಕಾರಣ ಮಾಡುವುದು, ಕ್ರೀಡೆಯಲ್ಲಿ ರಾಜಕಾರಣ ಮಾಡುವುದು, ಶಿಕ್ಷಣದಲ್ಲಿ ರಾಜಕಾರಣ ಮಾಡುವುದು, ಸಹಕಾರಿ ಕ್ಷೇತ್ರದಲ್ಲಿ ರಾಜಕಾರಣ ಮಾಡುವುದು ಆಗುತ್ತದೆ, ಇದು ಆಗಬಾರದು. ಅಂದರೆ ರಾಜಕೀಯ ಕ್ಷೇತ್ರದಲ್ಲಿರುವವರು ತಮ್ಮದೇ ಆದಂಥ ಒಂದು ಇತಿಮಿತಿಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ನಮಗೆಲ್ಲಾ ಗೊತ್ತಿದೆ, ಸ್ವಾತಂತ್ರ್ಯ ಬಂದು 53 ವರ್ಷಗಳಾದರೂ ನಮ್ಮ ಘನ ಸರ್ಕಾರಗಳಿಂದ ಹಳ್ಳಿಗಳಿಗೆ ಕುಡಿಯುವ ನೀರು ಕೊಡಲು ಆಗಿಲ್ಲ. ಬೇಡವೆಂದರೂ ಕುಡಿಯುವುದಕ್ಕೆ ಹೆಂಡ ಕೊಡುತ್ತೇವೆ. ಬೇಕು ಬೇಕು ಎಂದರೂ ಕುಡಿಯಲು ನೀರು ಕೊಡಲು ಆಗದೇ ಇರುವಂಥ ಸ್ಥಿತಿಯಲ್ಲಿ ನಾವಿದ್ದೇವೆ. ಈ ವರ್ಷದ ನಮ್ಮ ರಾಜ್ಯ ಸರ್ಕಾರದ ಆದಾಯ 20 ಸಾವಿರ ಕೋಟಿ ರೂಪಾಯಿಗಳು. ಸಹಕಾರಿ ಕ್ಷೇತ್ರಗಳಲ್ಲಿರುವವರು ವಾರ್ಷಿಕವಾಗಿ 15 ಸಾವಿರ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಅನುಕೂಲವನ್ನು ಜನರಿಗೆ ಮಾಡಿಕೊಡುತ್ತಿದ್ದಾರೆ.

ಅಂದರೆ, ಕೆಲವು ಕ್ಷೇತ್ರಗಳು ರಾಜಕೀಯ ದಿಂದ ನಿಯಂತ್ರಿತವಾಗಬೇಕು ಎಂದು ನಾವು ಬಯಸಬಾರದು. ನಾವು ಅದಕ್ಕೆ ಒಂದು ನಿರ್ದೇಶನವನ್ನು ಕೊಡುವಂಥ ಸ್ಥಾನದಲ್ಲಿರಬೇಕು. ನಮ್ಮಿಂದಲೇ ಈ ನಿಯಂತ್ರಣ ಆಗಬೇಕು. ಸರ್ಕಾರದವರು ಎಂದರೆ ಮೇಲಿನಿಂದ ಇಳಿದು ಬಂದಂಥವರು ಎನ್ನುವ ಭಾವನೆಯಲ್ಲಿ ಅಹಂಕಾರದಿಂದ, ದರ್ಪದಲ್ಲಿ ಅಧಿಕಾರ ದುರುಪಯೋಗ ಮಾಡಿಕೊಳ್ಳಲು ಬಯಸುವಂಥದ್ದು ತಪ್ಪು, ಅದು ಅಕ್ಷಮ್ಯ ಅಪರಾಧವಾಗುತ್ತದೆ. ಇದನ್ನು ನಾವು ಕಳೆದ 50 ವರ್ಷಗಳಿಂದಲೂ ನೋಡುತ್ತಿದ್ದೇವೆ. ರಾಜಕೀಯ ಕ್ಷೇತ್ರಗಳಲ್ಲಿರುವಂಥವರು ತಮ್ಮ ಇತಿಮಿತಿಗಳನ್ನು ಅರಿತುಕೊಳ್ಳದೇ ಉಳಿದ ಎಲ್ಲ ಕ್ಷೇತ್ರಗಳಲ್ಲೂ ತಮ್ಮ ಹಸ್ತಕ್ಷೇಪವನ್ನು ಮಾಡಿ ಅಲ್ಲಿ ತಮ್ಮ ರಾಜಕೀಯ ಬೇಳೆಯನ್ನು ಬೇಯಿಸಿಕೊಳ್ಳಲು ಹೋಗಿ ಇವತ್ತು ಸಮಾಜದಲ್ಲಿ ಕಲುಷಿತವಾದಂಥ, ವಿಷಮವರ್ತುಲದ ವಾತಾವರಣ ನಿರ್ಮಾಣ ಆಗಿರುವಂಥ ಸಂದರ್ಭವನ್ನು, ಅಂಥ ದುಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಇನ್ನು ಶಿಕ್ಷಣ ಕ್ಷೇತ್ರದ ಪಾವಿತ್ರ್ಯತೆ ಬಗ್ಗೆ ನಾವು ಮಾತನಾಡಬೇಕಾಗಿಲ್ಲ. ಎಲ್ಲರಿಗೂ ಅದರ ಮಹತ್ವದ ಬಗ್ಗೆ ಗೊತ್ತಿದೆ. ಆದರೂ ಇದರ ಪಾವಿತ್ರ್ಯತೆ ದಿನದಿಂದ ದಿನಕ್ಕೆ ಕುಸಿಯುತ್ತಿರುವಂಥ ಕಳವಳಕಾರಿ, ಗಂಭೀರವಾದಂಥ ವಿಷಯ ನಮ್ಮೆಲ್ಲರ ಕಣ್ಣಮುಂದೆ ಇದ್ದಂಥ ಈ ಸಂದರ್ಭದಲ್ಲಿಯೂ ನಾವು ಇದನ್ನು ಇನ್ನಷ್ಟು ಅಧಃಪತನಕ್ಕೆ ಈ ರೀತಿಯ ಮಸೂದೆಯಿಂದ ದೂಡುತ್ತಿರುವಂಥದ್ದು ಅಕ್ಷಮ್ಯ ಅಪರಾಧವಾಗುತ್ತದೆ. ಸಮಾಜದಲ್ಲಿ ಶಿಕ್ಷಣ ಮತ್ತು ಇತರ ಎಲ್ಲ ಮೌಲ್ಯಗಳು ಹೇಗೆ ಕುಸಿಯುತ್ತವೆ? ತನ್ನ ಪಾವಿತ್ರ್ಯತೆಯನ್ನು ಹೇಗೆ ಕಳೆದುಕೊಳ್ಳುತ್ತಿವೆ ಎನ್ನುವುದು ನಮ್ಮೆಲ್ಲರ ಗಮನದಲ್ಲಿ ಇದೆ. ಇವುಗಳು ಹೀಗೆ ಕೆಳಗೆ ಹೋಗುತ್ತಿರುವ ಸಂದರ್ಭದಲ್ಲಿ ಕಾಂಗ್ರೆಸ್ ಸರ್ಕಾರದವರು ಅದನ್ನು ಇನ್ನೂ ಕೆಳಕ್ಕೆ ದೂಡುತ್ತಿದ್ದಾರೆ. ಇದನ್ನು ನೋಡಿ ನಾವು ಸುಮ್ಮನಿರಲು ಆಗುತ್ತದೆಯೇ? ಅದನ್ನು ತಡೆಯಲು ಬೇಕಾಗಿರತಕ್ಕಂಥ ಪ್ರಯತ್ನವನ್ನು ನಾವು ಮಾಡಬೇಕು. ಸಮಾಜದಲ್ಲಿ ಆ ರೀತಿಯ ಆದರ್ಶಗಳನ್ನು ನಿರ್ಮಾಣ ಮಾಡಲು ಮತ್ತು ಸಮಾಜದಲ್ಲಿ ಒಂದು ವಿಶ್ವಾಸವನ್ನು ತುಂಬುವುದಕ್ಕೆ ಬೇಕಾಗಿರುವಂಥ ಪ್ರಯತ್ನವನ್ನು ಮಾಡುವುದನ್ನು ಬಿಟ್ಟು, ಅಧಃಪತನದ ಕಡೆ ಹೋಗುತ್ತಿರುವಂಥ ಸಂಗತಿಯನ್ನು ಇನ್ನಷ್ಟು ಹೆಚ್ಚು ವೇಗವಾಗಿ ಮಾಡುವಂಥ ಮಸೂದೆ ಇದಾಗಿದೆ. ಹಾಗಾಗಿ ಇದನ್ನು ಜಂಟಿ ಸದನ ಸಮಿತಿಗೆ ಕಳುಹಿಸಬೇಕಾಗಿರುವಂಥದ್ದು ಅತ್ಯಂತ ಮಹತ್ವದ್ದಾಗಿದೆ. ಇದನ್ನು ರಾಜಕಾರಣಗೊಳಿಸುವಂಥ ಪ್ರಯತ್ನ ಸರ್ಕಾರದಿಂದ ಆಗಬಾರದು ಎನ್ನುವ ಆಗ್ರಹವನ್ನು ಮಾಡಲು ನಾನು ಬಯಸುತ್ತಿದ್ದೇನೆ. ಇದನ್ನು ಜಂಟಿ ಸದನ ಸಮಿತಿಗೆ ಏಕೆ ಕಳುಹಿಸಬೇಕು ಎಂದರೆ....

ಅಧ್ಯಕ್ಷರು :— ತಾವು ಈ ರೀತಿ ಮಾತನಾಡಿದರೆ ನಾವು ಅಡಚಣೆ ಮಾಡುತ್ತೇವೆಯೇ?

ಶ್ರೀ ಕೆ. ವಿಶ್ವೇಶ್ವರ ಹೆಗಡೆ :— ಬೇಸಿಕ್ ಪ್ರಿನ್ಸಿಪಲ್ಸ್ ಏನು ಅಧ್ಯಕ್ಷರೇ?

ಅಧ್ಯಕ್ಷರು :— ಬೇಸಿಕ್ ಪ್ರಿನ್ಸಿಪಲ್ ಮೇಲೆಯೇ ನೀವು ಮಾತನಾಡುತ್ತಿದ್ದೀರಿ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :— ಬರೀ ಸೆಕ್ಷನ್ ಓದುವುದು ಬೇಸಿಕ್ ಪ್ರಿನ್ಸಿಪಲ್ ಆಗುತ್ತದೆಯೇ?

ಅಧ್ಯಕ್ಷರು :— ನೀವು ಚೆನ್ನಾಗಿ ಮಾತನಾಡುತ್ತಿದ್ದೀರಿ ಎಂದು ಹೇಳುತ್ತಿದ್ದೇನೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :— ಧನ್ಯವಾದಗಳು. ಆದರೆ ನೀವು ಯಾವಾಗಲೂ ಸ್ವಲ್ಪ ಹೆಚ್ಚು ಆ ಕಡೆ ಇರುತ್ತೀರಿ. ಹಾಗಾಗಿ ಹೇಳಿದೆ.

ಶ್ರೀ ಎಂ. ಶಿವಣ್ಣ :— ಚೆನ್ನಾಗಿ ಮಾತನಾಡುತ್ತೀರಿ ಎಂದರೂ ಕೋಪ ಮಾಡಿಕೊಳ್ಳುತ್ತೀರಿ, ಚೆನ್ನಾಗಿ ಮಾತನಾಡುವುದಿಲ್ಲ ಎಂದರೂ ಕೋಪ ಮಾಡಿಕೊಳ್ಳುತ್ತೀರಿ.

ಅಧ್ಯಕ್ಷರು :— ನೀವು ಈ ರೀತಿ ಮಾತನಾಡಿದರೆ ನಾನು ಯಾವತ್ತೂ ಅಡಚಣೆ ಮಾಡುವುದಿಲ್ಲ.

ಶ್ರೀ ಕೆ.ಬಿ. ಕೋಳಿವಾಡ್ :— ಮಾನ್ಯ ಅಧ್ಯಕ್ಷರೇ, ಒಂದು ಸ್ಟ್ರಾಂಗ್ ಅಬ್ಜೆಕ್ಷನ್. ಅವರು ಮಾತನಾಡುವಾಗ, ನೀವು ಯಾವಾಗಲೂ ಈ ಕಡೆ ಇರುತ್ತೀರಿ ಎನ್ನುವ ರಿಮಾರ್ಕ್ಸ್ ಮಾಡಿದ್ದಾರೆ. ಅದನ್ನು ಕಡತದಿಂದ ತೆಗೆದು ಹಾಕಬೇಕು.

ಅಧ್ಯಕ್ಷರು :— ಆಯಿತು, ರಿಮೂವ್ ಮಾಡೋಣ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :— ಇದನ್ನು ಜಂಟಿ ಸದನ ಸಮಿತಿಗೆ ಏಕೆ ಕಳುಹಿಸಬೇಕು ಎಂದು ನಾನು ಹೇಳುತ್ತೇನೆ ಎಂದರೆ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ ನಾನು ವಿದ್ಯಾರ್ಥಿ ದೆಸೆಯಿಂದಲೂ ಸಾಕಷ್ಟು ಕೆಲಸ

12.30 ಪಿ.ಎಂ.

ಮಾಡಿ ಇವತ್ತು ಈ ಸ್ಥಾನಕ್ಕೆ ಬಂದಿದ್ದೇನೆ. ಶಿಕ್ಷಣ ಕ್ಷೇತ್ರದಲ್ಲೇನು ನಡೆಯುತ್ತದೆಂಬುದನ್ನು ನಾನು ನೋಡಿದ್ದೇನೆ. ಸ್ವಾತಂತ್ರ್ಯ ಬಂದ ನಂತರ, ಶಿಕ್ಷಣ ಕ್ಷೇತ್ರದಲ್ಲಿ ಎಷ್ಟು ಸಮಿತಿಗಳಾಯಿತೆಂಬುದರ ಬಗ್ಗೆ ಡಾ: ಪರಮೇಶ್ವರ್‌ರವರು ಉತ್ತರ ನೀಡುವಾಗ ತಿಳಿಸಬೇಕು. ಶ್ರೀ ನವನೀತರಾವ್ ಸಮಿತಿ ವರದಿ ಬಗ್ಗೆ ನಾವು ಸಾಕಷ್ಟು ಕೇಳಿದ್ದೇವೆ, ಓದಿದ್ದೇವೆ. ಚರ್ಚಿಸಿದ್ದೇವೆ. ಅದೇ ರೀತಿ ಶ್ರೀ ರಾಜಾರಾಮಣ್ಣ ಸಮಿತಿ ಬಗ್ಗೆ ಕೇಳಿದ್ದೇವೆ. ಎಷ್ಟು ಸಮಿತಿಗಳಾಯಿತೆಂಬುದ[illegible] ನೋಡಿ ಹೇಳಿ, ಆ ಸಮಿತಿಗಳ ವರದಿಗಳಲ್ಲಿರುವ ಒಳ್ಳೆಯ ಅಂಶಗಳನ್ನು ಈ ಮಸೂ[illegible]ಯಲ್ಲಿ ಸರ್ಕಾರ ಏನೇನು ತೆಗೆದುಕೊಂಡಿದೆ ಎನ್ನುವುದಕ್ಕೇ ಒಂದು ಸಮಿತಿ ರಚಿಸಬೇಕು. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಅದರ ಬಗ್ಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಹಿರಿಯ ಸದಸ್ಯರಾದ ಮಾನ್ಯ ಸಿಂಧ್ಯರವರು, ಮುಂದೆ ಬರುವ ಸಂಪುಟ ವಿಸ್ತರಣೆಯ ಸಂದರ್ಭದಲ್ಲಿ ಅದಕ್ಕೇ ಒಂದು ಪೋರ್ಟ್‌ಪೋಲಿಯೋ ಮಾಡುವ

ಅಗತ್ಯವಿದೆ ಎನ್ನುತ್ತಿದ್ದಾರೆ. ಶಿಕ್ಷಣ ಕ್ಷೇತ್ರದ ಪರಿವರ್ತನೆಗೆ ಇಷ್ಟು ಸಮಿತಿಗಳು ರಚನೆಯಾಗಿ, ಎಲ್ಲ ಸಮಿತಿಗಳ ವರದಿಗಳಲ್ಲಿರುವ ಒಳ್ಳೆಯ ಅಂಶಗಳನ್ನೂ ಸರ್ಕಾರ ತೆಗೆದುಕೊಳ್ಳಲಿಲ್ಲ. ಸರ್ಕಾರ ಮೇಲ್ನೋಟದ ಬದಲಾವಣೆಗೆ ಮಾತ್ರ ಮುಂದಾಯಿತು. ಏನೆಂದರೆ, ದೀಪಾವಳಿಗೆ ನಾಲ್ಕು ದಿನ ರಜೆ ಹೆಚ್ಚಾಯಿತು, ಅದನ್ನು ತೆಗೆಯಿರಿ, ಅದನ್ನು ಕಳೆದು ಕ್ರಿಸ್‌ಮಸ್‌ಗೆ ನಾಲ್ಕು ದಿನ ಹೆಚ್ಚು ಮಾಡಿ ಎಂದಾಯಿತು. ಈ ಸೂಪರ್‌ಫಿಷಿಯಲ್ ಛೇಂಜ್ ಆಗಿರುವುದರಿಂದ, ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಗಣ್ಯರು, ಪ್ರಮುಖರು ಬದಲಾವಣೆಗೆ ಕೊಟ್ಟಿರುವ ಯೋಗ್ಯವಾದ ವರದಿಗಳು ವಿಧಾನಸೌಧದ ಯಾವುದೋ ಕೊಠಡಿಯಲ್ಲಿ ದೂಳು ತಿನ್ನುತ್ತಿವೆ. ಆದುದರಿಂದ, ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಒಪ್ಪಿಸಬೇಕು. ಶ್ರೀ ನವನೀತರಾವ್ ಕಮಿಟಿಯನ್ನು ಉನ್ನತ ಶಿಕ್ಷಣ ಸಚಿವರು ಉಲ್ಲೇಖಿಸುತ್ತಾರೆ. ಉಳಿದೆಲ್ಲಾ ಸಮಿತಿಗಳೂ ಇವೆ. ಅವುಗಳು ಏನೇನು ಶಿಫಾರಸ್ಸುಗಳನ್ನು ಮಾಡಿವೆ? ಅವುಗಳಲ್ಲಿ ಯಾವ್ಯಾವ ಶಿಫಾರಸ್ಸುಗಳನ್ನು ಈ ಮಸೂದೆಯಲ್ಲಿ ಅಳವಡಿಸಿದ್ದೀರಿ ಎನ್ನುವುದನ್ನು ನೋಡಬೇಕಾಗಿದೆ. ಹಾಗಾಗಿ, ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಒಪ್ಪಿಸಬೇಕು. ನಾನು ಮೊನ್ನೆಯಿಂದ ಈ ಮಸೂದೆಯನ್ನು ನೋಡುತ್ತಿದ್ದೇನೆ. ಇದು ಸಂಪೂರ್ಣವಾಗಿ ಮಸೂದೆಗೆ ತಂದ ತಿದ್ದುಪಡಿಯಾಗಿದ್ದು, 85 ಪುಟಗಳಿವೆ. ಡಾ: ಜಿ. ಪರಮೇಶ್ವರ್‌ರವರು, ಈ ಬಿಲ್ ಅನ್ನು ಹೇಗೆ ಮಂಡಿಸಬೇಕು ಮತ್ತು ಅಂಗೀಕರಿಸಬೇಕೆಂದು ಯೋಚಿಸುತ್ತಿದ್ದಾರೆಂದರೆ, ಪರೀಕ್ಷೆಯಲ್ಲಿ ಕಾಪಿ ಹೊಡೆದು, ಇನ್‌ಫ್ಲ್ಯುಯೆನ್ಸ್ ಮಾಡಿಕೊಂಡು, ವ್ಯಾಲ್ಯುಯೇಷನ್ ಮಾಡುವವರನ್ನು ಬುಕ್ ಮಾಡಿಕೊಂಡು ಅಥವಾ ಮಾರ್ಕ್ಸ್‌ಕಾರ್ಡ್ ಕೊಡುವವರನ್ನು ಬುಕ್ ಮಾಡಿಕೊಂಡು ಪಾಸ್ ಮಾಡುತ್ತಾರಲ್ಲಾ, ಆ ರೀತಿ ತರಾತುರಿಯಲ್ಲಿ ಈ ಬಿಲ್ ಅನ್ನು ಪಾಸ್ ಮಾಡಲು ಹೊರಟಹಾಗೆ ಕಾಣುತ್ತಿದೆ. ನಿಜವಾಗಿ ಸಮಗ್ರವಾದ ತಿದ್ದುಪಡಿಯನ್ನು ತಂದಿದ್ದಾರೆ. ಈ ತಿದ್ದುಪಡಿ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕಾಗಿತ್ತು. ಶಿಕ್ಷಣ ಕ್ಷೇತ್ರದ ತಜ್ಞರ ಜೊತೆ ಚರ್ಚೆ ಮಾಡಬೇಕಾಗಿತ್ತು. ಅಂಕಿ-ಸಂಖ್ಯೆಗಳನ್ನು ಅವರು ಹೇಳುತ್ತಾರೆ. ಆದರೆ, ಈ ಬಿಲ್ ಬಿಟ್ಟು ಚರ್ಚೆ ಮಾಡಬೇಕಾಗಿತ್ತು. ಹಾಗೆ ಮಾಡದೆ, ಚರ್ಚೆಗೆ ಅವಕಾಶ ಕೊಡದೆ, ಅದನ್ನು ಇಲ್ಲಿ ಪಾಸ್ ಮಾಡಲು ಹೋಗುವುದು ಒಳ್ಳೆಯದಲ್ಲ. ನನಗೆ ಶಿಕ್ಷಣ ಸಚಿವರ ಬಗ್ಗೆ ಅಪಾರಗೌರವಿದೆ. ಅವರ ತಂದೆ ಶಿಕ್ಷಣ ಕ್ಷೇತ್ರದ ಭೀಷ್ಮರು.

ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :— ನಾನು ಕಾಪಿ ಹೊಡೆದು ಪಾಸ್ ಮಾಡಿದೆನೆಂದು ಹೇಳುತ್ತಿದ್ದೀರಾ? ನಿಮ್ಮದು ಏನು ಸಮಾಚಾರ?

ಶ್ರೀ ಎ. ರಾಮದಾಸ್ :— ನೀವು 1976ನೇ ಇಸವಿಯ ಆಕ್ಟ್ ಅನ್ನು ಪೂರ್ತಿ ಸ್ಕ್ರ್ಯಾಪ್ ಮಾಡಿ ಹೊಸದಾಗಿ ಮಸೂದೆಯನ್ನು ತರುತ್ತಿದ್ದೀರಿ, ಅದು 85 ಪುಟಗಳಿಂದ ಕೂಡಿದ್ದು, ಮಸೂದೆ ಮಹತ್ವದ್ದಾಗಿದೆ. ಆದರೆ, ಪರೀಕ್ಷೆ ಸಮಯದಲ್ಲಿ ಪುಸ್ತಕ ಕೊಟ್ಟರೆ, ಹುಡುಗರು ಏನು ಮಾಡುತ್ತಾರೆಯೋ, ಆ ತರಹವಾಗಿದೆ ಎಂದು ಹೇಳುತ್ತಿದ್ದಾರೆ.

ಡಾ: ಜಿ. ಪರಮೇಶ್ವರ್ :— ಮಾನ್ಯ ಅಧ್ಯಕ್ಷರೆ, ನನ್ನನ್ನು ಮಾನ್ಯ ಮುಖ್ಯಮಂತ್ರಿಗಳು ತುರ್ತಾಗಿ ಬರಹೇಳಿದ್ದು, ನಾನು ಎರಡು ನಿಮಿಷ ಹೋಗಿ ಬರುತ್ತೇನೆ. ಪ್ರೊ: ಬಿ.ಕೆ. ಚಂದ್ರಶೇಖರ್‌ರವರು ಚರ್ಚೆಯ ವಿಷಯವನ್ನು ನೋಟ್ ಮಾಡಿಕೊಳ್ಳುತ್ತಾರೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :— ಈ ಮಸೂದೆಯನ್ನು ಸಾರ್ವಜನಿಕವಾಗಿ ಶಿಕ್ಷಣ ಕ್ಷೇತ್ರದ ತಜ್ಞರ ಮಧ್ಯೆ, ವಿವಿಧ ಸಂಘಟನೆಗಳ ಮಧ್ಯೆ, ವಿದ್ಯಾರ್ಥಿ ಸಂಘಟನೆಗಳ ಮಧ್ಯೆ, ಈ ಕ್ಷೇತ್ರದಲ್ಲಿ ಕೆಲಸ ಮಾಡುವವರ ಜೊತೆ ಚರ್ಚಿಸಿದ ನಂತರ, ಅವರ ಅಭಿಪ್ರಾಯವನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ತೆಗೆದುಕೊಂಡು, ಸಮಗ್ರವಾಗಿ ಚಿಂತಿಸಿ, ಆದರ್ಶ ಭವಿಷ್ಯ, ಆದರ್ಶ ಜನಾಂಗವನ್ನು ರೂಪಿಸುವ ದೃಷ್ಟಿಯಿಂದ, ಆ ಮಹತ್ತರವಾದ ಹೊಣೆಗಾರಿಕೆ ನಮ್ಮ ಮೇಲಿದೆ, ಈ ಬಿಲ್‌ನಲ್ಲಿದೆಯೆನ್ನುವ ಜವಾಬ್ದಾರಿಯನ್ನು ಅರಿತು ನಾವು ಈ ಬಿಲ್ ಅನ್ನು ಪಾಸ್ ಮಾಡಿಕೊಡಬೇಕಾಗುತ್ತದೆ. ಆ ದಿಕ್ಕಿನಲ್ಲಿ ಇದು ಸಮಗ್ರವಾಗಿ ಚರ್ಚೆಯಾಗಲಿ ಎಂದು ಹೇಳುತ್ತಿದ್ದೇನೆ. 2-3 ಸಣ್ಣಪುಟ್ಟ ಸಂಗತಿಗಳನ್ನು ಇದರ ಜೊತೆಗೆ ಹೇಳಬಯಸುತ್ತೇನೆ. ನಮ್ಮ ಉನ್ನತ ಶಿಕ್ಷಣ ಸಚಿವರ ಸ್ಥಿತಿ ಬಹಳ ಶೋಚನೀಯವಾಗಿದೆ. ವೈಯಕ್ತಿಕವಾಗಿ ಅವರು, ಅವರ ತಂದೆಯವರು ಈ ಕ್ಷೇತ್ರದಲ್ಲಿ ಕೆಲಸ ಮಾಡಿರುವವರು. ಅವರ ಬಗ್ಗೆ ನನಗೆ ಗೌರವವಿದೆ. ಶಿಕ್ಷಣ ಸಚಿವರಾಗಿ ಅವರ ಸ್ಥಿತಿ ನೋಡಿದರೆ, ಅವರ ಸ್ಥಿತಿ ಯಾರಿಗೂ ಬೇಡ, ಮುಂದೆ ಯಾರೂ ಉನ್ನತ ಶಿಕ್ಷಣ ಸಚಿವರಾಗಬಾರದು ಅಷ್ಟು ದುಸ್ಥಿತಿ ಅವರದಾಗಿದೆ. ನಾನು ಅದಕ್ಕೊಂದು ಉದಾಹರಣೆ ಹೇಳುತ್ತೇನೆ. ಕಾಲೇಜು ಬಿಲ್ಡಿಂಗ್‌ಗೆಂದು ಕಳೆದ ವರ್ಷದ ಆಯವ್ಯಯದಲ್ಲಿ 50 ಲಕ್ಷ ರೂಪಾಯಿಗಳನ್ನು ಕೊಡಲು ಅವಕಾಶವಿತ್ತು. ರಾಜ್ಯದಲ್ಲಿ ಮಂಜೂರಾಗಿರುವ ಕಾಲೇಜು ಕಟ್ಟಡಗಳನ್ನು ಕಟ್ಟಿ ಮುಗಿಸಲು 27 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆದರೆ, ಈ ವರ್ಷ ಶಿಕ್ಷಣ ಮಂತ್ರಿಗಳಿಗೆ 10 ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ಅವರ ಬಗ್ಗೆ ಪಾಪ ಎನಿಸುವುದಿಲ್ಲವೆ? ಅವರ ಬಗ್ಗೆ ನಿಮಗೂ ಪಾಪ ಅನಿಸಬೇಕು. ನನಗಂತೂ ಅವರನ್ನು ಕಂಡು ಕನಿಕರ ಬರುತ್ತದೆ. ಅವರೇನು ಮಾಡಬಹುದು? ಅವರಿಗೆ ಹಣ ಕೊಟ್ಟು ಒಳ್ಳೆಯ ಕೆಲಸ ಮಾಡುವುದಕ್ಕೆ ಪ್ರೋತ್ಸಾಹ ಕೊಡುವುದನ್ನು ಬಿಟ್ಟು, ಮುಖ್ಯಮಂತ್ರಿಗಳು ರಾಜ್ಯಪಾಲರ ಹತ್ತಿರ ಮಾತು ಕೇಳಲಿಲ್ಲವೆಂದು ಅವರ ಮೇಲೆ ಒತ್ತಡ ತಂದು ಬಿಲ್ ಪಾಸ್ ಮಾಡಲು ಹೋಗುತ್ತಿದ್ದಾರೆ. ಇದು ಯೋಗ್ಯವಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಶ್ರೀ ರಾಜೀವ್‌ಗಾಂಧಿಯವರು ಇಂದು ಬದುಕಿದ್ದಿದ್ದರೆ, ಮುಖ್ಯಮಂತ್ರಿಗಳು ಮತ್ತು ಡಾ: ಜಿ. ಪರಮೇಶ್ವರ್‌ರವರಿಗೆ ಏನು ಹೇಳುತ್ತಿದ್ದರೋ, ಏನೋ? ಏಕೆಂದು ಕೇಳಬಹುದು. ನೀವು ಸೆನೆಟ್ ಅನ್ನು ರದ್ದು ಮಾಡಲು ಹೊರಟಿದ್ದೀರಿ. 18 ವರ್ಷದ ಯುವಕರಿಗೆ ಮತದಾನದ ಹಕ್ಕು ಕೊಡಬೇಕೆಂದು ಸಾರ್ವಜನಿಕವಾಗಿ ಅಭಿಪ್ರಾಯ ರೂಪಿತವಾಗಿಯಿತು. ಆ ಒತ್ತಡಕ್ಕೆ ರಾಜೀವ್‌ಗಾಂಧಿಯವರು, ಪ್ರಧಾನಿಗಳು ನಿರ್ಣಯ ತೆಗೆದುಕೊಂಡರು. ನಮ್ಮ ಯುವಕರ ಸಹಭಾಗಿತ್ವ, ಸಮಾಜದ ಆಗುಹೋಗುಗಳಿಗೆ

ಅನುಗುಣವಾಗಿ ಹೇಗಿರಬೇಕೆಂಬ ಬಗ್ಗೆ ಯೋಚಿಸಿ, ಆಗ 18 ವರ್ಷದ ಯುವಕರಿಗೆ ಮತದಾನದ ಹಕ್ಕು ಕೊಡಲಾಯಿತು. ಅವರೇನು ಅಪೇಕ್ಷೆಪಟ್ಟಿದ್ದರೋ, ಅದಕ್ಕೆ ತದ್ವಿರುದ್ಧವಾಗಿ, ಇವರು ಮಾಡುತ್ತಿದ್ದಾರೆ. ಯುವಕರಿಗೆ ಕೊಟ್ಟ ಹಕ್ಕನ್ನು ಯುವಕರ ಸಹಭಾಗಿತ್ವದಲ್ಲಿರಬೇಕಾದ ಭಾಗವಹಿಸುವಿಕೆಯನ್ನು ಮೊಟಕುಗೊಳಿಸುವಂತಹ ನಿರ್ಣಯವನ್ನು ಈ ಮಸೂದೆ ಮೂಲಕ ಮಾಡುತ್ತಿದ್ದಾರೆ. ರಾಜೀವ್‌ಗಾಂಧಿಯವರು ಬದುಕಿದ್ದಿದ್ದರೆ, ಇವರಿಗೆ ಯಾವ ಶಿಕ್ಷೆ ಕೊಡುತ್ತಿದ್ದರೆಂಬುದನ್ನು ನೀವೇ ಹೇಳಿ? ಅದು ಅಕ್ಷಮ್ಯ ಅಪರಾಧವಾಗುತ್ತದೆ. ನಮ್ಮ ಹಕ್ಕನ್ನು ರಕ್ಷಿಸಬೇಕಾಗುತ್ತದೆ. ನಿಜ, ಚುನಾವಣೆಯಲ್ಲಿ ಕೆಲವು ಲೋಪದೋಷಗಳಿವೆ. ಅದು ಇಡೀ ವ್ಯವಸ್ಥೆಯಲ್ಲಿದೆ. ಕೇವಲ ಶಿಕ್ಷಣ ಕ್ಷೇತ್ರದಲ್ಲಿಲ್ಲ. ಪ್ರತಿ ಕ್ಷೇತ್ರದಲ್ಲಿಯೂ ಗೊಂದಲವಿದೆ, ಅದು ಎಲ್ಲರಿಗೂ ಗೊತ್ತಿರುವ ವಿಚಾರ. ನೆಗಡಿ ಎಂದು ಮೂಗನ್ನೇ ಕತ್ತರಿಸುವುದು ಪರಿಹಾರವಲ್ಲ. ಇರುವ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ರಚನಾತ್ಮಕವಾಗಿ ಆ ದೃಷ್ಟಿಕೋನದಿಂದ ಯೋಚಿಸಬೇಕಾಗಿದೆಯೇ ಹೊರತು ಮೂಗನ್ನೇ ಕತ್ತರಿಸಿ ಹಾಕುವಂತಹ ರೀತಿಯಲ್ಲಿ ಸೆನೆಟ್ ಅನ್ನು ರದ್ದುಗೊಳಿಸಲು ಹೊರಟಿರುವುದು ತಪ್ಪು. ಇದರಿಂದಾಗಿ, ಯುವಕರಿಗೆ ಸಮಾಜದ ಆಗುಹೋಗುಗಳಲ್ಲಿ ತಮ್ಮನ್ನು ತಾವು ಹೇಗೆ ತೊಡಗಿಸಿಕೊಳ್ಳಬೇಕೆಂಬ ಕಲ್ಪನೆ ಬರುವುದಿಲ್ಲ, ಅದು ಇಂಥ ಮಸೂದೆಯಿಂದ ಸಾಧ್ಯವಾಗುವುದಿಲ್ಲ. ಅವರಿಗೆ ರೈಟ್-ಟು- ಪಾರ್ಟಿಸಿಪೇಷನ್, ಪ್ರತಿ ಹಂತದಲ್ಲಿಯೂ ಯುವಕರು ಭಾಗವಹಿಸಬೇಕಾದ ಅಗತ್ಯತೆ ಇರುವುದರಿಂದ, ಸೆನೆಟ್ ಅನ್ನು ರದ್ದುಗೊಳಿಸಬಾರದು. ಸೆನೆಟಿಗೆ ಕೊಡುವ ಪ್ರಾಮುಖ್ಯತೆಯನ್ನು ತಿಳಿದು ಸೆನೆಟ್ ವ್ಯವಸ್ಥೆಯನ್ನು ಮುಂದುವರಿಸಬೇಕೆಂದು ಆಗ್ರಹಿಸುತ್ತಿದ್ದೇನೆ. ಅನೇಕ ರೀತಿಯ ಲೋಪದೋಷಗಳನ್ನು ಶಿಕ್ಷಣ ಸಚಿವರು ಮಾಡಿದ್ದಾರೆ. ಇದರ ಜೊತೆಗೆ, ಈಗ ಸೆಕೆಂಡ್ ಟರ್ಮ್ ಪ್ರಾರಂಭವಾಗಿದೆ. ಫೀಸ್ ಅನ್ನು ಸಿಕ್ಕಾಪಟ್ಟೆ ಹೆಚ್ಚು ಮಾಡಿದರು. ಗೊಂದಲಗಳಿಂದ, ಅವ್ಯವಸ್ಥೆಯಿಂದ ಶಿಕ್ಷಣ ಕ್ಷೇತ್ರದಲ್ಲಿ ತಮ್ಮ ಸರ್ಕಾರ ಹಸ್ತಕ್ಷೇಪ ಮಾಡುತ್ತಿದೆ ಎನ್ನುವುದಕ್ಕೆ ಇದೊಂದು ಉದಾಹರಣೆ. ಇನ್ನೂ ಫೀಸ್ ಹೆಚ್ಚು ಮಾಡಬೇಕೆಂಬುದರ ಬಗ್ಗೆ ಸರ್ಕಾರ ಯೋಚಿಸಿದೆ. ಹಾಗಾದರೆ ಎಷ್ಟು ಹೆಚ್ಚಿಸಬೇಕು? ಸರ್ಕಾರಿ ಕಾಲೇಜುಗಳಲ್ಲಿ ಫಸ್ಟ್ ಇಯರ್ ಡಿಗ್ರಿಗೆ 360 ರೂಪಾಯಿಗಳಿದ್ದದ್ದನ್ನು ಇವತ್ತು 865 ರೂಪಾಯಿಗಳಿಗೇರಿಸಿದ್ದೀರಿ. ಖಾಸಗಿ ಸಂಸ್ಥೆಗಳಲ್ಲಿ, ಸರ್ಕಾರವೇ ಫೀಸ್ ಹೆಚ್ಚ ಮಾಡಿದಮೇಲೆ ಅವರಿಗೆ ಮನಸ್ಸು ಬಂದಂತೆ ಹೆಚ್ಚು ಮಾಡುವುದಿದೆ. ಅದು ಕಡಿಮೆಯಾಗಬೇಕು. ಫಸ್ಟ್ ಟರ್ಮ್‌ನಲ್ಲಿ ಫೀಸ್ ಹೆಚ್ಚು ಮಾಡುವುದು ವರ್ಷದ ಪ್ರಾರಂಭದಲ್ಲಿ ಫೀಸ್ ಹೆಚ್ಚಾಯಿತೆಂದು ವಿದ್ಯಾರ್ಥಿಗಳಿಗೆ ಅನ್ನಿಸುತ್ತಿತ್ತು. ಸೆಕೆಂಡ್ ಟರ್ಮ್, ಫೀಸ್ ಹೆಚ್ಚಿಸಿ, ಈಗ ಇದನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಸರ್ಕಾರದ ಯೋಚನೆ, ನೀವು ಈ ರೀತಿ ಇದ್ದು, ನಿಮ್ಮ ಇಲಾಖಾಧಿಕಾರಿಗಳು ಏನು ಮಾಡುತ್ತಿದ್ದಾರೆ? ಗೊಂದಲ ಮಾಡುವುದೇ ಅವರ ಕೆಲಸವೋ? ಅಥವಾ ಏನಾದರೂ ಸಂಸ್ಥೆಗಳಿಗೆ, ವಿದ್ಯಾರ್ಥಿಗಳಿಗೆ ಪೂರಕವಾಗಿಯೇನಾದರೂ ಕೆಲಸ ಮಾಡುತ್ತಿದ್ದಾರೆಯೇ?

ಎಲ್ಲಾ ಕಾಲೇಜುಗಳಲ್ಲಿ ಫೀಸ್ ಹೆಚ್ಚಾಗಿದೆ. ಹೆಚ್ಚು ಮಾಡುವುದಿದ್ದರೆ, ಫಸ್ಟ್ ಟರ್ಮ್‌ನಲ್ಲಿ ಮಾಡಬಹುದಿತ್ತಲ್ಲವೆ? ಸೆಕೆಂಡ ಟರ್ಮ್‌ನಲ್ಲಿ ಹೆಚ್ಚು ಫೀಸ್ ವಸೂಲು ಮಾಡಬಾರದು. ಫಸ್ಟ್ ಟರ್ಮ್‌ನಲ್ಲಿ ಹೆಚ್ಚಿಸಬೇಕೆಂದು ಇವರು ಆದೇಶ ಕಳುಹಿಸಿದ್ದರು. ಆದರೆ, ಆದೇಶ ಬಂದದ್ದು, ಫಸ್ಟ್ ಟರ್ಮ್ ಮುಗಿಯುತ್ತಿರುವ ಸಂದರ್ಭದಲ್ಲಿ, ಫಸ್ಟ ಟರ್ಮ್‌ನಲ್ಲಿ ಯಾವುದೇ ಶಿಕ್ಷಣ ಸಂಸ್ಥೆ ಫೀಸ್ ವಸೂಲು ಮಾಡಲಿಲ್ಲ. ಸರ್ಕಾರಿ ಕಾಲೇಜುಗಳಲ್ಲಿಯೂ ಫೀಸ್ ವಸೂಲು ಮಾಡಲಿಲ್ಲ. ಈ ಸಂದರ್ಭದಲ್ಲಿ ಈ ವಿಷಯವನ್ನು ತಮ್ಮ ಗಮನಕ್ಕೆ ತಂದರೆ, ಲಕ್ಷಾಂತರ ವಿದ್ಯಾರ್ಥಿಗಳಿಗೆ, ಸಂಸ್ಥೆಗಳಿಗೆ, ಅನುಕೂಲವಾಗುತ್ತದೆ. ಮಸೂದೆ ಬಗ್ಗೆ ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. ಈ ಅಂಶವನ್ನು ಗಮನಿಸಿ, ಇದರ ಹಿಂದೆ ಸಾಕಷ್ಟು ಗೊಂದಲವಿದೆ; ಮತ್ತೆ ಹಾಗೆ ಆಗಬಾರದು. ಸೆಕೆಂಡ್ ಇಯರ್, ಥರ್ಡ್ ಇಯರಿಗೆ ಫೀಸ್ ಇಲ್ಲ. ಅದನ್ನು ಮುಂದಿನ ವರ್ಷದಿಂದ ಹೆಚ್ಚು ಮಾಡಿರುವುದನ್ನು ಕಡಿಮೆ ಮಾಡಿ, ಫೀಸ್ ವಸೂಲು ಮಾಡಲು ಆದೇಶ ಕೊಡಬೇಕು. ಅದರ ಬಗ್ಗೆ ತಾವು ದಿಟ್ಟನಿಲುವು ತೆಗೆದುಕೊಳ್ಳಬೇಕು. ವಿದ್ಯಾರ್ಥಿಗಳಲ್ಲಿ ಇಂದು ಅಶಾಂತಿ ನಿರ್ಮಾಣವಾಗಿದೆ. ಅವರು ಅನೇಕ ರೀತಿಯ ಹೋರಾಟ ಮಾಡಿದ್ದಾರೆ. ಶಾಸಕರನ್ನು ಕೂಡ ಭೇಟಿ ಮಾಡಿದ್ದು, ಮಂತ್ರಿಗಳ ಮನೆಗೂ ಹೋಗುತ್ತಿದ್ದಾರೆ. ಈ ಮಸೂದೆಯನ್ನು ಹೇಗಾದರೂ ಪಾಸ್ ಮಾಡಿಸಿಕೊಳ್ಳಲು ಬಯಸಿದರೆ, ಶಿಕ್ಷಣ ಕ್ಷೇತ್ರದಲ್ಲಿ ಇನ್ನಷ್ಟು ಗೊಂದಲ ನಿರ್ಮಾಣವಾಗುತ್ತದೆ. ವಿದ್ಯಾರ್ಥಿಗಳು ಹೋರಾಟದ ಹೆಜ್ಜೆ ತುಳಿಯುತ್ತಾರೆ. ಈಗಾಗಲೇ ಪತ್ರಿಕೆಯಲ್ಲಿ ವರದಿಗಳು ಬರುತ್ತಿವೆ. ಅನೇಕ ವಿದ್ಯಾರ್ಥಿ ಸಂಘಟನೆಗಳು ಈಗಾಗಲೇ ಸರ್ಕಾರಕ್ಕೆ ತಮ್ಮ ರೆಪ್ರೆಸೆಂಟೇಷನ್‌ಗಳನ್ನು ಕೊಟ್ಟಿದ್ದಾರೆ. ಸರ್ಕಾರ ಈ ಮಸೂದೆಯನ್ನು ಗಡಿಬಿಡಿಯಲ್ಲಿ ಪಾಸ್ ಮಾಡಿಕೊಳ್ಳಬಾರದು. ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ, ಅದರ ಬಗ್ಗೆ ಪೂರ್ವಾಪರ ಚರ್ಚೆಯಾಗಲಿ, ನಂತರ ಒಂದು ನಿರ್ಣಯಕ್ಕೆ ಬರೋಣ. ಈ ಸದನದಲ್ಲಿ ಸರ್ವಾನುಮತದಿಂದ ಚರ್ಚಿಸಿ ಶಿಕ್ಷಣ ಸುಧಾರಣೆಗೆ ಎಲ್ಲಾ ರೀತಿಯ ಪ್ರಯತ್ನ ಮಾಡೋಣ. ಆದುದರಿಂದ, ಈ ಮಸೂದೆಯನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕೆಂದು ಅಗ್ರಹಿಸುತ್ತಾ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ :— ಆ ಕಡೆಯವರಿಗೆ ಅವಕಾಶ ಕೊಟ್ಟ ಹಾಗೆ, ನಮಗೂ ಅವಕಾಶ ಕೊಡಿ.

ಅಧ್ಯಕ್ಷರು :— ತಾವು ಲೆಟರ್ ಕೊಟ್ಟು ಎರಡು ನಿಮಿಷಗಳಾಯಿತು. ಅವರು ಈಗಾಗಲೇ ಲೆಟರ್ ಕೊಟ್ಟಿದ್ದಾರೆ. ತಮಗೂ ಅವಕಾಶ ಕೊಡೋಣ.

+ ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) :— ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ವಲಯದಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ ಹೆಸರು ಮಾಡಿದ ಶಿಕ್ಷಣ ತಜ್ಞರ ಆತಂಕವನ್ನೇ ನಾನು ಪುನರುಚ್ಚಾರ ಮಾಡುತ್ತಿದ್ದೇನೆ. ಈ ಮಸೂದೆಯಿಂದಾಗಿ ವಿಶ್ವವಿದ್ಯಾನಿಲಯಗಳ ಸ್ವಾತಂತ್ರ್ಯ

ಹರಣ ಮಾಡುತ್ತಿದ್ದಾರೆ. ವಿಶ್ವವಿದ್ಯಾನಿಲಯಗಳು ಯಾವ ರೀತಿ ಕುಲಾಧಿಪತಿಗಳ ಪರಮಾಧಿಕಾರತ್ವದಲ್ಲಿ ಒಂದು ಒಳ್ಳೆಯ ಸಂಸ್ಥೆಯಾಗಿ ನಿರ್ಮಾಣವಾಗಿತ್ತು, ಆಡಳಿತ ಸುಸೂತ್ರವಾಗಿ ನಡೆದುಕೊಂಡು ಬರುತ್ತಿತ್ತು, ಆ ಕುಲಾಧಿಪತಿಗಳ ಪರಮಾಧಿಕಾರವನ್ನು ಕಿತ್ತುಕೊಂಡು, ಕುಲಾಧಿಪತಿಗಳ ಔಪಚಾರಿಕ ಸಂಸ್ಥೆಯನ್ನಾಗಿ ಬಳಸಿಕೊಳ್ಳುವ ಹುನ್ನಾರ ಇದರ ಹಿಂದೆ ಅಡಗಿದೆ. ಈ ಮಸೂದೆಯನ್ನು ತರುವ ಹಿನ್ನೆಲೆಯಲ್ಲಿ ಉದ್ದೇಶ ತೋರಿಸಿರುವುದನ್ನು ಗಮನಿಸಿದಾಗ, ಅನೇಕ ವಿಚಾರಗಳನ್ನು ಅವರು ಹೇಳಿದ್ದಾರೆ. ಅದರಲ್ಲಿ ಅನೇಕ ಸಂಶಯಗಳಿವೆ. ಮೊದಲನೆಯದಾಗಿ, ವಿಶ್ವವಿದ್ಯಾನಿಲಯಗಳ ಮಟ್ಟದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಗಳೇನೇನು ಹೊರಹೊಮ್ಮಿವೆ, ಅವುಗಳಿಗೆ ಕಡಿವಾಣ ಹಾಕುವುದು, ಅದರ ಜೊತೆಗೆ, ವಿಶ್ವವಿದ್ಯಾನಿಲಯಗಳ ಆಡಳಿತವನ್ನು, ಆಡಳಿತ ಯಂತ್ರವನ್ನು ಚುರುಕುಗೊಳಿಸುವುದು, ಅವುಗಳನ್ನು ಒಂದು ಒಳ್ಳೆಯ ಸಂಸ್ಥೆಯನ್ನಾಗಿ ನಡೆಸಿಕೊಂಡು ಹೋಗಬೇಕೆನ್ನುವ ಒಂದು ವಿಚಾರವನ್ನು ಹೇಳಿದ್ದಾರೆ. ಅದರ ಜೊತೆಗೆ, ಅನೇಕ ವರ್ಷಗಳಿಂದ ಒಂದು ಚಿಂತನೆ ಇತ್ತು. ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಜನರು ವಿಶೇಷವಾಗಿ ಈ ಸಂಸ್ಥೆಗಳ ಆಡಳಿತ ವ್ಯವಸ್ಥೆಯಲ್ಲಿ ಜವಾಬ್ದಾರಿ ವಹಿಸಿಕೊಳ್ಳಬೇಕೆನ್ನುವುದಿತ್ತು. ಇವತ್ತು ಒಂದು ಚಿಂತೆ ನಮ್ಮನ್ನು ಕಾಡುತ್ತಿದೆ. ಅನೇಕ ಸೆನೆಟ್ ಸದಸ್ಯರು ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆನ್ನುವುದರ ಉಪಕ್ರಮವೇನು? ಇದನ್ನು ಬದಲಾಯಿಸಿ ಸರ್ಕಾರ ಏನೇನು ಮಾಡಲು ಹೊರಟಿದೆ? ಎನ್ನುವುದನ್ನು ಚಿಂತಿಸಿದಾಗ, ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವುದೇ, ಹೇಗೆ? ಈ ಸ್ಥಾನಪಲ್ಲಟ ಮಾಡಿ, ಇವರನ್ನು ತೆಗೆದು, ಸೆನೆಟ್‌ಅನ್ನು ತೆಗೆದುಹಾಕಿ, ಈ ವ್ಯವಸ್ಥೆಯನ್ನು ತುಂಬಲು ಅಕಾಡೆಮಿಕ್ ಕೌನ್ಸಿಲ್ ಇನ್ನಿತರೆ ವ್ಯವಸ್ಥೆಗಳನ್ನು ಮಾಡಿದರೆ, ರಾಜಕೀಯ ಲಾಬಿ ನಿರ್ಮಾಣವಾಗುವುದಿಲ್ಲವೆ ಹೇಗೆ? ಇದನ್ನು ಕೂಡ ನಾವು ಪ್ರಶ್ನೆ ಮಾಡಬೇಕಾಗುತ್ತದೆ. ನಾವೆಲ್ಲ ರಾಜಕಾರಣದಲ್ಲಿರುವ ಜನರು. ಅನೇಕ ರೀತಿಯ ಲಾಬಿಗಳನ್ನು ಮಾಡುತ್ತಾ ಬಂದಂಥವರು. ಇವತ್ತು ಆಡಳಿತ ಪಕ್ಷದ ಅನೇಕ ಮುಖಂಡರು, ಶಾಸಕರು, ಮಂತ್ರಿಗಳು ಇಲ್ಲಿದ್ದಾರೆ. ಪ್ರಕಾರ ಅಧಿಕಾರಕ್ಕೆ ಬಂದು ಒಂದು ವರ್ಷವಾದರೂ ನಿಗಮ-ಮಂಡಳಿಗಳಿಗೆ ನೇಮಿಸಿಲ್ಲವೆಂಬ ಕೂಗು ರಾಜ್ಯಾದ್ಯಂತ ಕೇಳಿಬರುತ್ತಿದೆ.

ಅಧ್ಯಕ್ಷರು :— ನಿಗಮ-ಮಂಡಳಿಗಳ ಅಧ್ಯಕ್ಷರ ನೇಮಕಕ್ಕೂ, ವಿಶ್ವವಿದ್ಯಾಲಯ ಕಾಯ್ದೆಗೂ ಏನು ಸಂಬಂಧ?

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ :— ಅದು ಸರ್ಕಾರ ತೆಗೆದುಕೊಳ್ಳುವ ಕ್ರಮ.

ಶ್ರೀ ಪಿ.ಹೆಚ್. ಪೂಜಾರ್ :— ಈ ಒಂದು ಹಿನ್ನೆಲೆಯಲ್ಲಿ, ಅಕಾಡೆಮಿಕ್ ಕೌನ್ಸಿಲ್‌ಗಳಿಗೆ ನಾಮನಿರ್ದೇಶನ ಮಾಡುವ ಸಂದರ್ಭ ಬಂದಾಗ, ರಾಜಕಾರಣ ಬರುವುದಿಲ್ಲವೆ? ನಾವು ಇದನ್ನು ಪ್ರಶ್ನೆ ಮಾಡಬೇಕಾಗುತ್ತದೆ. ರಾಜಕಾರಣಿಗಳಲ್ಲಿ ಸಾಮಾನ್ಯವಾಗಿ ಒಂದು ಆರೋಪವಿದೆ. ಪುಡಿಗಾಸಿನ ಸಣ್ಣಪುಟ್ಟ ರಾಜಕಾರಣಿಗಳು, ಶಾಸಕರು, ಮಂತ್ರಿ-ಮಹೋದಯರನ್ನು ಹಿಡಿದುಕೊಂಡು ಅನೇಕ ರೀತಿಯ ಭ್ರಷ್ಟಾಚಾರ ನಡೆಯುತ್ತದೆನ್ನುವ ಅಪಾದನೆಗಳು ನಮ್ಮೆಲ್ಲರ ಮೇಲೆ ಕೇಳಿ ಬರುತ್ತಿದೆ. ಈ ಹಿನ್ನೆಲೆಯಲ್ಲಿ, ಇಂಥ ಅಧಿಕಾರವನ್ನು,

ವಿಶ್ವವಿದ್ಯಾನಿಲಯಗಳ ಆಡಳಿತ ವ್ಯವಸ್ಥೆ ಬಗ್ಗೆ ಚಿಂತನೆ ಮಾಡುವಂಥ ಸಿಸ್ಟಂ ಅನ್ನು ಈ ರಾಜಕಾರಣಿಗಳ ಕೈಯಲ್ಲಿ ಕೊಟ್ಟರೆ, ಭ್ರಷ್ಟಾಚಾರ ಯಾವ ಹಂತಕ್ಕೆ ಹೋಗಬಹುದು, ಅದನ್ನು ಊಹಿಸಲೂ ಕೂಡ ಅಸಾಧ್ಯವಾಗಬಹುದಾಗಿದೆ. ಇಂದು ವಿಶ್ವವಿದ್ಯಾನಿಲಯಗಳ ಕಾರ್ಯ ಚಟುವಟಿಕೆಯನ್ನು ಚುರುಕುಗೊಳಿಸುವಂಥ ನೆಪವೊಡ್ಡಿ ನಾನು ನೇರವಾಗಿ ಆರೋಪ ಮಾಡುತ್ತಿದ್ದೇನೆ. ಸರ್ಕಾರದ ಆಡಳಿತ ಯಂತ್ರವನ್ನು ವಿಶ್ವವಿದ್ಯಾನಿಲಯದ ವ್ಯವಸ್ಥೆಯನ್ನು ರಾಜಕೀಯಕರಣಗೊಳಿಸುವುದಕ್ಕೆ ಈ ಒಂದು ಮಸೂದೆಯನ್ನು ತರುತ್ತಿದ್ದಾರೆ. ಅನಿವಾರ್ಯವಾಗಿ ನಮ್ಮ ಎಲ್ಲ ಸದಸ್ಯರ ಭಾವನೆಯಂತೆ ನಾನು ಕೂಡ ಹೇಳಬೇಕಾಗುತ್ತದೆ. ಈ ಮಸೂದೆಯಲ್ಲಿನ ವಿಧಿಗಳನ್ನು ಜಾರಿಗೆ ಮಾಡುವ ಸಂದರ್ಭದಲ್ಲಿ ರಾಜಕಾರಣ ಪ್ರವೇಶ ಮಾಡಲೇಬೇಕು, ರಾಜಕಾರಣ ಪ್ರವೇಶ ಮಾಡಿದ ಸಂದರ್ಭದಲ್ಲಿ ಸರ್ಕಾರಕ್ಕೆ ಇರುವಂಥ ಅನಿವಾರ್ಯದ ಒತ್ತಡದಿಂದ, ದುಷ್ಪರಿಣಾಮದಿಂದಾಗಿ ವಿಶ್ವವಿದ್ಯಾನಿಲಯಗಳ ಒಂದು ಆಡಳಿತ ಯಂತ್ರವೇ ಕುಸಿದು ಬೀಳುವ ಒಂದು ಗಂಡಾಂತರ ಕಾದಿದೆ ಎನ್ನುವಂಥದ್ದಾಗಿದೆ. ಈ ದಿಸೆಯಲ್ಲಿ ಸರ್ಕಾರ ಮರು-ಚಿಂತನೆಯನ್ನು ಮಾಡಬೇಕು. ನಮ್ಮ ಸದಸ್ಯರು ಹಾಗೂ ಅನೇಕ ಮುಖಂಡರೂ ಕೂಡ ಇದರ ಬಗ್ಗೆ ಹೇಳಿದ್ದಾರೆ, ಇದರ ಬಗ್ಗೆ ಪತ್ರಿಕೆಯಲ್ಲಿ ಕೂಡ ವರದಿಯಾಗಿದೆ. ಕುಲಪತಿಗಳ ಹಾಗೂ ಮಾನ್ಯ ಮುಖ್ಯಮಂತ್ರಿಗಳ ನಡುವಿನ ಒಂದು ಭಿನ್ನಾಭಿಪ್ರಾಯವೇ ಈ ಒಂದು ಕರಾಳ ಮಸೂದೆಯನ್ನು ತರುವ ಕೆಲಸ ಮಾಡುತ್ತಿದೆ. ನಾನು ಕೂಡ ತಮ್ಮ ಮುಖಾಂತರ ಸರ್ಕಾರವನ್ನು ವಿನಂತಿಮಾಡಿಕೊಳ್ಳುತ್ತೇನೆ; ನಮ್ಮಲ್ಲಿ ಒಂದು ಗಾದೆ ಮಾತು ಇದೆ. "ಸಿಟ್ಟು ಬಂದಾಗ ಮೂಗು ಕೊಯ್ದುಕೊಂಡರಂತೆ" ಆದರಂತೆ ನಮ್ಮ ಮಾನ್ಯ ವಿಶ್ವೇಶ್ವರ ಹೆಗಡೆಯವರು ಕೂಡ ಹೇಳಿದರು. ನೆಗಡಿ ಬಂದರೆ ಮೂಗು ಕೊಯ್ಯಬಾರದು. ಆಡಳಿತವನ್ನು ನಡೆಸುವ ಸಂದರ್ಭದಲ್ಲಿ ಭಿನ್ನಾಭಿಪ್ರಾಯ ಬರುವುದು ಸಹಜ, ಅದನ್ನೇ ಇವತ್ತು ದೊಡ್ಡದಾಗಿ ಮಾಡಿಕೊಂಡು ಸರ್ಕಾರ ಇಂತಹ ಒಂದು ಕರಾಳ ಮಸೂದೆಯನ್ನು ತರುವುದಕ್ಕೆ ಹೊರಟಿದೆ, ಸುಧಾರಣೆ ನೆಪದಲ್ಲಿ ಈ ಒಂದು ಪವಿತ್ರವಾದ ಸಂಸ್ಥೆಗಳ ಆಡಳಿತದಲ್ಲಿ ಕೈತೂರಿಸುವ ಒಂದು ಹುನ್ನಾರ ಏನು ಮಾಡುತ್ತಿದೆ ಇದನ್ನು ಬಿಡಬೇಕು. ಇಲ್ಲಿಯವರೆಗೆ ಸಾರ್ವಜನಿಕ ಸಂಸ್ಥೆಗಳಲ್ಲಿ, ಸಾರ್ವಜನಿಕ ಸಂಸ್ಥೆಗಳಲ್ಲಿ, ಸಾರ್ವಜನಿಕ ಜೀವನದಲ್ಲಿ ನಾವು ಅನುಭವಿಸತಕ್ಕಂಥ ಸಣ್ಣ ಸಣ್ಣ ಪ್ರಮಾಣದ ಭ್ರಷ್ಟಾಚಾರದ ವ್ಯವಸ್ಥೆ, ಅಧಿಕಾರ ದುರುಪಯೋಗದ ವ್ಯವಸ್ಥೆ, ಇಂತಹ ಪವಿತ್ರವಾದ ಸಂಸ್ಥೆಗಳ ಬಾಗಿಲಲ್ಲಿ ಕೂಡ ಕಾಲನ್ನು ಇಡಬಾರದು ಎನ್ನುವ ಒಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇಂತಹ ಒಂದು ಬಿಲ್ಲಿನಿಂದ ಆಗತಕ್ಕಂಥ ದುಷ್ಪರಿಣಾಮಗಳ ಬಗ್ಗೆ ಚಿಂತನೆ ಅವಶ್ಯಕವಾಗಿ ಆಗಬೇಕಾಗಿದೆ. ಇದರ ಬಗ್ಗೆ ಪೂರ್ವಾಪರ ವಿಚಾರ ಮಾಡಲಿಕ್ಕೆ ಮಾರ್ಗದರ್ಶನ, ಇದರ ಮುಖ್ಯವಾಗಿ ದೂರಗಾಮಿ ಚಿಂತನೆಯ ದೃಷ್ಟಿಯಿಂದ ಜಂಟಿ ಸದನ ಸಮಿತಿಗೆ ಇದನ್ನು ವಹಿಸಿಕೊಡಬೇಕೆಂದು ತಮ್ಮ ಮೂಲಕ ನನ್ನ ವಿನಂತಿಯನ್ನು ಮಾಡಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ) :— ಮಾನ್ಯ ಅಧ್ಯಕ್ಷರೆ, ಇದೊಂದು ಐತಿಹಾಸಿಕ ಮತ್ತು ಚಾರಿತ್ರಿಕವಾದಂತಹ ಮಸೂದೆಯಾಗಿದೆ. ಜನಸಾಮಾನ್ಯರ, ವಿದ್ಯಾರ್ಥಿಗಳ ಹಾಗೂ ವಿಶ್ವವಿದ್ಯಾನಿಲಯಗಳ ಆಡಳಿತವನ್ನು ಚುರುಕಗೊಳಿಸುವ ದೃಷ್ಟಿಯಿಂದ ಅದರ ಬಗ್ಗೆ ಚಿಕ್ಕ ಹುಡುಗನಿಂದ ಇಲ್ಲಿಯುವರೆಗೆ ಎಲ್ಲಾ ಅನುಭವಗಳನ್ನು ಪಡೆದಿರತಕ್ಕಂಥ ಶಿಕ್ಷಣ ಸಚಿವರು ಸಮಗ್ರವಾದ ಒಂದು ಚಿಂತನೆಯನ್ನು ಮಾಡಿದ್ದಾರೆ, ಸಮಗ್ರವಾದ ಅಭಿಪ್ರಾಯವನ್ನು ಪಡೆದುಕೊಂಡಿದ್ದಾರೆ. ವಿಶ್ವವಿದ್ಯಾನಿಲಯ, ಕೇಂದ್ರ ಸರ್ಕಾರ ಹಾಗೂ ಎಲ್ಲರಿಂದ ಒಂದು ಉತ್ತಮವಾದ ಅಭಿಪ್ರಾಯವನ್ನು ಪಡೆದುಕೊಂಡಿದ್ದಾರೆ. ಗ್ರಾಮೀಣ ಪ್ರದೇಶದಿಂದ ಬಂದವರು ಇವರು ಮೇಲಿನಿಂದ ಬಂದವರು ಅಲ್ಲ. ವಿದ್ಯಾರ್ಥಿಪರಿಷತ್ತಿನಿಂದ ಬಂದವರು ಅಲ್ಲ, ಸಾಮಾನ್ಯ ಜನರಿಂದ ಬಂದ ಇವರು ಅಪಾರವಾದ ಅನುಭವ ಪಡೆದಿರತಕ್ಕಂಥವರು ಇವರು ಸಮಗ್ರವಾದ ಒಂದು ಮಸೂದೆಯನ್ನು ತಂದಿರುತ್ತಾರೆ. ಅದನ್ನು ನಾವು ಎಲ್ಲರೂ ಸಹಿತ ಏಕಕಾಲದಲ್ಲಿ ಈ ಮಸೂದೆಯನ್ನು ಪಾಸ್ ಮಾಡಿಕೊಡುವುದು ಅವಶ್ಯಕತೆಯ ಆದ್ಯಕರ್ತವ್ಯವಾಗಿದೆ. ಕೆಲವರು ಅಭಿಪ್ರಾಯ ಹಾಗೂ ಭಿನ್ನಾಭಿಪ್ರಾಯವೆಂದು ಹೇಳುತ್ತಾರೆ. ಕೆಲವು ಸಲ ಕೇಂದ್ರ ಸರ್ಕಾರದವರು ರಾಜ್ಯಪಾಲರನ್ನು ಬದಲಾವಣೆ ಮಾಡುತ್ತಾರೆ; ರಾಜೀನಾಮೆ ಕೊಡಿಸುತ್ತಾರೆ, ಇನ್ನೊಂದನ್ನು ಕೂಡ ಮಾಡುತ್ತಾರೆ. ಆಗ ರಾಷ್ಟ್ರಪತಿಯವರಿಗೂ ಹಾಗೂ ಪ್ರಧಾನ ಮಂತ್ರಿಯವರಿಗೂ ಭಿನ್ನಾಭಿಪ್ರಾಯ ಇದೆ ಎಂದು ಹೇಳುವುದಕ್ಕಾಗುತ್ತದೆಯೇ? ಮೊನ್ನೆ ಪೆಟ್ರೋಲ್ ಬೆಲೆಯಲ್ಲಿ ಸ್ಪಷ್ಟವಾದ ಭಿನ್ನಾಭಿಪ್ರಾಯ ಬಂದಿರುತ್ತದೆ. ಆಗ ಅವರು ಭಿನ್ನಾಭಿಪ್ರಾಯವನ್ನು ಶಮನ ಮಾಡಿಕೊಂಡರು. ಕೇಂದ್ರ ಸರ್ಕಾರದ ಆಡಳಿತದಲ್ಲಿ ಭಿನ್ನಾಭಿಪ್ರಾಯ ಇದೆ, ಅದನ್ನು ಸರಿಪಡಿಸಬೇಕೆಂದು ನಾನು ಹೇಳುತ್ತೇನೆ. ಆಡಳಿತದಲ್ಲಿ ಮೇಲ್ವಿಚಾರಣೆ ಮಾಡುವವರು, ನಾನು ಅವರ ಹೆಸರನ್ನು ನೇರವಾಗಿ ಹೇಳುವುದಿಲ್ಲ, ಆಡಳಿತವನ್ನು ಪರಿಶೀಲನೆ ಮಾಡತಕ್ಕಂಥವರು ತಮ್ಮ ಅಭಿಪ್ರಾಯವನ್ನು ಹೇಳುವ ಸೌಜನ್ಯ ಇರುತ್ತದೆ. ಭಿನ್ನಾಭಿಪ್ರಾಯ ಇದೆ ಎಂದು ಹೇಳುತ್ತಾರೆ, ಅದನ್ನು ಯಾವರೀತಿಯಾಗಿ ಸರಿಪಡಿಸಿಕೊಳ್ಳಬೇಕೆಂದು ಹೇಳಿರುವುದಿಲ್ಲ. ಇದು ರಾಜಕೀಯ ಲಾಭಕ್ಕಾಗಿ ಮಾಡಿದ್ದಾರೆ ಎನ್ನುವುದನ್ನು ಹೇಳಿದ್ದಾರೆ, ಆ ನೋವನ್ನು ಈ ಸದನ ತಿರಸ್ಕರಿಸಬೇಕಾಗುತ್ತದೆ. ಮಾನ್ಯ ಶಿಕ್ಷಣ ಸಚಿವರು ಸಮಗ್ರವಾಗಿ ಎಲ್ಲರನ್ನು ಕೇಳಿದ್ದಾರೆ. ಆದರೆ ಮಾನ್ಯ ಮುರಳಿ ಮನೋಹರ್ ಜೋಷಿಯವರು ಯಾರನ್ನು ಕೇಳುತ್ತಾರೆ ಗೊತ್ತೆ? ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಏನಿದೆ ಅದನ್ನು ಬಿಟ್ಟರೆ ಬಜರಂಗದಳದವರನ್ನು ಕೇಳುತ್ತಾರೆ.

ಅಧ್ಯಕ್ಷರು :— ಮಾನ್ಯ ನೀಲಕಂಠಪ್ಪನವರೆ, ಕಾಂಟ್ರೋವರಿಯಲ್ ಆಗಿ ಏಕೆ ಮಾತನಾಡುತ್ತೀರಿ? ಬೇರೆಯವರ ಹೆಸರನ್ನು ತರಬೇಡಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ :— ಶಿಕ್ಷಣ ಸಚಿವರು ಯಾವುದೇ ಅನುಭವ ಇಲ್ಲದಿರುವವರನ್ನು ಕೇಳಿರುವುದಿಲ್ಲ, ಶಿಕ್ಷಣ ತಜ್ಞರ ಅಭಿಪ್ರಾಯಗಳನ್ನು ತೆಗೆದುಕೊಂಡು

ಕರ್ನಾಟಕ ಸರಕಾರಕ್ಕೆ ಒಂದು ಕೊಡುಗೆಯನ್ನು ತಂದಿರುತ್ತಾರೆ. ನಾನು ಕೇಂದ್ರ ಸರ್ಕಾರದವರು ಸಹಾಯ ಮಾಡಬೇಕೆಂದು ಕೇಳುತ್ತಿದ್ದೇನೆ. ಕೇಂದ್ರ ಸರ್ಕಾರ ಮಧ್ಯಪ್ರವೇಶ ಮಾಡಿ ಸಮಗ್ರವಾದ ಒಂದು ಚಿಂತನೆಯನ್ನು ಮಾಡಬೇಕು. ನಮ್ಮ ಆಡಳಿತ ಸರಿಯಿಲ್ಲವೆಂದು ಹೇಳಿದರು. ಮಕ್ಕಳ ಬಗ್ಗೆ ಚಿಂತನೆ ಮಾಡ ತಕ್ಕಂಥ ಕೇಂದ್ರ ಸರ್ಕಾರದವರಿಗೆ, ಸುಮಾರು ಲಕ್ಷಾಂತರ ಅಂಗನವಾಡಿಗಳನ್ನು ತೆರೆಯಬೇಕೆಂದು ಕಳೆದ ಎರಡು ವರ್ಷಗಳಿಂದ ರಾಜ್ಯ ಸರ್ಕಾರದವರು ಕೇಳುತ್ತಿದ್ದಾರೆ. ಒಂದೇ ಒಂದು ಅಂಗನವಾಡಿಯನ್ನು ತೆಗೆಯುವುದಕ್ಕೆ ಇವರು ಕಳೆದ ಎರಡು ವರ್ಷಗಳಿಂದ ಬಿಡುತ್ತಿಲ್ಲ. ಮಕ್ಕಳ ಬಗ್ಗೆ ಎಷ್ಟು ಚಿಂತನೆ ಇದೆ ಎನ್ನುವುದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಇವರಿಗೆ ವಿಶ್ವವಿದ್ಯಾನಿಲಯಗಳ ಬಗ್ಗೆ ಚಿಂತನೆ ಮಾಡುವ ಔಚಿತ್ಯವೆಲ್ಲಿದೆ? ನಾವು ಅನೇಕ ಸಲ ಕೇಂದ್ರ ಸರ್ಕಾರಕ್ಕೆ ಬೇಡಿಕೆಗಳನ್ನು ಕೊಟ್ಟಿದ್ದೇವೆ. ಗ್ರಾಮಾಂತರ ಪ್ರದೇಶದಲ್ಲಿರುವ ಮಕ್ಕಳು ಶಾಲೆಯನ್ನು ಕಲಿತರೆ ನಮಗೆ ಎಲ್ಲಿ ಕುಂದು ಬರುತ್ತದೆಂದು ಅವರ ಉದ್ದೇಶ. ಕೇಂದ್ರ ಸರ್ಕಾರದವರಿಗೆ ನಮ್ಮ ಮಕ್ಕಳು ಹಾಗೆ ಇರಬೇಕು.

(ಗೊಂದಲ)

ಶ್ರೀ ವಿ. ಪಾಪಣ್ಣ:- ಮಾನ್ಯ ಅಧ್ಯಕ್ಷರೆ, ಅವರು ಬೇರೆ ಬೇರೆ ವಿಷಯದ ಕಡೆಗೆ ಹೋಗುತ್ತಿದ್ದಾರೆ. ಬರೀ ಕೇಂದ್ರ ಸರ್ಕಾರಧ ಬಗ್ಗೆ ಹೇಳುತ್ತಿದ್ದಾರೆ, ತಾವು ದಯಮಾಡಿ ಅವರಿಗೆ ಹೇಳಬೇಕು.

(ಗೊಂದಲ)

ಶ್ರೀ ಬಿ.ಆರ್. ನೀಲಕಂಠಪ್ಪ:- ಕೇಂದ್ರ ಸರ್ಕಾರದವರು ಸಹಾಯ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಕೇಂದ್ರ ಸರ್ಕಾರದವರು ವಿಶ್ವವಿದ್ಯಾನಿಲಯಗಳ ಯೋಜನೆಗೆ ಹಣವನ್ನು ಯಾವುದಕ್ಕೆ ಸಹಾಯ ಮಾಡಿದ್ದಾರೆ? ನಿಮ್ಮ ಪಾತ್ರ ಏನು? ಎನ್ನುವುದರ ಬಗ್ಗೆ ಕೇಳುವ ಹಕ್ಕು ನಮಗೆ ಇದೆ. ಕೇಂದ್ರ ಸರ್ಕಾರದ ಚುಕ್ಕಾಣಿಯನ್ನು ಹಿಡಿದಿರುವ ನಮ್ಮ ವಿರೋಧ ಪಕ್ಷದವರಾದ ನೀವು ಇಲ್ಲಿಯವರೆಗೆ ನೀವು ಏನನ್ನು ತಂದಿರುತ್ತೀರಿ? ಮಾನ್ಯ ಶಿಕ್ಷಣ ಸಚಿವರಿಗೆ ನಾನು ಕೇಳುತ್ತಿದ್ದೇನೆ. ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಯೋಜನೆಗಳಿಗಾಗಿ ಎಷ್ಟು ಹಣವನ್ನು ಕೊಟ್ಟಿದೆ ಹಾಗೂ ಹೊಸ ಯೋಜನೆಗಳಿಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆ, ಈ ಬಗ್ಗೆ ಒಂದು ಕರಪತ್ರವನ್ನು ಕೊಡಬೇಕೆಂದು ನಾನು ಈ ಸದನದ ಮೂಲಕ ಕೇಳುತ್ತಿದ್ದೇನೆ. ಅಂಗನವಾಡಿಗೂ ಕೂಡ ಹಣವನ್ನು ಇವರು ಕೊಟ್ಟಿಲ್ಲ, ರಾಜ್ಯ ಹಾಗೂ ಕೇಂದ್ರ ಸರ್ಕಾರದ ಜಂಟಿ ಜವಾಬ್ದಾರಿ ಇದರಲ್ಲಿ ಇರುತ್ತದೆ. ಇದನ್ನು ಸಮಗ್ರವಾಗಿ ಚಿಂತನೆ ಮಾಡಿ ತಂದಿರುವ ಮಸೂದೆಯಾಗಿರುತ್ತದೆ, ಅವರಿಗೆ ಇದು ಬೇಕಾಗಿಲ್ಲ, ಇದನ್ನು ನಾನು ಒಪ್ಪಿಕೊಳ್ಳುತ್ತೇನೆ, ಜಂಟಿ ಮಸೂದೆಗೆ ಒಪ್ಪಿಸಬೇಕೆಂದು ಹೇಳುತ್ತಿದ್ದಾರೆ. ಮಾನ್ಯ ಸಿಂಧ್ಯಾರವರು ಇದನ್ನು ಒಪ್ಪುತ್ತಾರೆ, ಅದಕ್ಕಾಗಿ ಇದನ್ನು ಸರ್ವಾನುಮತದಿಂದ ಒಪ್ಪಬೇಕು, ಕೆಲವರಿಗೆ ಇದನ್ನು ವಿರೋಧ ಮಾಡಬೇಕು, ಇಲ್ಲದಿದ್ದರೆ ನಮಗೆ ಬೈಯ್ಯುತ್ತಾರೆ ಅದರ ಬಗ್ಗೆ ಚಿಂತೆ ಮಾಡಬೇಡಿ. ಇದರ ಬಗ್ಗೆ ತಮಗೆ ಯಾರು ಬೈಯ್ಯುವುದಿಲ್ಲ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ಪ್ರಜೆಗಳು ಇರುವುದರಿಂದ, ನಾವು ಪ್ರಭುಗಳು ನಮ್ಮ ಆಡಳಿತವನ್ನು ಯಾವರೀತಿ ಮಾಡಬೇಕೆಂದು ನಮಗೆ ಗೊತ್ತಿದೆಯೇ ಹೊರತು ನಿಮಗೆ ಅಧಿಕಾರವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಹೇಗೆ ಮಾಡಬೇಕೆಂಬುದು ನಮಗೆ ಗೊತ್ತಿದೆ. ಹೇಗೆ ಮಸೂದೆ ಮಂಡಿಸಬೇಕೆನ್ನುವುದು ನಮಗೆ ಗೊತ್ತಿದೆ.

ಶ್ರೀ ವಿ. ಪಾಪಣ್ಣ:- ಮಾನ್ಯ ಅಧ್ಯಕ್ಷರೆ, ಇದೇನು ಹೀಗೆ ಮಾತನಾಡುತ್ತಾರೆ? ಆಡಳಿತ ಹೇಗೆ ನಡೆಸಬೇಕೆಂದು ಕೇಂದ್ರ ಸರ್ಕಾರದವರಿಗೆ ಗೊತ್ತಿದೆ. ದಯಮಾಡಿ ತಾವು ಅವರಿಗೆ ಆ ರೀತಿ ಮಾತನಾಡಬೇಡಿಯೆಂದು ಹೇಳಬೇಕು.

ಅಧ್ಯಕ್ಷರು:- ಮಾನ್ಯ ಸದಸ್ಯರು ಮಾತನಾಡುವಾಗ ಅನ್‌ಪಾರ್ಲಿಮೆಂಟರಿ ಪದ ಬಳಸುತ್ತಿಲ್ಲ. ಅವರಿಗೆ ಹೇಳುತ್ತೇನೆ ತಾವು ಕುಳಿತುಕೊಳ್ಳಿ. ಮಾನ್ಯ ನೀಲಕಂಠಪ್ಪನವರೇ ತಾವು ಕನ್‌ಕ್ಲೂಡ್ ಮಾಡಿ.

ಶ್ರೀ ಡಿ.ವಿ. ಸದಾನಂದಗೌಡ:- ಇವರನ್ನೂ ಯೂನಿವರ್ಸಿಟಿಯವರು ಆಕಾಡೆಮಿಗೆ ಶಿಫಾರಸ್ಸು ಮಾಡಬಹುದೆಂದು ಹೇಳಿ ನಾವು ಶಿಫಾರಸ್ಸು ಮಾಡುತ್ತೇವೆ.

ಶ್ರೀ ಬಿ. ಆರ್. ನೀಲಕಂಠಪ್ಪ:- ಮಾನ್ಯ ಅಧ್ಯಕ್ಷರೆ, ಅತ್ಯಂತ ಉತ್ತಮವಾದ ಆಡಳಿತವನ್ನು ನಡೆಸುವ ಹಿತದೃಷ್ಟಿಯಿಂದ ಎಲ್ಲ ವಿಶ್ವವಿದ್ಯಾನಿಲಯಗಳ ಸಿಂಡಿಕೇಟ್ ಹೇಗಿರಬೇಕು, ಸೆನೆಟ್ ಹೇಗಿರಬೇಕು, ರಿಜಿಸ್ಟ್ರಾರ್ ಹೇಗಿರಬೇಕು, ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಕಾನೂನು ಹೇಗಿರಬೇಕೆಂಬುದನ್ನೆಲ್ಲಾ ಚಿಂತನೆ ಮಾಡಿ ಅತ್ಯಂತ ಸೂಕ್ಷ್ಮವಾದ ರೀತಿಯಲ್ಲಿ ಆ ಜವಾಬ್ದಾರಿಯನ್ನು ಹೊತ್ತಿರತಕ್ಕ ಮಂತ್ರಿಗಳು ಈ ಮಸೂದೆಯನ್ನು ತಂದಿದ್ದಾರೆ. ಇದಕ್ಕೆ ಸದನದ ಸದಸ್ಯರೆಲ್ಲರೂ ಒಪ್ಪಿಗೆ ಕೊಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ):- ಮಾನ್ಯ ಅಧ್ಯಕ್ಷರೆ, ತಾವು ನನಗೆ ಮಾತನಾಡಲು ಅನುಮತಿಯನ್ನು ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಕರ್ನಾಟಕ ರಾಜ್ಯದಲ್ಲಿ ಸುಮಾರು ವರ್ಷಗಳಿಂದ ಒಂದೇ ಒಂದು ವ್ಯವಸ್ಥೆಯಲ್ಲಿ ನಡೆದುಕೊಂಡು ಬರುತ್ತಿರುವ ಈ ವಿದ್ಯಾ ಇಲಾಖೆಯ ಬಗ್ಗೆ ಮರು ಚಿಂತನೆಯನ್ನು ಮಾಡತಕ್ಕ ಕೆಲಸವನ್ನು

ಮಾನ್ಯ ಉನ್ನತ ಶಿಕ್ಷಣ ಸಚಿವರು ಮಾಡಿದ್ದಾರೆ. ಈ ವಿಧೇಯಕದಲ್ಲಿ ಹೇಳಿರುವ ಸಾಧ್ಯಾಸಾಧ್ಯತೆಗಳನ್ನು ನಾವು ಅವಲೋಕನ ಮಾಡಿದಾಗ ಇದರ ಉಪಯುಕ್ತತೆ ಎಷ್ಟರಮಟ್ಟಿಗೆ ಆಗುತ್ತದೆ ಎನ್ನುವುದನ್ನು ಬಹಳ ಸ್ಪಷ್ಟವಾಗಿ ತಿಳಿಸಿರುವುದರಿಂದ ಇದನ್ನು ನಾನು ಸ್ವಾಗತಿಸುತ್ತೇನೆ. ಈ ಬಗ್ಗೆ ಮರು ಚಿಂತನೆಯನ್ನು ಮಾಡುವಾಗ, ಸ್ವಾತಂತ್ರ್ಯ ಬಂದಾಗಿನಿಂದ ಯಾವುದೇ ಒಂದು ವ್ಯವಸ್ಥೆಗೆ ಅಂಟಿಕೊಂಡು ಆ ವ್ಯವಸ್ಥೆಯನ್ನೇ ನಂಬಿಕೊಂಡು ಇರತಕ್ಕ ಪರಿಸ್ಥಿತಿಯನ್ನು ಅವಲೋಕನ ಮಾಡಿದಾಗ ಎಲ್ಲೋ ಒಂದು ಕಡೆ ರಾಜ್ಯದಲ್ಲಿ ಬೇರೆ ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದಾಗ ನಮ್ಮ ಉನ್ನತ ಶಿಕ್ಷಣದ ಗುಣಮಟ್ಟ ಕಡಿಮೆಯಾಗುತ್ತಿದೆ, ಇದಕ್ಕೆ ಯಾರ್ಯಾರು ಎಷ್ಟೆಷ್ಟು ಜವಾಬ್ದಾರಿಯ ಎನ್ನುವ ಬಗ್ಗೆ ಚಿಂತನೆಯನ್ನು ಮಾಡಿ, ಮಾನ್ಯ ಸಚಿವರು ಒಬ್ಬ ಶಿಕ್ಷಕರಾಗಿದ್ದುದರಿಂದ ಕೆಲವು ಮಾರ್ಪಾಟುಗಳನ್ನು ಮಾಡತಕ್ಕ ಗುರುತರವಾದ ಹೊಣೆಯನ್ನು ಹೊತ್ತುಕೊಂಡು ಈ ಕೆಲಸವನ್ನು ಮಾಡಿದ್ದಾರೆಂದು ನಾನಾದರೂ ಹೇಳುವುದಕ್ಕೆ ಇಚ್ಛಿಸುತ್ತೇನೆ. ಇವತ್ತು ಇದರಲ್ಲಿ ಕೆಲವನ್ನು ಸೂಕ್ಷ್ಮವಾಗಿ ನೋಡಿದಾಗ ಅಕಾಡೆಮಿಕ್ ಕೌನ್ಸಿಲ್ ಇರಬಹುದು, ಸಿಂಡಿಕೇಟ್ ಇರಬಹುದು, ಸೆನೆಟ್ ಇರಬಹುದು; ಈ ಮೂರು ಸೇರಿ ಒಂದೇ ವಿಚಾರವನ್ನು ಚರ್ಚೆ ಮಾಡತಕ್ಕ ಸಂದರ್ಭವನ್ನು ಅರಿತುಕೊಂಡು ಇದಕ್ಕೆ ಏನಾದರೂ ಒಂದು ಮೇಲ್ಪಂಕ್ತಿ ಹಾಕಬೇಕು, ಶಿಕ್ಷಣದ ಗುಣಮಟ್ಟವನ್ನು ಕಾಪಾಡತಕ್ಕದ್ದು ಒಂದು ಕಡೆಯಾದರೆ, ಶಿಕ್ಷಣ ಕ್ಷೇತ್ರದಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಬೇಕಾದರೆ ಬಹುತೇಕ ಕೆಲವು ವಿಚಾರಗಳನ್ನು ಮಾನ್ಯ ಶಿಕ್ಷಣ ಸಚಿವರು ಉಲ್ಲೇಖ ಮಾಡಿದ್ದಾರೆ. ಬಿಗಿ ವಾತಾವರಣವನ್ನು ಸೃಷ್ಟಿ ಮಾಡಿ ಕೆಲಸ ಮಾಡತಕ್ಕ ಉಪಕುಲಪತಿಗಳಾಗಬಹುದು, ಸಿಂಡಿಕೇಟ್ ಸದಸ್ಯರುಗಳಾಗಬಹುದು, ಪ್ರಾಧ್ಯಾಪಕರಾಗಬಹುದು ಡೀನ್‌ರವರಾಗಬಹುದು, ರಿಜಿಸ್ಟ್ರಾರ್ ಆಗಬಹುದು ಆಡಳಿತಾತ್ಮಕ ಕೆಲಸ ಕಾರ್ಯಗಳನ್ನು ಮಾಡತಕ್ಕವರಿಗೆ ಎಲ್ಲೋ ಒಂದು ಕಡೆ ಚುರುಕು ಮುಟ್ಟಿಸಬೇಕೆಂದು ಆಡಳಿತ ಸುಧಾರಣೆಯ ಕ್ರಮವನ್ನು ಮಾಡತಕ್ಕದ್ದು ಇದೆ. ಎಲ್ಲಕ್ಕಿಂತ ಹೆಚ್ಚಾಗಿ ಹೊರ ರಾಷ್ಟ್ರಗಳಿಗೆ ಹೋಲಿಕೆಯಾಗುವ ಗುಣಮಟ್ಟವನ್ನು ಕಾಪಾಡುವುದಕ್ಕೆ ಒಂದು ಸೌಜನ್ಯ, ಅದರ ಬಗ್ಗೆ ಒಂದು ಪ್ರಾಮಾಣಿಕ ಪ್ರಯತ್ನವನ್ನು ಇದರಲ್ಲಿ ಕೊಟ್ಟಿದ್ದಾರೆಂದು ನನ್ನ ಭಾವನೆ. ಇದರ ಬಗ್ಗೆ ಎಲ್ಲವನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ; ಅನೇಕ ವಿಚಾರಗಳನ್ನು ಹಿರಿಯ ಸದಸ್ಯರುಗಳು ಮಾತನಾಡಿದ್ದನ್ನು ಕೇಳಿದ್ದೇನೆ. ನಾನು ಸ್ವತಃ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಓದಿದ್ದರಿಂದ ಅನೇಕ ಸಂಗತಿಗಳು ನನ್ನ ಮನಸ್ಸಿನಲ್ಲಿ ಉಳಿದಿರುವುದರಿಂದ ಜವಾಬ್ದಾರಿ ಕೆಲಸಕಾರ್ಯಗಳನ್ನು ಮಾಡುವಾಗ ಸರ್ಕಾರ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಂಡರೆ ಮುಂದಿನ ಪೀಳಿಗೆಗೆ ಮುಂದೆ ಓದತಕ್ಕ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಎಲ್ಲೋ ಒಂದು ಹೆಚ್ಚಿನ ಕೆಲಸವನ್ನು ಕೊಡತಕ್ಕ ರೀತಿಯಲ್ಲಿ ಮಾಡಿದ್ದಾರೆ. ಅದು ಅಲ್ಲದೆ ಒಂದು ವರ್ಗದವರು ಸುಮಾರು ವರ್ಷಗಳಿಂದ ಅಲ್ಲೇ ಕುಳಿತುಕೊಂಡು, ಅಲ್ಲೇ ನಿವೃತ್ತಿಯಾಗುವವರೆಗೆ ಕೆಲಸ ಮಾಡತಕ್ಕವರಿಗೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗ ಮಾಡುವುದು, ಆಡಳಿತಕ್ಕೆ ಚುರುಕು

ಮುಟ್ಟಿಸತಕ್ಕದ್ದು ಡಿಗ್ರಿಯನ್ನು ಯಾವರೀತಿ ಕೊಡಲಾಗುತ್ತಿದೆ ಎಂಬುದನ್ನು ವಿಮರ್ಶೆ ಮಾಡಿದಾಗ ಆ ವಿಚಾರವನ್ನು ವಿಮರ್ಶೆ ಮಾಡತಕ್ಕವರು ಯಾರು? ಶಿಕ್ಷಕರು, ಅಧ್ಯಾಪಕರು ಯಾರೋ ಒಬ್ಬರನ್ನೇ ನೇಮಕ ಮಾಡತಕ್ಕದ್ದು. ಇಲ್ಲಿಯವರೆಗೆ ಕೊಡತಕ್ಕ ಡಿಗ್ರಿಗಳನ್ನು ನೋಡಿದಾಗ ನಾವು ಕೆಳಮಟ್ಟಕ್ಕೆ ಬರುತ್ತಿದ್ದೇವೆ. ಇದಕ್ಕೆ ಚಾಲನೆ ಕೊಡತಕ್ಕ ಕೆಲಸವನ್ನು ಮಾಡಿದ್ದಾರೆ. ಎಷ್ಟು ಜನ ಅಧ್ಯಾಪಕರು ಅದಕ್ಕೋಸ್ಕರ ರಜ ಹೋಗುತ್ತಾರೆ, ಸಂಬಳವನ್ನು ಪಡೆಯುತ್ತಾರೆ, ಸಂಬಳವನ್ನು ಪಡೆದು ಸಂಪೂರ್ಣವಾಗಿ ವಿಶ್ಲೇಷಣೆ ಮಾಡಿಕೊಡತಕ್ಕ, ಸರಿಯಾದ ರೀತಿಯಲ್ಲಿ ನೋಡತಕ್ಕ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಯಾರಾದರೂ ಯಾವುದೇ ವಿಚಾರವನ್ನು ವಿಮರ್ಶೆಮಾಡಿ ಕೊಟ್ಟಾಗ ಅವರಿಗೆ ಡಾಕ್ಟರೇಟ್ ಕೊಡತಕ್ಕ ಪರಿಪಾಠವನ್ನು ಇಟ್ಟುಕೊಂಡಿದ್ದರು. ಅದನ್ನು ಸರಿಪಡಿಸತಕ್ಕ ಕೆಲಸವನ್ನು ಮಾಡಲು ಮಾನ್ಯ ಸಚಿವರು ಕೈ ಹಾಕಿದ್ದಾರೆ. ಇದು ಶ್ಲಾಘನೀಯವಾದ ಕೆಲಸ. ಏಕೆ ಡಾಕ್ಟರೇಟ್ ಕೊಡಬೇಕು, ವಿಶ್ಲೇಷಣೆ ಮಾಡತಕ್ಕ ವಿಚಾರ ಏನಿದೆ ಅದು ರಿಜೆಕ್ಟ್ ಆಗಿರತಕ್ಕದ್ದು ಒಂದೇ ಒಂದು ಸನ್ನಿವೇಶ ನಮ್ಮ ಮುಂದೆ ಇಲ್ಲ. ಇಂತಹ ವಿಚಾರಗಳನ್ನು, ನ್ಯೂನ್ಯತೆಗಳನ್ನು ಸರಿಪಡಿಸತಕ್ಕ ಕೆಲಸವನ್ನು ಮಾಡುತ್ತಿದ್ದಾರೆ. ಇವತ್ತು ರೋಸ್ಟರ್ ಸಿಸ್ಟಂ ಅನ್ನು ಸರ್ಕಾರ ಕಡ್ಡಾಯವಾಗಿ ಎಲ್ಲೋ ಒಂದು ಕಡೆ ಅಳವಡಿಸತಕ್ಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದವರಿಗೆ ಇನ್ನಿತರರಿಗೆ ಆದ್ಯತೆ ಕೊಡಬೇಕೆಂದು ವಿಚಾರ ಮಾಡಿದ್ದಾರೆ. ಅನೇಕ ವಿಶ್ವವಿದ್ಯಾನಿಲಯಗಳು ಈ ಪದ್ಧತಿಯನ್ನು ಪರಿಪಾಲಿಸಲಿಲ್ಲ. ಕಡ್ಡಾಯವಾಗಿ ಅದನ್ನು ಪಾಲಿಸಬೇಕು, ಯಾವುದೇ ಕಾರಣದಿಂದ ಸರ್ಕಾರದ ಕಾನೂನನ್ನು ಉಲ್ಲಂಘನೆ ಮಾಡುವುದಕ್ಕೆ ಸಾಧ್ಯವಿಲ್ಲದಂತೆ ಇನ್ನೊಂದು ತಿದ್ದುಪಡಿಯನ್ನು ತಂದಿದ್ದಾರೆ. ಈ ವಿಧೇಯಕವನ್ನು ತರತಕ್ಕ ಸಂದರ್ಭದಲ್ಲಿ ಅದು ಯಾವುದೇ ವಿಧೇಯಕವನ್ನು ತಂದಾಗ ಅದು ರಾಜ್ಯಕ್ಕೆ ಮಾರಕವಾಗಬಾರದು ಪೂರಕವಾಗಿರಬೇಕು. ಇದನ್ನು ವಿಶ್ಲೇಷಣೆ ಮಾಡುವಾಗ ಇದು ರಾಜ್ಯಕ್ಕೆ ಅನುಕೂಲವಾಗುತ್ತಿದೆ, ರಾಜ್ಯದ ಹಿತದೃಷ್ಟಿಯಿಂದ ಏನು ಅನುಕೂಲವಾಗುತ್ತದೆ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಮುಂದಿನ ಪೀಳಿಗೆಗೆ ಅನುಕೂಲವಾಗುವಂತೆ ಯಾವರೀತಿಯ ಸೂತ್ರಗಳನ್ನು ಅಳವಡಿಸಬೇಕು ಅದನ್ನೆಲ್ಲ ಮಾಡಿರುವುದರಿಂದ ಇದೊಂದು ಉತ್ತಮವಾದ ತಿದ್ದುಪಡಿಯಾಗಿದೆ. ತಿದ್ದುಪಡಿ ಮಾಡತಕ್ಕ ಸಂದರ್ಭದಲ್ಲಿ ಸರ್ಕಾರ ತೆಗೆದುಕೊಂಡಿರತಕ್ಕ ಕೆಲವು ಕ್ರಮಗಳು ಏನಿವೆ ಅವು ನಿಜವಾಗಿಯೂ ಕೂಡ ಶ್ಲಾಘನೀಯವಾದುದಾಗಿದೆ. ವಿರೋಧಪಕ್ಷದವರು ಟೀಕೆ ಮಾಡುವುದಕ್ಕೋಸ್ಕರ ಸರಿಯಿಲ್ಲವೆಂದು ಹೇಳಬಹುದು. ನಾನು ಆ ಮಾತು ಹೇಳುವುದಕ್ಕೆ ತಯಾರಾಗಿಲ್ಲ. ಮತ್ತೊಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಪ್ರಾಯೋಗಿಕವಾಗಿ ಐದು ವರ್ಷಗಳಲ್ಲಿ ಪುನರ್ ಪರಿಶೀಲನೆ ಮಾಡತಕ್ಕ ಕೆಲಸವನ್ನು ಇಟ್ಟುಕೊಂಡಿದ್ದಾರೆ. ನಾವು ಯೋಚನೆ ಮಾಡಬೇಕಾಗುತ್ತದೆ, 50 ವರ್ಷಗಳಿಂದ ಆಗದಿರತಕ್ಕ ಕೆಲಸದ ಬಗ್ಗೆ ಮರು-ಚಿಂತನೆಯನ್ನು ಮಾಡಿ ದಿಕ್ಸೂಚಿಯ ಕೆಲಸವನ್ನು ಮಾಡಬೇಕೆಂದು ಅಭಿಲಾಷೆಯನ್ನು ಇಟ್ಟುಕೊಂಡು ತಂದಿರತಕ್ಕ ತಿದ್ದುಪಡಿಗೆ ಯಾವುದೇ ಯೋಚನೆಯನ್ನು,

ಮಾಡದೆ ಒಳ್ಳೆಯನ್ನು ಕೊಡಬೇಕು. ವಿಶ್ವವಿದ್ಯಾನಿಲಯಗಳಲ್ಲಿ ಉಪಕುಲಪತಿಗಳು ಹೆಚ್ಚು, ರಿಜಿಸ್ಟ್ರಾರ್ ಹೆಚ್ಚು, ಅಧ್ಯಾಪಕರು ಹೆಚ್ಚು, ಡೀನ್‌ರವರು ಹೆಚ್ಚು ಎಂದು ಅಂದುಕೊಳ್ಳತಕ್ಕದ್ದು; ಇನ್ನೊಂದು ಕಡೆ ಸಿಂಡಿಕೇಟ್, ಸೆನೆಟ್‌ಗಳಲ್ಲಿ ಕೆಲಸ ಮಾಡತಕ್ಕ ನೌಕರರು ಯಾವ್ಯಾವ ಹಂತದಲ್ಲಿ ಯಾವ್ಯಾವ ರೀತಿಯಲ್ಲಿ ಮಾಲ್‌ಪ್ರಾಕ್ಟೀಸ್ ಮಾಡಿಕೊಂಡು ಹೋಗತಕ್ಕದ್ದು, ರಾಜ್ಯದ ಜನತೆಯಲ್ಲಿ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಓದತಕ್ಕ ಡಿಗ್ರಿಗಳನ್ನು ಪಡೆಯತಕ್ಕವರಿಗೆ ಯಾವ ರೀತಿ ತೊಂದರೆಯಾಗುತ್ತಿತ್ತು ಎಂಬುದು ತಮಗೆ ಗೊತ್ತಿದೆ. ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಅಭ್ಯಾಸ ಮಾಡಿದವರಿಗೆ ಬೇರೆ ಬೇರೆ ರಾಜ್ಯಗಳಲ್ಲಿ ಕೆಲಸ ಕೊಡುವುದಿಲ್ಲ. ಆ ಯೂನಿವರ್ಸಿಟಿಗಳ ಸರ್ಟಿಫಿಕೇಟ್‌ಗಳನ್ನು ನೋಡುವ ಪರಿಸ್ಥಿತಿಯಲ್ಲಿರಲಿಲ್ಲ. ಅದರ ಒಂದು ಚಿಂತನೆಯನ್ನು ಮಾಡಿಕೆಲಸವನ್ನು ಮಾಡಿತಕ್ಕದ್ದು ಏನಿದೆ ಅದನ್ನು ನಾವು ಒಪ್ಪಬೇಕಾಗುತ್ತದೆ. ನಾನೂ ಕೂಡ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಓದಿದ್ದೇನೆ. ಅನೇಕ ಸ್ನೇಹಿತರು ಮಾತನಾಡಿರತಕ್ಕ ದಾಟಿಯನ್ನು ನೋಡಿದ್ದೇನೆ. ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಪಾಠ ಹೇಳುವ ಉಪನ್ಯಾಸಕರು ಮತ್ತು ಅಧ್ಯಾಪಕರು ಮನೆಗಳಲ್ಲಿ ಟ್ಯೂಷನ್ ಹೇಳುವ ಪರಿಪಾಠವನ್ನು ಇಟ್ಟುಕೊಂಡಿದ್ದಾರೆ. ಅದಕ್ಕೆ ಕಡಿವಾಣವನ್ನು ಹಾಕುವುದರ ಜೊತೆಗೆ ಅನುದಾನ ಪಡೆಯತಕ್ಕ ಶಾಲಾ ಕಾಲೇಜುಗಳಲ್ಲಿ ಕೆಲಸ ಮಾಡತಕ್ಕ ಉಪನ್ಯಾಸಕರು ಮತ್ತು ಅಧ್ಯಾಪಕರುಗಳಿಗೆ ಕಡಿವಾಣವನ್ನು ಹಾಕಬೇಕಾಗುತ್ತದೆ. ನನಗೆ ತಿಳಿದ ಮಟ್ಟಿಗೆ ಬೆಂಗಳೂರು ನಗರದಲ್ಲಿ ಒಂದು ಸಬ್ಜೆಕ್ಟ್‌ಗೆ ನಾನೂರರಿಂದ ಐದು ಸಾವಿರ ರೂಪಾಯಿಗಳವರೆಗೆ ಕೊಟ್ಟರೂ ಪಾಠ ಹೇಳುವ ಪರಿಸ್ಥಿತಿಯಲ್ಲಿ ಇಲ್ಲ ..... ಹತ್ತು ಸಾವಿರ ರೂಪಾಯಿವರೆಗೆ ತೆಗೆದುಕೊಳ್ಳುತ್ತಾರೆ. ಕೆಲವು ಟ್ಯುಟೋರಿಯಲ್‌ಗಳ ಹೆಸರುಗಳನ್ನು ಹೇಳಿದರೆ ನಮಗೆ ಆಶ್ಚರ್ಯವಾಗುತ್ತದೆ. ಕೋಟ್ಯಾಂತರ ರೂಪಾಯಿ ಹಣವನ್ನು ಇವತ್ತು ಆ ಶಿಕ್ಷಕವರ್ಗದವರು, ಅಧ್ಯಾಪಕವರ್ಗದವರು ಈ ರೀತಿಯಲ್ಲಿ ದಂಧೆ ಮಾಡತಕ್ಕಂಥ ಪರಿಸ್ಥಿತಿ ಇದೆ. ಇದಕ್ಕೆ ಸರ್ಕಾರ ಎಲ್ಲೋ ಒಂದು ಕಡೆ ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಹೀಗೆ ಕಣ್ಣುಮುಚ್ಚಿಕೊಂಡು ಕುಳಿತುಕೊಂಡರೆ ಮುಂದೆ ಬರುತಕ್ಕಂಥ ಅನೇಕ ಅನಾಹುತಗಳನ್ನು ಎದುರಿಸಬೇಕಾಗುತ್ತದೆ. ಬಡವ, ಕಡುಬಡವನ ಮಕ್ಕಳು ಈಗ ವಿದ್ಯಾವಂತರಾಗಿ ಬದುಕುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇವತ್ತು ಏನು ಟ್ಯುಟೋರಿಯಲ್‌ಗಳನ್ನು ಮಾಡಿಕೊಳ್ಳುವಂಥಾದ್ದು ಮತ್ತು ಮನೆಗಳಲ್ಲಿ ಪಾಠ ಮಾಡತಕ್ಕಂಥಾದ್ದು ಮಾಡಿಕೊಂಡು ಸರ್ಕಾರಿ ಅರೆ ಸರ್ಕಾರಿ ಕೆಲಸ ಮಾಡತಕ್ಕಂಥ ಅಧ್ಯಾಪಕರು ಏನು ಈ ದಂಧೆ ಮಾಡುತ್ತಿದ್ದಾರೆ ಇದಕ್ಕೆ ಕಡಿವಾಣ ಹಾಕತಕ್ಕಂಥ ಈ ತಿದ್ದುಪಡಿ ಏನಿದೆ, ಇದು ನಿಜವಾಗಿಯೂ ಕೂಡ ಪ್ರಶಂಸನೀಯವಾದುದು ಎಂದು ಹೇಳಿ ಇಂತಹ ಅನೇಕ ಒಳ್ಳೆಯ ವ್ಯವಸ್ಥೆಗಳನ್ನು ತರತಕ್ಕಂಥ, ಮುಂದಿನ ಪೀಳಿಗೆಗೆ ಪೂರಕವಾಗಿರತಕ್ಕಂಥ ಈ ತಿದ್ದುಪಡಿಯನ್ನು ಪ್ರಾಯಶಃ ನಾನಾದರೂ ಸ್ವಾಗತ ಮಾಡಿ ತಾವು ಮಾತನಾಡಲು ಅನುಮತಿ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆ ಸಲ್ಲಿಸಿ ನನ್ನ ಮಾತುಗಳನ್ನು ಆಡುವುದಕ್ಕೆ ಮುಗಿಸುತ್ತೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :— ಮಾನ್ಯ ಅಧ್ಯಕ್ಷರೆ, ನಾನು ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯಾಗಿದ್ದವನು. ಈ ಸದನದ ಸದಸ್ಯನಾಗಿ ಎರಡು ಮಾತುಗಳನ್ನು ಆಡುವುದಕ್ಕೆ ತಾವು ನನಗೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು :— ಈಗ ನಾಲ್ಕು ಗಂಟೆಯಲ್ಲಿ ಎರಡೂ ಮುಕ್ಕಾಲು ಗಂಟೆಯನ್ನು ಬಿ.ಜೆ.ಪಿ.ಯವರೇ ತೆಗೆದುಕೊಂಡಿದ್ದಾರೆ. ಒಂದೊಂದು ಬಿಲ್ ಬಗ್ಗೆ ಸ್ವಲ್ಪ ಹೆಚ್ಚುಕಡಿಮೆ ಎಲ್ಲರೂ ಮಾತನಾಡುತ್ತಾರೆ. ನಿಮಗೆ ಮಾತನಾಡುವ ಹಕ್ಕು ಇದೆ. ಆದರೆ ನಿಮ್ಮ ನಾಯಕರು ವೇಳೆಯನ್ನು ಹಂಚಿಕೊಳ್ಳಬೇಕು, ಯಾರ್‍ಯಾರು ಯಾವ್ಯಾವ ಬಿಲ್ ಮೇಲೆ ಮಾತನಾಡಬೇಕು, ಯಾರ್‍ಯಾರು ಯಾವ ವಿಷಯದಲ್ಲಿ ಪರಿಣತರು ಎಂದು ನಿಮ್ಮ ನಾಯಕರು ಅರ್ಥಮಾಡಿಕೊಳ್ಳಬೇಕು.

ಶ್ರೀ ಧರ್ಮಸಿಂಗ್ :— ಮಾನ್ಯ ರಾಮದಾಸ್ ಅವರು ಮಾತನಾಡುವಾಗ ನಾನು ಎಲ್ಲರ ಪರವಾಗಿ ಮಾತನಾಡುತ್ತೇನೆ ಎಂದು ಹೇಳಿದ್ದರು.

ಅಧ್ಯಕ್ಷರು :— ಹೌದು, ಅವರು ಹೇಳಿದ್ದಾರೆ ಎಲ್ಲರ ಪರವಾಗಿ ನಾನೇ ಮಾತನಾಡುತ್ತೇನೆ ಎಂದು. ಈಗ ಮಾನ್ಯ ವಿಶ್ವೇಶ್ವರ ಹೆಗಡೆಯವರು ಅರ್ಧಗಂಟೆ ತೆಗೆದುಕೊಂಡರು, ಮಾನ್ಯ ಯೋಗೀಶ್ ಭಟ್ ಮತ್ತು ಮಾನ್ಯ ಜಗದೀಶ್ ಶೆಟ್ಟರ್ ಅವರು ಎಲ್ಲರೂ ಮಾತನಾಡಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ :— ನಮ್ಮ ಪಕ್ಷದಿಂದ ಒಬ್ಬರಿಗೂ ಮಾತನಾಡುವುದಕ್ಕೆ ಅವಕಾಶ ಇಲ್ಲ. ಎಲ್ಲರೂ ಬಿ.ಜೆ.ಪಿ. ಸದಸ್ಯರುಗಳೇ ಮಾತನಾಡುವವರು ಆಗಿಬಿಟ್ಟರೆ ಈ ಸದನದಲ್ಲಿ ನಾವು ಏನು ಮಾಡಬೇಕು?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :— ನಮಗೂ ಮಾತನಾಡುವುದಕ್ಕೆ ಹಕ್ಕು ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ :— ನಿಮ್ಮ ಪಕ್ಷದ ಮುಖಂಡರನ್ನು ಕೇಳಿ.

ಅಧ್ಯಕ್ಷರು :— ಆಯಿತು, ಎರಡು-ಎರಡು ನಿಮಿಷ ಮಾತನಾಡಿ.

(ಗೊಂದಲ)

(ಅನೇಕ ಸದಸ್ಯರುಗಳು ಏಕಕಾಲದಲ್ಲಿ ಮಾತನಾಡಿದರು)

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :— ಈ ಸರ್ವಾಧಿಕಾರ ಪ್ರವೃತ್ತಿ ಸರಿಯಲ್ಲ.

(ಗೊಂದಲ)

ಅಧ್ಯಕ್ಷರು :— ತಾವು ಮುಗಿಸಿ. ಅವತ್ತು ತೀರ್ಮಾನವಾಗಿದೆ ಸದನ ನಡೆಯುವುದು ಮೂರುಗಂಟೆವರೆಗೆ ಎಂದು. ಅವತ್ತು ನಿಮ್ಮ ನಾಯಕರು ಹೇಳಬೇಕಾಗಿತ್ತು ನಾಲ್ಕುಗಂಟೆ, ಐದುಗಂಟೆ ಬೇಕಾಗಿತ್ತು ಎಂದು. ನೀವೇ ಎರಡೂಮುಕ್ಕಾಲು ಗಂಟೆ ತೆಗೆದುಕೊಂಡುಬಿಟ್ಟರೆ ಹೇಗೆ? ಬೇರೆ ಯಾರಿಗೂ ಅವಕಾಶ ಬೇಡವೆ?

(ಗೊಂದಲ)

ಶ್ರೀ ಧರ್ಮಸಿಂಗ್ :— ತಾವು ಅವರನ್ನು ನಿಯಂತ್ರಣ ಮಾಡಬೇಕು. ಎಲ್ಲರಿಗೂ ಮಾತನಾಡುವುದಕ್ಕೆ ಏಕೆ ಅವಕಾಶ ಕೊಡಬೇಕು?

ಶ್ರೀ ಡಿ.ಬಿ. ಚಂದ್ರೇಗೌಡ :— ನನ್ನ ಒಂದು ಸಬ್‌ಮಿಶನ್ ಇದೆ. ಇನ್ನೂ ಎರಡು-ಮೂರು ಬಿಲ್‌ಗಳು ಇವೆ. ಗವರ್ನಮೆಂಟ್ ಬಿಸಿನೆಸ್ ಮುಗಿಯುವವರೆಗೆ ಸದನ ಮುಗಿಯುವ ಹಾಗಿಲ್ಲ.

ಅಧ್ಯಕ್ಷರು :— ನಿಜ. ರಾತ್ರಿ ಒಂಬತ್ತು ಗಂಟೆಯಾದರೂ ಪರವಾಗಿಲ್ಲ, ಎಲ್ಲ ಬಿಲ್‌ಗಳು ಪಾಸ್ ಆಗಬೇಕು.

ಶ್ರೀ ಡಿ.ವಿ. ಸದಾನಂದಗೌಡ :— ನಾನು ಒಂದು ಮನವಿ ಮಾಡುತ್ತೇನೆ. ಮಾನ್ಯ ಕಾನೂನು ಮಂತ್ರಿಗಳು ದಯವಿಟ್ಟು ಗಮನಿಸಬೇಕು. ಈಗ ನಮ್ಮ ಗಮನಕ್ಕೆ ಬಂದಿದ್ದು ಏನೆಂದರೆ ಮೇಲ್ಮನೆಯಲ್ಲಿ ಒಂದು ತೀರ್ಮಾನವಾಗಿದೆ. ಅದು ಏನೆಂದರೆ, ನಿನ್ನೆ ದಿವಸ ಏನೆಲ್ಲ ಬಿಸಿನೆಸ್ ಆಗಿದೆ ಅದಕ್ಕಿಂತ ಮುಂದುವರೆದು ಯಾವುದೇ ಹೊಸ ಬಿಲ್‌ಗಳನ್ನು ತೆಗೆದುಕೊಳ್ಳುವುದಿಲ್ಲ ಎಂದು ಅಲ್ಲಿ ಮಾತುಕತೆಯಾಗಿದೆ ಎಂದು ಗೊತ್ತಾಗಿದೆ.

ಅಧ್ಯಕ್ಷರು :— ಆ ವಿಷಯ ನಮಗೆ ಗೊತ್ತಿಲ್ಲ. ಮೇಲ್ಮನೆಯಲ್ಲಿ ಏನಾಗಿದೆ ಎಂದು ನಮಗೆ ಗೊತ್ತಿಲ್ಲ. ಮಾನ್ಯ ಶಂಕರಲಿಂಗೇಗೌಡರೇ, ನೀವು ಎರಡು ನಿಮಿಷ ಮಾತನಾಡಿ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) :— ಮಾನ್ಯ ಅಧ್ಯಕ್ಷರೇ, ಶಿಕ್ಷಣ ಎಂದರೆ ಬರೀ ಪುಸ್ತಕ ಜ್ಞಾನ ಅಲ್ಲ. ಅದು ಮಾನವೀಯತೆಯ ವಿಕಾಸ ಎಂದು ನಂಬಿಕೆ ಇಟ್ಟುಕೊಂಡಿರುವ ವಿಶ್ವವಿದ್ಯಾನಿಲಯದ ಮೇಲೆ ಗದಾಪ್ರಹಾರ ಮಾಡತಕ್ಕಂಥ ಈ ಮಸೂದೆ ಕರಾಳ ಮಸೂದೆ ಎಂದು ಹೇಳಿದರೆ ತಪ್ಪಾಗಲಾರದು. ಈಗಾಗಲೇ ಇದರಲ್ಲಿ ಅಡಕವಾಗಿರತಕ್ಕಂಥ ಒಂದೊಂದು ಅಕ್ಷರ ಕೂಡ ಈ ವಿಶ್ವವಿದ್ಯಾನಿಲಯದ ಘನತೆ, ಗೌರವವನ್ನು ಕುಂದಿಸತಕ್ಕಂಥ ವಿಷಯವಾಗಿದೆ. ವಿಶ್ವವಿದ್ಯಾನಿಲಯಕ್ಕೆ ಇರುವ ಆ ಸ್ವಾಯತ್ತತೆ ಮೇಲೆ ಈಗ ರಾಜಕೀಯ ಪ್ರವೇಶ ಮಾಡಬೇಕು ಎನ್ನತಕ್ಕಂಥ ದಿಕ್ಕಿನಲ್ಲಿ ಹೊರಟಿರತಕ್ಕಂಥ ಈ ಮಸೂದೆಯನ್ನು ಖಂಡತುಂಡವಾಗಿ ನಾನು ವಿರೋಧಿಸುತ್ತೇನೆ. ಈ ವಿಷಯದಲ್ಲಿ

ಈಗಾಗಲೇ ಕಾಲೇಜು ಶಿಕ್ಷಣ ಶುಲ್ಕವನ್ನು ಜಾಸ್ತಿ ಮಾಡಿದರು. 352 ಇದ್ದದ್ದು 862ಕ್ಕೆ ಹೋಯಿತು. ಖಾಸಗಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಎಂ.ಎಲ್.ಎ.ಗಳನ್ನು ಅಟ್ಯಾಕ್ ಮಾಡುವುದು, ಮಂತ್ರಿಗಳನ್ನು ಅಟ್ಯಾಕ್ ಮಾಡುವುದು, ವಿಧಾನಸೌಧಕ್ಕೆ ಮುತ್ತಿಗೆ ಹಾಕುವುದು ಇಂತಹ ಹಲವಾರು ಕೆಲಸವನ್ನು ಮಾಡಿಕೊಂಡುಬಂದಿದ್ದಾರೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ತಿಂಗಳ ಸಮಯ ಕೊಟ್ಟರೂ ಕೂಡ ಇದುವರೆಗೂ ಅದನ್ನು ಕೂಡ ಮುಗಿಸಿಲ್ಲ. ವಿಶ್ವವಿದ್ಯಾನಿಲಯಕ್ಕೆ ಏನಾದರೂ ರಾಜಕೀಯ ಪ್ರವೇಶ ಮಾಡಿ ಅದರದ್ದೇ ಆಗಿರತಕ್ಕಂಥ ಸತ್ವವನ್ನು ಹಾಳು ಮಾಡಲು ಹೊರಟಿರತಕ್ಕಂಥ ಈ ಮಸೂದೆಯನ್ನು ನಿಜವಾಗಿಯೂ ತಿದ್ದುಪಡಿ ಮಾಡಬೇಕಾದದ್ದು ಅನಿವಾರ್ಯವೆಂದು ನಾನು ಹೇಳುತ್ತೇನೆ. ಇವತ್ತು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮುಕ್ತ ವಿಶ್ವವಿದ್ಯಾನಿಲಯ ತನ್ನದೇ ಆಗಿರತಕ್ಕಂಥ ನೈತಿಕ, ಧಾರ್ಮಿಕ ಹಿನ್ನೆಲೆಯನ್ನು ಇಟ್ಟುಕೊಂಡು, ಸಾಮಾಜಿಕ ಕಳಕಳಿಯನ್ನು ಇಟ್ಟುಕೊಂಡು ವಿದ್ಯಾರ್ಥಿಗಳ ಬದುಕಿಗೆ ಚೈತನ್ಯ ಕೊಡತಕ್ಕಂಥ ಕೆಲಸ ಮಾಡುತ್ತಿವೆ. ಇದನ್ನು ಜಾಯಿಂಟ್ ಸೆಲೆಕ್ಷನ್ ಕಮಿಟಿಗೆ ಒಪ್ಪಿಸಬೇಕು....

(ಗೊಂದಲ)

ಅಧ್ಯಕ್ಷರು :— ಜಾಯಿಂಟ್ ಸೆಲೆಕ್ಟ್ ಕಮಿಟಿ.

(ಗೊಂದಲ. ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :— ನೀವು ನಗಬೇಡಿ. ಒಂದು ವಿಷಯ ಹೇಳುತ್ತೇನೆ. ನಿಮ್ಮಲ್ಲಿರುವವರೆಲ್ಲರಿಗಿಂತ ನನ್ನಲ್ಲಿ ಹೆಚ್ಚು ಜಾಣತನ ಇದೆ. ನನ್ನನ್ನು ಅಜ್ಞಾನಿ ಎಂದು ತಿಳಿದುಕೊಂಡರೆ ಅದು ಅವಿವೇಕತನ. ನಾನೂ ಕೂಡ ಓದಿದ್ದೇನೆ...

ಅಧ್ಯಕ್ಷರು :— ಯೂನಿವರ್ಸಿಟಿ ಆಕ್ಟ್ ಬಗ್ಗೆ ಮಾತನಾಡಿ.

(ಗೊಂದಲ. ಕೆಲವು ಸದಸ್ಯರು ಏಕಕಾಲದಲ್ಲಿ ಮಾತನಾಡಿದರು)

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :— ಇದೇನು xxx

(ಗೊಂದಲ)

ಅಧ್ಯಕ್ಷರು :— (ವರದಿಗಾರರಿಗೆ) ಮಾರ್ಕೆಟೋ, ವಿಧಾನಸೌಧವೋ ಎಂದು ಹೇಳಿದ್ದನ್ನು ತೆಗೆಯಿರಿ. ಶಂಕರಲಿಂಗೇಗೌಡರೇ, ನಿಮಗೆ ಕೊಟ್ಟಿದ್ದು ಎರಡು ನಿಮಿಷ ಮುಗಿಯಿತು. ಇನ್ನೊಂದು ನಿಮಿಷ ಕೊಡುತ್ತೇನೆ. ನೀವು ನಿಲ್ಲಿಸದಿದ್ದರೆ ನಾನು ಎದ್ದುನಿಂತುಕೊಳ್ಳಬೇಕಾಗುತ್ತದೆ.

---

xxx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :— ವಿಶ್ವವಿದ್ಯಾನಿಲಯದ ಮೇಲೆ ಗದಾಪ್ರಹಾರ ಮಾಡುವುದನ್ನು ಬಿಡಬೇಕು. ನಮ್ಮ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ವಿಶ್ವವಿದ್ಯಾನಿಲಯ ಮೇಲೆ ರಾಜಕೀಯ ಪ್ರೇರೇಪಿತವಾಗಿರತಕ್ಕಂಥ ಏನಾದರೂ ಕೆಟ್ಟ ವಿಷಯವನ್ನು ಸೇರಿಸಿದ್ದೇ ಆದರೆ ಅದು ಸರಿಯಲ್ಲ. ಇದಕ್ಕೆ ನಾನು ಕೂಡ ವಿದ್ಯಾರ್ಥಿಗಳ ಜತೆಗೂಡಿ ಬೀದಿಗಿಳಿಯಬೇಕಾಗುತ್ತದೆ...

(ಗೊಂದಲ)

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :— ಇದೇನು ನೀವು ಆಡಿದ್ದೇ ಆಟವಾಗಿದೆಯೇನು?

(ಗೊಂದಲ)

ಅಧ್ಯಕ್ಷರು :— ಮೂರು-ನಾಲ್ಕು ನಿಮಿಷ ಆಯಿತು. ಬೇಗ ಮುಗಿಸಿಬಿಡಿ.

ಶ್ರೀ ಕೆ.ಎಸ್. ಸುಬ್ಬಾರೆಡ್ಡಿ :— ಒಂದು ನಿಮಿಷ...

ಅಧ್ಯಕ್ಷರು :— ನೀವು 15 ಜನ ಮಾತನಾಡಿದ್ದೀರಿ. ಸಾಧ್ಯವಿಲ್ಲ, ದಯವಿಟ್ಟು ಕ್ಷಮಿಸಿ.

ಶ್ರೀ ಹೆಚ್‌ಎಸ್. ಶಂಕರಲಿಂಗೇಗೌಡ :— ಈ ವಿಧೇಯಕವನ್ನು ನಾನು ವಿರೋಧಿಸುತ್ತೇನೆ ಮತ್ತು ವೈಯಕ್ತಿಕವಾಗಿ ನಾನು ಈಗ ಬಾವಿಗೆ ಬರುತ್ತೇನೆ.

ಒಬ್ಬರು ಮಾನ್ಯ ಸದಸ್ಯರು :— ನಿಮಗೆ ಪಾರ್ಟಿ ಇಲ್ಲವೇನು? ವೈಯಕ್ತಿಕವಾಗಿ ಹೇಗೆ ಬಾವಿಗೆ ಬರುತ್ತೀರಿ?

(ಗೊಂದಲ)

(ಹಲವು ಸದಸ್ಯರು ಏಕಕಾಲದಲ್ಲಿ ಮಾತನಾಡಿದರು)

ಶ್ರೀ ಡಿ.ಬಿ. ಚಂದ್ರೇಗೌಡ :— ಅಧ್ಯಕ್ಷರ ಜತೆ ಮಾತನಾಡಿ. ಆದರೆ ಅಧ್ಯಕ್ಷರಿಗೆ ಜೋರು ಮಾಡಬೇಡಿ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :— ನಾನು ಜೋರು ಮಾಡುತ್ತಿಲ್ಲ. ನನ್ನ ಬಾಯಿ, ಗಂಟಲು ಇರುವುದೇ ಹಾಗೆ. ನಾನೇನು ಮಾಡಲಿ?

(ಗೊಂದಲ)

ಅಧ್ಯಕ್ಷರು :— ಶಂಕರಲಿಂಗೇಗೌಡರೆ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :— ನಮ್ಮದು ಒಳಗೆ ಅಂತರಂಗದಲ್ಲಿ ವಿಷ ಇಲ್ಲ. ಡಿ.ವಿ.ಜಿ.ಯವರದ್ದು ಒಂದು ವಚನ ಇದೆ. ಅದು ಹೀಗಿದೆ-

ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಸುರಿಯೆ,
ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ,
ಎಲ್ಲರೊಳು ಒಂದಾಗು ಮಂಕುತಿಮ್ಮ

ಈ ತತ್ವವನ್ನು ಅಳವಡಿಸಿಕೊಂಡಿರುವವರು ನಾವು.

ಅಧ್ಯಕ್ಷರು :— ದಯವಿಟ್ಟು ಕುಳಿತುಕೊಳ್ಳುತ್ತೀರಾ? ಮಂತ್ರಿಗಳು ಹೇಳಿ.

+ ಡಾ: ಜಿ. ಪರಮೇಶ್ವರ್ (ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಮಂತ್ರಿ) :— ಸನ್ಮಾನ್ಯ ಅಧ್ಯಕ್ಷರೇ, ನಿನ್ನೆಯಿಂದ ಕೂಡ ಬಹಳಷ್ಟು ಜನ ವಿರೋಧಪಕ್ಷದ ನಾಯಕರು, ಇತರ ಪಕ್ಷಗಳ ಪ್ರಮುಖ ನಾಯಕರುಗಳು, ಅನುಭವಿ ನಾಯಕರುಗಳು ಮತ್ತು ಅನೇಕ ಜನ ಗೌರವಾನ್ವಿತ ಸದಸ್ಯರುಗಳು ಈ ಮಸೂದೆ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿ ಕೂಡ ನನ್ನ ಬಗ್ಗೆ ಒಳ್ಳೆಯ ಅಭಿಮಾನದ ಮಾತುಗಳನ್ನು ಆಡಿದ್ದಾರೆ. ಕೆಲವರು ಈ ಬಿಲ್ ಚೆನ್ನಾಗಿಲ್ಲವೆಂದು ಮಾತನಾಡುವುದರ ಜೊತೆಗೆ ಚೆನ್ನಾಗಿ ಇದೆ ಎಂದು ಕೂಡ ಅನೇಕ ಸದಸ್ಯರು ಹೇಳಿದ್ದಾರೆ. ತಾವು ಕೂಡ ಇದರಲ್ಲಿ ಒಳ್ಳೆಯ ಅಂಶ ಇದೆಯೆಂದು ಹೇಳಿದ್ದೀರಿ. ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮತ್ತು ಎಲ್ಲ ಹಿರಿಯ ನಾಯಕರಿಗೆ, ಮಾಜಿ ಸಚಿವರಾದಂಥ ವಿಶೇಷವಾಗಿ ಶ್ರೀ ಸೋಮಶೇಖರ್ ಅವರಿಗೆ ಮತ್ತು ಎಲ್ಲ ಗೌರವಾನ್ವಿತ ಸದಸ್ಯರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇವತ್ತು ಈ ಮಸೂದೆಯನ್ನು ತಂದಿರುವ ಉದ್ದೇಶವನ್ನು ಕೂಡ ನಾನು ಮೊದಲೇ ಪ್ರಸ್ತಾಪ ಮಾಡಿದ್ದೇನೆ. ಯಾವ ಕಾರಣಕ್ಕಾಗಿ ಈ ಮಸೂದೆಯನ್ನು ತರಬೇಕಾಯಿತು? 1976 ರಿಂದ ಇಲ್ಲಿಯವರೆಗೆ ಈ ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣ ಬದಲಾಗಲಿಲ್ಲವೇ? 24 ವರ್ಷಗಳಾದರೂ ಕೂಡ ಶಿಕ್ಷಣ ಬದಲಾಗಲಿಲ್ಲವೇ? ಇಲ್ಲಿಯವರೆಗೆ ಈ ಬದಲಾವಣೆಯಲ್ಲಿ ನಾವು ಇರತಕ್ಕಂಥ ಮಸೂದೆ, ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡುವುದಕ್ಕೆ ಆಯಿತೆ? ಇದನ್ನು ನಾವು ಪ್ರಶ್ನೆ ಮಾಡಿಕೊಂಡು ನೋಡುವಾಗ, ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡಿದ್ದೇವೆ. ಅನೇಕ ಜನ ಸದಸ್ಯರು ಮಾತನಾಡತಕ್ಕ ಸಂದರ್ಭದಲ್ಲಿ ಯಾರ ಜೊತೆಯೂ ಇದರ ಬಗ್ಗೆ ಚರ್ಚೆ ಮಾಡಲಿಲ್ಲ. ಏಕಾಏಕಿ ಈ ಮಸೂದೆಯನ್ನು ತಂದಿದ್ದೀರಿ ಎನ್ನುವ ಮಾತನ್ನು ಕೂಡ ಆಡಿದರು. ನಾನು ವಿಶೇಷವಾಗಿ ಮಾನ್ಯ ಸೋಮಶೇಖರ್‌ರವರನ್ನು ಅಭಿನಂದಿಸುತ್ತೇನೆ. ನಾನು ಮೊದಲೇ ಹೇಳುವಾಗ ಹೇಳಬೇಕಾಗಿತ್ತು. ಆದರೆ, ಅವರು ಮಾತನಾಡಿದ ಮೇಲೆ, ಅನೇಕ ವಿಷಯಗಳನ್ನು ಅವರು ಹೇಳುತ್ತಾರೆ, ಆದಾದ ನಂತರ ಅವರಿಗೆ ನಾನು

ವಿಶೇಷವಾದ ಅಭಿನಂದನೆಯನ್ನು ಸಲ್ಲಿಸಬೇಕೆಂದು ಇದ್ದೆ. ಅವರು ಬಹಳ ಪ್ರಯತ್ನ ಮಾಡಿದರು. ಈ ನವನೀತರಾವ್ ಸಮಿತಿಯ ವರದಿ ಬಂದ ನಂತರ ವಿಶೇಷವಾಗಿ ಅವರು ವಿಶ್ವವಿದ್ಯಾನಿಲಯದ ವೈಸ್-ಚಾನ್ಸಲರುಗಳನ್ನು, ಪ್ರಾಧ್ಯಾಪಕರುಗಳನ್ನು ಇದಕ್ಕೆ ಸಂಬಂಧಪಟ್ಟ ಅನೇಕ ಜನರನ್ನು ಸೇರಿಸಿ, 16 ಜನರ ಸಮಿತಿಯನ್ನು ಮಾಡುವುದು ಅಷ್ಟೇ ಅಲ್ಲ. ವೈಯಕ್ತಿಕವಾಗಿ ಅವರೂ ಕೂಡ ಅನೇಕ ಜನರ ಜೊತೆ ಚರ್ಚೆ ಮಾಡಿ ಒಂದು ಡ್ರಾಫ್ಟ್‌ನ್ನು ಕೂಡ ತಯಾರು ಮಾಡಿ ಇಟ್ಟಿದ್ದರು. ಇವತ್ತು ನಮ್ಮ ಸರ್ಕಾರ ಬಂದನಂತರ, ಅನೇಕ ಕ್ಷೇತ್ರಗಳಲ್ಲಿ, ಅನೇಕ ಬದಲಾವಣೆಯನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡುವಾಗ, ಶಿಕ್ಷಣ ಕ್ಷೇತ್ರದಲ್ಲೂ ಕೂಡ ಇವತ್ತು ಮಹತ್ತರವಾದ ಬದಲಾವಣೆಯಾಗಬೇಕು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದಲ್ಲಿ, ಉನ್ನತ ಶಿಕ್ಷಣದಲ್ಲಿ ಒಟ್ಟಾರೆ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಯಾಗಬೇಕು ಎನ್ನುವಂಥ ಮಹತ್ತರವಾದ ಧ್ಯೇಯೋದ್ದೇಶಗಳನ್ನು ನಮ್ಮ ಸರ್ಕಾರ ಇಟ್ಟುಕೊಂಡು ಇವತ್ತಿನದಿವಸ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಅದು ಇನ್‌ಫರ್ಮೇಷನ್ ಟೆಕ್ನಾಲಜಿ ಎಜುಕೇಷನ್ ಇರಬಹುದು, ಈ ಎಜುಕೇಷನ್ ಕೊಡುವಾಗ ಇದಕ್ಕೆ ಪ್ರತ್ಯೇಕವಾಗಿ ಒಂದು ಐ.ಟಿ. ಎಜುಕೇಷನ್ ಬೋರ್ಡನ್ನು ಕೂಡ ಇವತ್ತು ನಾವು ರಚನೆ ಮಾಡಿದ್ದೇವೆ. ಇದೇ ರೀತಿ ಅನೇಕ ಬದಲಾವಣೆಗಳನ್ನು ತರುವ ಹಿನ್ನೆಲೆಯಲ್ಲಿ ಈ ಮಸೂದೆಯನ್ನು ನಾನು ಸದನದಲ್ಲಿ ಮಂಡಿಸಿದ್ದೇನೆ. ಒಂದು ವಿಷಯವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಬಹಳಷ್ಟು ಜನ ಮಾತನಾಡಿ, ರಾಜ್ಯಪಾಲರಿಗೆ ಇದ್ದ ಅಧಿಕಾರವನ್ನು ಕಿತ್ತುಕೊಂಡರು ಎಂದು ಹೇಳಿದರು. ರಾಜ್ಯಪಾಲರನ್ನು ನಾವು ಈ ಸದನದಲ್ಲ ಚಾನ್ಸಲರ್ ಎಂದು ಹೇಳಿಕೊಂಡರೆ ಬಹುಶಃ ಕುಲಪತಿಗಳು ಎಂದು ಹೇಳಿಕೊಂಡರೆ ಚೆನ್ನಾಗಿರುತ್ತದೆ. ಏಕೆಂದರೆ, ರಾಜ್ಯಪಾಲರ ದೃಷ್ಟಿಯಲ್ಲಿ, ರಾಜ್ಯಪಾಲರ ಹೆಸರಿನಲ್ಲಿ ನಾವು ಇಲ್ಲಿ ಯಾವುದೇ ರೀತಿಯಲ್ಲಿ ಚರ್ಚೆ ಮಾಡುವಂಥಾದ್ದು ಅಲ್ಲ. ಅದರ ಬದಲು ಸಂವಿಧಾನದಲ್ಲಿ ಕೂಡ 361ನೇ ಆರ್ಟಿಕಲ್ ನಲ್ಲಿ ಹೇಳಿದ್ದಾರೆ. ಚಾನ್ಸಲರ್ ಎನ್ನುವಂಥ ಶಬ್ದ ಸರಿ. ಆದರೆ ಒಬ್ಬ ರಾಜ್ಯಪಾಲರು ಚಾನ್ಸಲರಾಗಿ ಅವರಿಗೆ ಜ್ಯುಡಿಷಿಯಲ್ ಇಮ್ಯುನಿಟಿ ಕೊಡಲಿಲ್ಲ. ಇದನ್ನು ನಾವು ಯೋಚನೆ ಮಾಡಬೇಕು. ರಾಜ್ಯಪಾಲರು ಚಾನ್ಸಲರ್ ಆದಾಗ, ಆ ಚಾನ್ಸಲರ್‌ಗೆ ಜ್ಯುಡಿಷಿಯಲ್ ಇಮ್ಯುನಿಟಿ ಕೂಡ ಕೊಡಲಿಲ್ಲ. ಅಂದರೆ, Chancellor is separate entity. ಆ ಕಾರಣಕ್ಕಾಗಿ ಇವತ್ತಿನ ದಿವಸ ಸರ್ಕಾರ ವಿಶ್ವವಿದ್ಯಾನಿಲಯಗಳನ್ನು ಹಿಡಿತದಲ್ಲಿಟ್ಟುಕೊಳ್ಳುತ್ತದೆ ಎಂದರೆ ಅರ್ಥ ಏನಿದೆ? ಯಾರು ಸರ್ಕಾರ? ರಾಜಕಾರಣ ಮಾಡುತ್ತೀರಿ ಎಂದರೆ ಏನರ್ಥ ನಾವೆಲ್ಲರೂ ರಾಜಕಾರಣಿಗಳು. ಹಾಗಾದರೆ ನಾವು ಇಲ್ಲಿ ಚರ್ಚೆ ಮಾಡುವಂಥಾದ್ದು ಮತ್ತು ನಾವು ಮಾಡುವಂಥ ಪ್ರಕ್ರಿಯೆ ಇದು ಕೆಟ್ಟದ್ದೇ? ವಿಶ್ವವಿದ್ಯಾನಿಲಯಗಳಲ್ಲಿ ನೀವು ರಾಜಕಾರಣ ಮಾಡುತ್ತೀರಿ, ಹಸ್ತಕ್ಷೇಪ ಮಾಡುತ್ತೀರಿ ಎಂದು ಹೇಳಿದರೆ, what is the responsibility of this government? Should we leave out entire thing to the universities? Our government,

is it not responsible? ಇದು ಒಂದು ದೊಡ್ಡ ಪ್ರಶ್ನೆಯಾಗುತ್ತದೆ. Why should we feel that the government is at fault all the time? ಸರ್ಕಾರಕ್ಕೆ ಜವಾಬ್ದಾರಿ ಇಲ್ಲವೇ? ಇವತ್ತು ಕರ್ನಾಟಕ ರಾಜ್ಯದಲ್ಲಿ 4-5 ಕೋಟಿ ಜನ ನಮ್ಮೆಲ್ಲರನ್ನು ಆರಿಸಿ ಇಲ್ಲಿಗೆ ಕಳುಹಿಸಿರುವಾಗ ಒಂದು ಸರ್ಕಾರ ಸೃಷ್ಟಿಯಾಗುತ್ತದೆ. ಹಾಗಾದರೆ ಆ ಸರ್ಕಾರಕ್ಕೆ ಒಂದು ವಿಶ್ವವಿದ್ಯಾನಿಲಯದಲ್ಲಿ, ಆಡಳಿತಾತ್ಮಕವಾದ ಅದರ ಒಂದು ಚೌಕಟ್ಟಿನಲ್ಲಿ ಇರುತ್ತದೆಂದು ಹೇಳುವುದಾದರೆ ಅದನ್ನು, ನೀವು ರಾಜಕೀಯ ಮಾಡುತ್ತೀರಿ, government should not interfere in the universities. ಗವರ್ನಮೆಂಟ್ ಎಂದರೆ ಯಾರು? ಈ ಪ್ರಶ್ನೆ ಉದ್ಭವವಾಗುತ್ತದೆ. ಆ ಕಾರಣಕ್ಕಾಗಿ ನಾನು ರಾಜ್ಯಪಾಲರ ಅಧಿಕಾರವನ್ನು, ಚಾನ್ಸಲರ ಅಧಿಕಾರವನ್ನು ಕಿತ್ತುಕೊಂಡಿದ್ದೇವೆ ಎನ್ನುವ ಮಾತಿದೆಯಲ್ಲ, ಅದು ಬಹಳ ದೊಡ್ಡ ಪ್ರಶ್ನೆಯಾಗುತ್ತದೆ. ಏಕೆಂದರೆ, ಸರ್ಕಾರಕ್ಕೂ ಕೂಡ ಅಷ್ಟೇ ಜವಾಬ್ದಾರಿ ಇದೆ. ಅದಕ್ಕಿಂತ ಹೆಚ್ಚು ಜವಾಬ್ದಾರಿ ಕೂಡ ಸರ್ಕಾರಕ್ಕೆ ಇದೆ. ಇವತ್ತು ರಾಜ್ಯಪಾಲರಿಗೆ ಮತ್ತು ಆ ಸ್ಥಾನದ ಬಗ್ಗೆ ನನಗೆ ಗೌರವ ಇದೆ. ನಮ್ಮೆಲ್ಲರಿಗೆ ಯಾವರೀತಿ ಗೌರವ ಇದೆ, ಸಂವಿಧಾನಾತ್ಮಕವಾಗಿ ನಾವು ಯಾವರೀತಿ ಗೌರವವನ್ನು ಅವರಿಗೆ ಕೊಟ್ಟಿದ್ದೇವೆ, ಆ ಗೌರವವನ್ನು ನಾವು ಯಾವುದೇ ಕಾರಣಕ್ಕೂ, ಯಾವುದೇ ಸರ್ಕಾರ ಕಳೆಯುವುದಕ್ಕಾಗುವುದಿಲ್ಲ. ಇವತ್ತು ನನಗೂ ಕೂಡ ಅದರ ಅರಿವು ಇದೆ. ಆದರೆ, ಸರ್ಕಾರ ಹೊರಡಿಸಿದಾಗ, ಈ ಒಂದು ಪ್ರಕ್ರಿಯೆ ಆಗುತ್ತದೆಂದು ಹೇಳಿದಾಗ ಅದು ಸರಿ ಕಾಣಿಸುವುದಿಲ್ಲ ಎನ್ನುವಂಥ ಅಂಶ ಇಲ್ಲ. ಒಂದು ಮಾತನ್ನು ನಾನು ಬಹಳ ನೋವಿನಿಂದ ಹೇಳುತ್ತೇನೆ. ರಾಜಕೀಯವನ್ನು ಮಾಡುವಂಥ ತಾವೆಲ್ಲರೂ ಕೂಡ ಏನೋ ಒಂದು ದುರುದ್ದೇಶದಿಂದ ಸರ್ಕಾರ ಈ ಮಸೂದೆಯನ್ನು ತಂದಿದೆ ಎಂದು ಕೆಲವರು ಹೇಳಿದರು ಹಾಗಾದರೆ, ಕಾಂಗ್ರೆಸ್ ಪಕ್ಷದ ಸರ್ಕಾರ ಕರ್ನಾಟಕ ರಾಜ್ಯದ ಜನತೆಗೆ, ಚುನಾವಣೆಯಲ್ಲಿ ಹೋದಾಗ, ನಾವು ದುರುದ್ದೇಶದಿಂದ ಆಡಳಿತವನ್ನು ಮಾಡುತ್ತೇವೆಂದು ಹೇಳಿಕೊಂಡು ಬಂದಿದ್ದೇವೆಯೇ? ಸದುದ್ದೇಶದಿಂದ ಈ ರಾಜ್ಯದ ಬೆಳವಣಿಗೆಯನ್ನು, ಅಭಿವೃದ್ಧಿಯನ್ನು ಮಾಡುತ್ತೇವೆಂದು ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ನಾವೆಲ್ಲರೂ ಕೂಡ ಜನಗಳ ಮುಂದೆ ಹೋಗಿರತಕ್ಕಂಥಾದ್ದು. ಆ ಒಂದು ಹಿನ್ನೆಲೆಯಲ್ಲಿ ನಾವೆಲ್ಲರೂ ಒಂದು ಸರ್ಕಾರವನ್ನು ಮಾಡಿರುವಂಥಾದ್ದು. ಈ ದೃಷ್ಟಿಯಿಂದ ಏನೋ ವ್ಯತ್ಯಾಸ ಇದೆ,ಎಂದು ಹೇಳಿದರು. ಸ್ವಾಮಿ, ನಾನು ಸ್ಪಷ್ಟೀಕರಣ ಮಾಡುತ್ತಾ ಇದ್ದೆ. ಮೈಸೂರು ವಿಶ್ವವಿದ್ಯಾನಿಲಯದ ಉಪ-ಕುಲಪತಿಗಳನ್ನು ನೇಮಕ ಮಾಡುವಾಗ ಮತ್ತು ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ಉಪ-ಕುಲಪತಿಗಳನ್ನು ನೇಮಕ ಮಾಡುವಾಗ ಸರ್ಕಾರ ಯಾವತ್ತೂ ಕೂಡ ಒಂದು ಪಾನೆಲ್ ಕಳುಹಿಸಲಿಲ್ಲ. ನಾವು ರಾಜ್ಯಪಾಲರ ಜೊತೆ ಅದರ ಬಗ್ಗೆ ಚರ್ಚೆ ಮಾಡಲಿಲ್ಲ. ಈ ಕಾರಣಕ್ಕೋಸ್ಕರ ಮುಖ್ಯಮಂತ್ರಿಗಳಿಗೆ ಮತ್ತು ರಾಜ್ಯಪಾಲರಿಗೆ ಬಹಳಷ್ಟು ದೊಡ್ಡ ವ್ಯತ್ಯಾಸ ಬಂದಿದೆಯೆಂದು ಹಿರಿಯ ಸದಸ್ಯರಾದ ಮಾನ್ಯ ಸಿಂಧ್ಯ ಸಾಹೇಬರು ಹೇಳಿದರು. ಅವರ ಬಗ್ಗೆ ನನಗೆ ಬಹಳ ಗೌರವ ಇದೆ.

ಅನೇಕ ಸಂದರ್ಭಗಳಲ್ಲಿ ಅವರ ಮಾರ್ಗದರ್ಶನವನ್ನು ಕೂಡ ನಾನು ತೆಗೆದುಕೊಂಡಿದ್ದೇನೆ. ಆದರೆ, ಅವರು ಇವತ್ತು ಯಾವರೀತಿ ಹೇಳುವಂಥಾದ್ದು? ನಾವು ಯಾವುದೇ ಚಾನೆಲ್ ಕಳುಹಿಸಲಿಲ್ಲ. ಅದರ ಬಗ್ಗೆ ಚರ್ಚೆ ಮಾಡಲಿಲ್ಲ. ಯಾವುದೇ ವ್ಯತ್ಯಾಸ ಕೂಡ ಬರಲಿಲ್ಲ ಎನ್ನುವಾಗ, ಯಾರೋ ಪತ್ರಿಕೆಯಲ್ಲಿ ಬರೆದಿದ್ದಾರೆ. ನಿಜ, ನಾನು ಕೂಡ ನೋಡಿದ್ದೇನೆ. ಆದರೆ, ಯಾವುದೇ ರೀತಿಯ ಅಂತಹ ಪ್ರಕ್ರಿಯೆ ನಡೆಯಲೇ ಇಲ್ಲ. ಆದರೆ, ಇಷ್ಟೊಂದು ದೊಡ್ಡ ದೋಷವನ್ನು ಮತ್ತು ಆರೋಪವನ್ನು ನಮ್ಮ ಮೇಲೆ ಮಾಡುವುದು ಸರಿಯಲ್ಲ. ಏಕೆಂದರೆ, ಇವತ್ತು ಇರತಕ್ಕಂಥ ರಾಜ್ಯಪಾಲರು ಬಹಳ ಒಳ್ಳೆಯವರು. ಒಳ್ಳೆಯವರು ಎಂದು ಹೇಳಿದರೆ, ಮಾನವೀಯ ಮೌಲ್ಯಗಳನ್ನು ಇಟ್ಟುಕೊಂಡು ಈ ರಾಜ್ಯದಲ್ಲಿ ಮೊಟ್ಟಮೊದಲನೆಯ ಮಹಿಳಾ ಗವರ್ನರ್ ಆಗಿ ಬಂದಿರತಕ್ಕಂತಾದ್ದು. ಅವರು ಇಲ್ಲಿಯವರೆಗೂ ನಡೆದುಕೊಂಡಿರತಕ್ಕ ರೀತಿ ನೀತಿ, ಜನಗಳ ಜೊತೆ ಸ್ಪಂದಿಸತಕ್ಕಂತಾದ್ದನ್ನು ನೋಡಿದರೆ, ನಮ್ಮೆಲ್ಲರಿಗೂ ಬಹಳ ಸಂತೋಷವಾಗುತ್ತದೆ. ಆದರೆ, ಈ ಸರ್ಕಾರದ ಜವಾಬ್ದಾರಿ ಅಷ್ಟೇ ಇದೆಯೆಂಬುದನ್ನು ನಾವು ಅರಿತುಕೊಂಡಿದ್ದೇವೆ. ಏನೋ ಮಾಡಿದ್ದಾರೆ, ಬಹಳ ದೊಡ್ಡ ಬದಲಾವಣೆ, ಪ್ರಜಾಪ್ರಭುತ್ವಕ್ಕೆ ಕೊಡಲಿಪೆಟ್ಟು ಎಂಬುದಾಗಿ ಬಹಳಷ್ಟು ಜನ ಹೇಳಿದ್ದಾರೆ. ಸ್ವಾಮಿ, ನಾವು ಯಾವ ಕೊಡಲಿಪೆಟ್ಟೂ ಹಾಕಿಲ್ಲ. ಇವತ್ತು ನಾನು ಹೇಳುತ್ತೇನೆ, ಕೇಂದ್ರಸರ್ಕಾರದಲ್ಲಿ ಆಲ್ ಇಂಡಿಯಾ ಟೆಕ್ನಿಕಲ್ ಎಜುಕೇಷನ್ ಕೌನ್ಸಿಲ್‌ನ ಚೇರ್ಮನ್ ಮಾಡುವಾಗ ಈ 250-260 ವಿಶ್ವವಿದ್ಯಾನಿಲಯಗಳನ್ನು ಕಂಟ್ರೋಲ್ ಮಾಡತಕ್ಕಂಥ, ಯೂನಿವರ್ಸಿಟಿ ಗ್ರಾಂಟ್ ಕಮೀಷನ್ನಿನ ಚೇರ್ಮನ್ ಮಾಡುವಾಗ, ಯಾರು ಸ್ವಾಮಿ ಮಾಡುವವರು? ಕೇಂದ್ರ ಸರ್ಕಾರ ಮಾಡುತ್ತದೆ. ಅದಕ್ಕೇ ನಾವು ಈ ಆಕ್ಟನ್ನು ತಂದಿರುವುದು. 250-260 ವಿಶ್ವವಿದ್ಯಾನಿಲಯಗಳ ವೈಸ್-ಚಾನ್ಸಲರ್‌ರವರುಗಳ ಜುಟ್ಟನ್ನು ದೆಹಲಿಯಲ್ಲಿ ಹಿಡಿದುಕೊಳ್ಳುತ್ತಾರಲ್ಲ; ಅಲ್ಲಿ ಚೇರ್ಮನ್ ನೇಮಕ ಮಾಡುವುದು ಕೇಂದ್ರ ಸರ್ಕಾರ. ಅದು ಏನೂ ರಾಜಕೀಯ ಆಗಲಿಲ್ಲ? ಇದು ರಾಜಕೀಯ. ಅಲ್ಲಿ ಆಕ್ಟನಲ್ಲಿ ಪ್ರಾವಿಷನ್ ಇದೆ. ಅದಕ್ಕಾಗಿಯೇ ಆ ಆಕ್ಟಿನ ಪ್ರಾವಿಷನ್ ಇಲ್ಲಿ ತರುತ್ತಿದ್ದೇವೆ.

ಶ್ರೀ ಎ. ರಾಮದಾಸ್ :— ಇಂಟರ್ ಯೂನಿವರ್ಸಿಟಿಗೆ ಸಂಬಂಧಪಟ್ಟಂಥ ಒಂದು ಕಮಿಟಿಯನ್ನು ಮಾಡಿ, ಅದರಲ್ಲಿ ತಾವೇ ಚೇರ್ಮನ್ ಆಗಿದ್ದೀರಿ. ನಾವು ಎಲ್ಲಿಯೂ ಪ್ರಶ್ನೆ ಮಾಡಿಲ್ಲ. ನಾವು ಆ ವಿಚಾರವನ್ನು ಸ್ವಾಗತ ಮಾಡಿದ್ದೇವೆ. ಯು.ಜಿ.ಸಿ.ಯಲ್ಲಿ ಕೇಂದ್ರ ಸರ್ಕಾರ ಮಾಡಿರುವಂಥ ವಿಚಾರ ಇದೆ. ಇಲ್ಲಿಯೂ ಇದನ್ನು ಸ್ವಾಗತ ಮಾಡಿದ್ದೇವೆ. ಆದರೆ, ನಾವು ಹೇಳಿದಂಥ ಒಂದೇ ಒಂದು ಮಾತು, ರಾಜ್ಯಸರ್ಕಾರ ಎನ್ನುವಂಥ ಜಾಗದಲ್ಲಿ, ರಾಜ್ಯಪಾಲರು ಎನ್ನುವುದನ್ನು ಸೇರಿಸಿದರೆ, ಎಲ್ಲವನ್ನೂ ನಾವು ಒಪ್ಪಿಕೊಳ್ಳುತ್ತೇವೆಂಬ ವಿಚಾರವನ್ನು ಹೇಳಿದ್ದೇವೆ.

1.30 ಪಿ.ಎಂ.

ಡಾ: ಜಿ. ಪರಮೇಶ್ವರ್ :— ಮತ್ತೊಂದು ವಿಚಾರವನ್ನು ನನ್ನ ಸಹಾಯಕ್ಕೋಸ್ಕರ ಮಾನ್ಯ ಸದಸ್ಯರಾದ ಸೋಮಶೇಖರ್‌ರವರು ರೆಫರ್ ಮಾಡಿದರು. ಕರ್ನಾಟಕ ರಾಜ್ಯ

ನಾಲ್ಕನೇ ವೇತನ ಆಯೋಗದ ವರದಿಯಲ್ಲಿ ತಿಳಿಸಿರುವ ಅಟಾನಮಿ ಬಗ್ಗೆ ಬಹಳಷ್ಟು ಮಾನ್ಯ ಸದಸ್ಯರು ಮಾತನಾಡುತ್ತಾ, ಯೂನಿವರ್ಸಿಟಿ ಅಟಾನಮಿ ಆಗುತ್ತದೆಂದು ಹೇಳಿದರು.

> ``Universities should be autonomous and their autonomy should be hampered, they should confine mostly with academic matters. This autonomy should not be allowed to be misused for prolifiration of appointments. The Government should exercise direct control over the universities in this matter."

ಅಂದರೆ, ಅಟಾನಮಿ ಎಲ್ಲಿ ಹೋಯಿತು? ಅಟಾನಮಿ ಎಂದರೇನು? ನಾನು ಒಬ್ಬ ಸಚಿವನಾಗಿ, ಪ್ರೊ-ಚಾನ್ಸಲರ್ ಆಗಿ ಹೇಳುವುದಾದರೆ, ವಿಶ್ವವಿದ್ಯಾನಿಲಯದ ಫೈಲ್‌ಗಳು ದಿನನಿತ್ಯವೂ ನನಗೆ ಬರುವುದಿಲ್ಲ. ಯಾವುದೇ ಅಡ್ಮಿನಿಸ್ಟ್ರೇಷನ್‌ನಲ್ಲಿ ಯಾವುದೇ ಅಕಾಡೆಮಿಕ್ ಮ್ಯಾಟರ್ಸ್‌ನಲ್ಲಿ ನಾವು ಭಾಗಿಯಾಗುವುದಿಲ್ಲ. ಹಾಗಿದ್ದರೆ, ಅಟಾನಮಿಯನ್ನು ನಾವು ಯಾವ ರೀತಿ ಕಸಿದುಕೊಂಡಿದ್ದೇವೆ? ಇದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಪಿ.ಜಿ.ಆರ್. ಸಿಂಧ್ಯ, ಮಾನ್ಯ ಸೋಮಶೇಖರ್, ಮಾನ್ಯ ಡಿ.ವಿ. ಸದಾನಂದಗೌಡರು, ಮಾನ್ಯ ವಿಶ್ವೇಶ್ವರ ಹೆಗಡೆಯವರು, ಮಾನ್ಯ ರಾಮದಾಸ್, ಮಾನ್ಯ ಶಂಕರಲಿಂಗೇಗೌಡರು, ಮಾನ್ಯ ವಿ. ಸೋಮಣ್ಣ, ಮಾನ್ಯ ಬಿ.ಆರ್. ನೀಲಕಂಠಪ್ಪ, ಮಾನ್ಯ ಗುರುಸ್ವಾಮಿ, ಮಾನ್ಯ ಕೃಷ್ಣಮೂರ್ತಿ, ಮಾನ್ಯ ಯೋಗೀಶ್‌ಭಟ್ ಸೇರಿದಂತೆ ಇನ್ನೂ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿ ಸೂಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ತಾವೆಲ್ಲರೂ ಮಾತನಾಡುತ್ತಾ ಈ ಮಸೂದೆ ಬಹಳಷ್ಟು ನ್ಯೂನತೆಗಳಿಂದ ಕೂಡಿರುವುದರಿಂದ, [illegible] ಆಗುವುದಕ್ಕೆ ಮಸೂದೆಯನ್ನು ಜಂಟಿ ಸದನ ಸಲಹಾ ಸಮಿತಿಗೆ ವಹಿಸಿಕೊಡಬೇಕೆಂದು ಹೇಳಿದ್ದೀರಿ. ಈ ಮಸೂದೆಯನ್ನು ತರುವುದರ ಮೂಲಕ ನಾವು ಬುಲ್‌ಡೋಜ್ ಮಾಡಿ ಏನೋ ಮಾಡಿಬಿಡುತ್ತೇವೆಂದು ತಾವೇನು ಹೇಳಿದಿರಿ, ಸನ್ಮಾನ್ಯ ಎಸ್.ಎಂ. ಕೃಷ್ಣರವರ ನೇತೃತ್ವದ ಸರ್ಕಾರದಲ್ಲಿರುವ ನಮಗೆ ಪ್ರಜಾಪ್ರಭುತ್ವದಲ್ಲಿ ಬಹಳ ನಂಬಿಕೆ ಇದೆ. ರಾಜ್ಯಪಾಲರಿಗಿದ್ದ ಅಧಿಕಾರವನ್ನು ಕಸಿದುಕೊಂಡು ಮುಖ್ಯಮಂತ್ರಿಗಳಿಗೆ ಕೊಡುತ್ತಿದ್ದೀರೆಂದು ಮಾನ್ಯ ಸದಸ್ಯರಾದ ಸಿಂಧ್ಯರವರು ಹೇಳಿದರೆ, ಮತ್ತೊಂದೆಡೆ ಇದರಲ್ಲೇನೋ ವಿಶೇಷವಾದ ಹಿನ್ನೆಲೆ ಇದೆಯೆಂಬ ಮಾತನ್ನು ಅನೇಕ ಮಾನ್ಯ ಸದಸ್ಯರು ಹೇಳಿದರು. ಆದರೆ, ಇದರಲ್ಲಿ ಅಂತಹ ವಿಶೇಷವಾದ ಹಿನ್ನೆಲೆಯೇನೂ ಇಲ್ಲ ಹಾಗೂ ಮಾನ್ಯ ಮುಖ್ಯಮಂತ್ರಿಗಳಿಗೂ ಇದರಲ್ಲಿ ಯಾವುದೇ ರೀತಿಯಾದ ವಿಶೇಷವಾದ ಹಿತಾಸಕ್ತಿ ಇಲ್ಲವೆಂಬುದನ್ನು ಕರ್ನಾಟಕ ರಾಜ್ಯದ ಜನತೆಗೆ ತೋರಿಸುವ ಸಲುವಾಗಿ ಈ ಮಸೂದೆಯನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ವಹಿಸಿಕೊಡುವುದಕ್ಕೆ ಸರ್ಕಾರದ ಪರವಾಗಿ ನಾನು ಒಪ್ಪಿಕೊಂಡಿದ್ದೇನೆ. ಇವೊತ್ತು ಬಹಳಷ್ಟು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಮಾನ್ಯ ಸದಸ್ಯರಾದ ಸುರೇಶ್‌ಕುಮಾರ್‌ರವರು ಇಲ್ಲಿ ಮಾತನಾಡದೆ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಇದಕ್ಕಾಗಿ ಎಲ್ಲರ ಪರವಾಗಿ ನಾನು ಅವರಿಗೆ

ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಸಂಬಂಧ ರಚಿಸಲಾಗುವ ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಯಾವ್ಯಾವ ಮಾನ್ಯ ಸದಸ್ಯರುಗಳಿರುತ್ತಾರೆಂಬ ಪಟ್ಟಿಯನ್ನು ನಾವು ಸರ್ಕಾರದ ವತಿಯಿಂದ ಅನಂತರ ಮಾನ್ಯ ಅಧ್ಯಕ್ಷರಿಗೆ ತಲುಪಿಸುತ್ತೇವೆ. ಕೊನೆಯದಾಗಿ, ನನ್ನ ಪ್ರಾರ್ಥನೆ ಇಷ್ಟೆ; ಇಡೀ ರಾಷ್ಟ್ರದಲ್ಲಿ ಇವತ್ತು ಕರ್ನಾಟಕ ರಾಜ್ಯದ ಶಿಕ್ಷಣ ಪದ್ಧತಿ ಯಾವ ರೀತಿಯಲ್ಲಿ ಮಾದರಿಯಾಗಿದೆ, ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಸದಸ್ಯರಾಗುವವರೆಲ್ಲರೂ ಕೂಡ ಮನಸ್ಸಿನಲ್ಲಿಟ್ಟುಕೊಂಡು ತಮ್ಮ ಸಲಹೆ-ಸೂಚನೆಗಳನ್ನು ಕೊಡಬೇಕೆಂದು ಮನವಿ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಸದರಿ ವಿಧೇಯಕದ ಮೇಲೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಇದರ ಬಗ್ಗೆ ರಾಜ್ಯಾದ್ಯಂತ ಚರ್ಚೆಯಾಗಬೇಕೆಂದು ಹಾಗೂ ಪರಿಶೀಲನೆಗಾಗಿ ವಿಧೇಯಕವನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ವಹಿಸಿಕೊಡಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದೆ. ಈ ವಿಧೇಯಕ ಪರಿಪೂರ್ಣವಾಗಬೇಕೆಂಬ ಮಾನ್ಯ ಸಚಿವರ ಉದ್ದೇಶವೇನಿದೆ, ಈ ಕುರಿತು ಮಾತನಾಡಿರುವ ಎಲ್ಲಾ ಮಾನ್ಯ ಸದಸ್ಯರ ವಿಚಾರಗಳಿಗೆ ಸ್ಪಂದಿಸಿ ಅವರು ವಿಧೇಯಕವನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ವಹಿಸಿಕೊಡಲು ಒಪ್ಪಿರುವುದು ನನಗೆ ಬಹಳ ಸಂತೋಷವಾಗಿದೆ. ಇದಕ್ಕಾಗಿ ನಾನು ಅವರಿಗೆ ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

3. ಅಧ್ಯಕ್ಷರ ಅಪ್ಪಣೆ ಮೇರೆಗೆ

(1) ಬಿಜಾಪುರ ಡಿ.ಸಿ.ಸಿ. ಬ್ಯಾಂಕಿನಲ್ಲಿನ ನೇಮಕಾತಿ ಕುರಿತು

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಮತ್ತೊಂದು ವಿಚಾರವೇನೆಂದರೆ ಮಾನ್ಯ ಸಹಕಾರ ಸಚಿವರಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಸದನದಲ್ಲಿದ್ದು, ಅವರ ಗಮನಕ್ಕೆ ಒಂದು ವಿಚಾರ ತರುವುದೇನೆಂದರೆ, ಬಿಜಾಪುರದ ಡಿ.ಸಿ.ಸಿ. ಬ್ಯಾಂಕಿಗೆ ಸಂಬಂಧಿಸಿದಂತೆ ಕಳೆದ ಒಂದು ವಾರದಿಂದಲೂ ಸಮಸ್ಯೆಯುಂಟಾಗಿದೆ. ಅಲ್ಲಿ ನೇಮಕಾತಿ ಬಂದ್ ಆಗಿದ್ದು, ನೇಮಕಾತಿಗೆ ತಡೆಯಾಜ್ಞೆ ಕೊಟ್ಟಿದ್ದಾರೆ. ಈ ವಿಷಯವನ್ನು ಮೊನ್ನೆ ದಿವಸವೇ ಪ್ರಸ್ತಾಪಿಸಲಾಗಿತ್ತು. ಇಡೀ ರಾಜ್ಯದ ಯಾವುದೇ ಜಿಲ್ಲೆಯ ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ಇಂತಹ ಸಮಸ್ಯೆ ಇರದೇ ಬಿಜಾಪುರದ ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ಮಾತ್ರ ಇದ್ದು, ಇದರ ಬಗ್ಗೆ ಮಾನ್ಯ ಸದಸ್ಯರಾದ ಪಾಟೀಲ್ ಶಿವಾನಂದ ಸಿದ್ರಾಮಗೌಡರವರು ಪತ್ರ ಬರೆದಿದ್ದರೂ ಉತ್ತರ ಬಂದಿರುವುದಿಲ್ಲ; ಏನೂ ಕ್ರಮ ಕೈಗೊಂಡಿರುವುದಿಲ್ಲ, ಅಲ್ಲಿ ಬಹಳಷ್ಟು ಅನ್ಯಾಯವಾಗುತ್ತಿದೆಯೆಂದು ಅವರು ಹೇಳುತ್ತಿರುವುದರಿಂದ, ಮಾನ್ಯ ಸಹಕಾರ ಸಚಿವರಾಗಿರುವ ತಮ್ಮ ಕಾರ್ಯ ವ್ಯಾಪ್ತಿಗೆ ಇದು ಒಳಪಡುವುದರಿಂದ ಕೊಟ್ಟಿರುವ ತಡೆಯಾಜ್ಞೆಯನ್ನು ತೆರವುಗೊಳಿಸಿ ಅಲ್ಲಿ ನೇಮಕಾತಿಯಾಗುವಂತೆ ಕ್ರಮ ಕೈಗೊಳ್ಳಬೇಕು.